Kerala Gazette No. 27 dated 7th July 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

ನಂಬ್ರ 8558/ಲೆಗ್. ಜಿ2/2014/ಕಾನೂನು. ತಿರುವನಂತಪುರಂ, 2015 ಅಗಸ್ಟ್ 31 / 1191 ಸಿಂಹ 15/ 1937 ಬಾದ್ರಪದ 9.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನ ಸಭೆಯು ಮಂಜೂರುಮಾಡಿದಂತಹ ಮಸೂದೆಗೆ 2015 ಆಗಸ್ಟ್ 31ನೇ ದಿನಾಂಕದಂದು ರಾಜ್ಯಪಾಲರ ಅಂಗಿಕಾರ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಎಸ್. ಕುಮಾರಿ ಸುಧ**

ವಿಶೇಷ ಕಾರ್ಯದರ್ಶಿ (ಕಾನೂನು).

## 2015ರ 17ನೇ ಅಧಿನಿಯಮ

# 2015ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ

ಕೇರಳ ರಾಜ್ಯದಲ್ಲಿ ತಾಂತ್ರಿಕ ವಿಜ್ಞಾನ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೂ ಏಕೀಕರಿಸುವುದಕ್ಕೂ ಬೇಕಾಗಿರುವ

ಒಂದು

ಅಧಿನಿಯಮ

ಪೀಠಿಕೆ.—ಕೇರಳ ರಾಜ್ಯದಲ್ಲಿ ತಾಂತ್ರಿಕ ವಿಜ್ಞಾನ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕಾಗಿಯೂ ಅದಕ್ಕೆ ಸಂಬಂಧಿಸಿದ ಅಥವಾ ಆನುಷಾಂಗಿಕವಾದ ವಿಷಯಗಳಿಗಾಗಿಯೂ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಹಾಗೂ ಏಕೀಕರಿಸುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತಾರನೇ ವರ್ಷದಲ್ಲಿ, ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

## ಅಧ್ಯಾಯ I

## ಪ್ರಾರಂಭ

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮಕ್ಕೆ 2015ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ ಎಂದು ಹೇಳಬಹುದು.

(2) ಇದು 2014 ಮೇ 5ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ನಿರ್ವಚನೆಗಳು.—ಈ ಅಧಿನಿಯಮದಲ್ಲಿ, ಸಂದರ್ಭವು ಇತರ ರೀತಿಯಲ್ಲಿ ಅಗತ್ಯಪಡದಿದ್ದಲ್ಲಿ,—

(ಎ) "ಶೈಕ್ಷಣಿಕ ಸ್ವಾಯತ್ತತೆ" ಎಂದರೆ ಈ ಅಧಿನಿಯಮದ, ಶಾಸನಗಳ ಹಾಗೂ ಆರ್ಡಿನನ್ಸುಗಳ ಉಪಬಂಧಗಳಿಗೆ ಅನುಸಾರವಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಎಂಜಿನೀಯರಿಂಗ್ ಕೋರ್ಸುಗಳಲ್ಲಿನ ವಿವಿಧ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಪಠ್ಯಕ್ರಮವನ್ನು ಅಭಿವೃದ್ಧಿಗೊಳಿಸಲು ಹಾಗೂ ಶಿಕ್ಷಣಕ್ಕೂ ಮೌಲ್ಯಮಾಪನಕ್ಕೂ ಬೇಕಾದ ರೀತಿಗಳನ್ನು ಆಯೋಜಿಸಲು ವಿಶ್ವವಿದ್ಯಾಲಯದ ಒಂದು ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ, ಪ್ರಮಾಣ ಪತ್ರ ಅಥವಾ ಅದೇ ರೀತಿಯ ಇತರ ಬಿರುದುಗಳನ್ನು ಹಾಗೂ ಗೌರವ ಪದವಿಗಳನ್ನು ನೀಡುವುದಕ್ಕಾಗಿ ಪರೀಕ್ಷೆಗಳನ್ನು ನಡೆಸಲು, ವಿಶ್ವವಿದ್ಯಾಲಯದ ಒಂದು ಕಾಲೇಜನ್ನೋ, ಸಂಸ್ಥೆಯನ್ನೋ ಅಥವಾ ವಿಭಾಗವನ್ನೋ ಅನುಮತಿಸುವುದಕ್ಕೆ ವಿಶ್ವವಿದ್ಯಾಲಯಕ್ಕೆ ರೆಗ್ಯುಲೇಶನುಗಳ ಮೂಲಕ ನೀಡಲ್ಪಟ್ಟ ವಿಶೇಷಾಧಿಕಾರ ಎಂದರ್ಥವಾಗುವುದು;

(ಬಿ) "ಶೈಕ್ಷಣಿಕ ಸಮಿತಿ" ಎಂದರೆ 31ನೇ ವಿಭಾಗದ ಕೆಳಗೆ ರೂಪೀಕರಿಸಲ್ಪಟ್ಟ, ವಿಶ್ವವಿದ್ಯಾಲಯದ ಶೈಕ್ಷಣಿಕ ಸಮಿತಿ ಎಂದರ್ಥ;

(ಸಿ) "ಸಂಯೋಜಿಸಲ್ಪಟ್ಟ ಕಾಲೇಜು ಅಥವಾ ಸಂಸ್ಥೆ" ಎಂದರೆ, ತಾಂತ್ರಿಕ ಶಿಕ್ಷಣವನ್ನು ನೀಡುವ ಹಾಗೂ ಈ ಅಧಿನಿಯುಮದ ಹಾಗೂ ಶಾಸನಗಳ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟಿರುವ ಒಂದು ಕಾಲೇಜು ಅಥವಾ ಸಂಸ್ಥೆ ಎಂದರ್ಥ;

(ಡಿ) "ಏಡೆಡ್ ಕಾಲೇಜು ಅಥವಾ ಸಂಸ್ಥೆ" ಎಂದರೆ, ಅದರ ಸಿಬ್ಬಂದಿಗಳಿಗೆ ಸಂಬಳ ಹಾಗೂ ಭತ್ತೆಗಳನ್ನು ನೀಡುವುದಕ್ಕಾಗಿ ಸರಕಾರದಿಂದ ಫಂಡುಗಳು ಲಭಿಸಲು ಅರ್ಹತೆಯಿರುವ ಒಂದು ಖಾಸಗಿ ಕಾಲೇಜು ಅಥವಾ ಸಂಸ್ಥೆ ಎಂದರ್ಥ;

(ಇ) "ಎ. ಐ. ಸಿ. ಟಿ. ಇ." ಎಂದರೆ, 1987ರ ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಪರಿಷತ್ತು ಅಧಿನಿಯಮ (1987ರ 52ನೇ ಕೇಂದ್ರ ಅಧಿನಿಯಮ)ದ ಕೆಳಗೆ ಸ್ಥಾಪಿಸಲ್ಪಟ್ಟ ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಪರಿಷತ್ತು ಎಂದರ್ಥ;

(ಎಫ್) "ಪ್ರಾಧಿಕಾರಗಳು" ಎಂದರೆ, 22ನೇ ವಿಭಾಗದಲ್ಲಿ ಉಪಬಂಧಿಸಿದ ಪ್ರಕಾರದ ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಎಂದರ್ಥ;

(ಜಿ) "ಸ್ವಾಯತ್ತ ಕಾಲೇಜು" ಎಂದರೆ, ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸುಗಳ, ಹಾಗೂ ರೆಗ್ಯುಲೇಷನುಗಳ ಉಪಬಂಧಗಳಿಗನುಸಾರವಾಗಿ ಬೋಧನೆಯನ್ನು ನೀಡುವ ಹಾಗೂ ಈ ಅಧಿನಿಯಮದ, ಶಾಸನಗಳ ಹಾಗೂ ಉಪಬಂಧಗಳಿಗನುಸಾರವಾಗಿ ಸ್ವಾಯತ್ತ ಕಾಲೇಜು ಎಂದು ಗೊತ್ತುಪಡಿಸಿದ ಒಂದು ಕಾಲೇಜು ಎಂದರ್ಥ;

(ಎಚ್) "ಬೋರ್ಡ್ ಆಫ್ ಗವರ್ನರ್ಸ್" ಎಂದರೆ ವಿಶ್ವವಿದ್ಯಾಲಯದ ಬೋರ್ಡ್ ಆಫ್ ಗವರ್ನರ್ಸ್ ಎಂದರ್ಥ;

(ಐ) "ಅಧ್ಯಯನ ಶಾಖೆ" ಎಂದರೆ, ಎಂಜಿನಿಯರಿಂಗ್ ವಿಜ್ಞಾನ, ತಾಂತ್ರಿಕ ವಿಜ್ಞಾನ, ಮ್ಯಾನೇಜ್‌ಮೆಂಟ್ ಇತ್ಯಾದಿಗಳಲ್ಲಿ ವಿಶ್ವವಿದ್ಯಾಲಯವು ಪ್ರಖ್ಯಾಪಿಸಿದಂತಹ ಹಾಗೂ ಶಾಸನಗಳ ಹಾಗು, ಆರ್ಡಿನನ್ಸ್‌ಗಳ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯದ ಒಂದು ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ, ಪ್ರಮಾಣ ಪತ್ರ ಅಥವಾ ಅಂತಹ ಇತರ ಬಿರುದುಗಳನ್ನು ಹಾಗೂ ಗೌರವ ಪದವಿಗಳನ್ನು ನೀಡುವ ಒಂದು ವಿಶೇಷ ಅಧ್ಯಯನ ಕೋರ್ಸ್ ಎಂದರ್ಥ;

(ಜೆ) "ಕುಲಾಧಿಪತಿ" ಎಂದರೆ, ವಿಶ್ವವಿದ್ಯಾಲಯದ ಕುಲಾಧಿಪತಿ ಎಂದರ್ಥ;

(ಕೆ) "ಕಾನ್‌ಸ್ಟಿಟ್ಯೂವಂಟ್ ಕಾಲೇಜು" ಎಂದರೆ ವಿಶ್ವವಿದ್ಯಾಲಯವು ನಡೆಸುವ ಹಾಗೂ ಕಾರ್ಯನಿರ್ವಹಣೆಯನ್ನು ವಹಿಸುವುದಾದ ಒಂದು ಕಾಲೇಜು ಎಂದರ್ಥ;

(ಎಲ್) "ಡೀನ್ (ಶೈಕ್ಷಣಿಕ)" ಎಂದರೆ ವಿಶ್ವವಿದ್ಯಾಲಯದ ಡೀನ್ (ಶೈಕ್ಷಣಿಕ) ಎಂದರ್ಥ;

(ಎಂ) "ಡೀನ್ (ಸಂಶೋಧನೆ)" ಎಂದರೆ ವಿಶ್ವವಿದ್ಯಾಲಯದ ಡೀನ್ (ಸಂಶೋಧನೆ) ಎಂದರ್ಥ;

(ಎನ್) "ಶೈಕ್ಷಣಿಕ ಏಜನ್ಸಿ" ಎಂದರೆ ಒಂದು ಖಾಸಗಿ ಎಂಜಿನೀಯರಿಂಗ್ ಕಾಲೇಜನ್ನು ಅಥವಾ ಒಂದಕ್ಕಿಂತ ಹೆಚ್ಚು ಖಾಸಗಿ ಎಂಜಿನೀಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿ ಹಾಗೂ ನಡೆಸುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಎಂದರ್ಥ;

(ಒ) "ಎಂಜಿನಿಯರಿಂಗ್ ಕಾಲೇಜು" ಎಂದರೆ, ಈ ಅಧಿನಿಯಮದ, ಶಾಸನಗಳ ಆರ್ಡಿನನ್ಸ್‌ಗಳ, ರೆಗ್ಯುಲೇಷನುಗಳ ಉಪಬಂಧಗಳಿಗನುಸಾರವಾಗಿ ಅಂಡರ್ ಗ್ರಾಜುಯೇಟ್, ಪದವಿ, ಸ್ನಾತಕೋತ್ತರ ಪದವಿ, ಸಂಶೋಧನಾ ಹಂತಗಳಲ್ಲಿ ಎಂಜಿನಿಯರಿಂಗ್ ಕೋರ್ಸುಗಳನ್ನು ಎ. ಐ. ಸಿ. ಟಿ. ಇ-ಯ ನಿಯಮಗಳಿಗೆ, ಮಾರ್ಗನಿರ್ದೇಶನಗಳಿಗೆ ಹಾಗೂ ಪ್ರಕ್ರಿಯೆಗಳಿಗನುಸಾರವಾಗಿಯೂ, ಅಂಗೀಕಾರದಿಂದಲೂ ನಡೆಸುವ ಹಾಗೂ ನಿರ್ದೇಶಿಸುವ ಹಾಗೂ ಪ್ರವರ್ತಿಸುವುದಾದ ಒಂದು ಸಂಸ್ಥೆ ಎಂದರ್ಥ;

(ಪಿ) "ಎಂಜಿನಿಯರಿಂಗ್ ಕೋರ್ಸ್" ಎಂದರೆ ಅಂಡರ್ ಗ್ರಾಜುಯೇಟ್, ಪದವಿ, ಸ್ನಾತಕೋತ್ತರ ಪದವಿ ಅಥವಾ ಸಂಶೋಧನಾ ಹಂತಗಳಲ್ಲಿ ಒಂದು ಎಂಜಿನೀಯರಿಂಗ್ ಕಾಲೇಜು ನಡೆಸುವ ಒಂದು ಅಧ್ಯಯನ ಕೋರ್ಸ್ ಎಂದರ್ಥ;

(ಕ್ಯೂ) "ಕಾರ್ಯನಿರ್ವಾಹಕ ಸಮಿತಿ" ಎಂದರೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಾಹಕ ಸಮಿತಿ ಎಂದರ್ಥ;

(ಆರ್) "ಫ್ಯಾಕಲ್ಟಿ" ಎಂದರೆ ವಿಶ್ವವಿದ್ಯಾಲಯದ ಅಥವಾ ಅದಕ್ಕೆ ಸಂಯೋಜನೆ ಮಾಡಿರುವ ಕಾಲೇಜುಗಳ ಅಥವಾ ಸಂಸ್ಥೆಗಳ ಅಧ್ಯಾಪಕರು ಎಂದರ್ಥ;

(ಎಸ್) "ಸರಕಾರ" ಎಂದರೆ ಕೇರಳ ಸರಕಾರ ಎಂದರ್ಥ;

(ಟಿ) "ಸರಕಾರ ನಿಯಂತ್ರಿತ ಸ್ವಸಹಾಯ ಕಾಲೇಜು" ಎಂದರೆ ಸರಕಾರದಿಂದ ಫಂಡನ್ನು ಸ್ವೀಕರಿಸುತ್ತಾ ಶಾಸನಗಳ ಆರ್ಡಿನನ್ಸ್‌ಗಳ, ರೆಗ್ಯುಲೇಷನುಗಳ ಉಪಬಂಧಗಳಿಗನುಸಾರವಾಗಿ ಬೋಧನೆಯನ್ನು ನೀಡುತ್ತಿರುವಂತಹ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟಿರುವ ಒಂದು ಕಾಲೇಜು ಎಂದರ್ಥ;

(ಯು) "ಸರಕಾರಿ ಕಾಲೇಜು" ಎಂದರೆ ಸರಕಾರ ನಡೆಸುವ ಹಾಗೂ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟಿರುವ ಒಂದು ಕಾಲೇಜು ಎಂದರ್ಥ;

(ವಿ) "ಹಾಸ್ಟೆಲ್" ಎಂದರೆ ಈ ಅಧಿನಿಯಮದ ಹಾಗೂ ಶಾಸನಗಳ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯವು ನಡೆಸುವ ಅಥವಾ ಅಂಗೀಕರಿಸಿದಂತಹ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿಗಾಗಿರುವ ಒಂದು ಘಟಕ ಎಂದರ್ಥ;

(ಡಬ್ಲ್ಯೂ) "ಅಧಿಕಾರಿ" ಎಂದರೆ ಈ ಅಧಿನಿಯಮದ III-ನೇ ಅಧ್ಯಾಯದಲ್ಲಿ ನಿಗದಿಪಡಿಸಿರುವ ವಿಶ್ವವಿದ್ಯಾಲಯದ ಅಧಿಕಾರಿ ಅಥವಾ ಶಾಸನಗಳ ಪ್ರಕಾರ ಅಧಿಕಾರಿಯೆಂದು ಗೊತ್ತುಪಡಿಸಿರುವ ಇತರ ಯಾವುದೇ ವ್ಯಕ್ತಿ ಎಂದರ್ಥ;

(ಎಕ್ಸ್) "ಆದೇಶಗಳು" ಎಂದರೆ, ವಿಶ್ವವಿದ್ಯಾಲಯವು ಹೊರಡಿಸಿದ ಆದೇಶಗಳು ಎಂದರ್ಥ;

(ವೈ) "ಆರ್ಡಿನನ್ಸುಗಳು" ಎಂದರೆ ಈ ಅಧಿನಿಯಮದ ನಿಬಂಧನೆಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯವು ರಚಿಸಿರುವ ಆರ್ಡಿನನ್ಸುಗಳು ಎಂದರ್ಥ;

(ಝಡ್) “ನಿರ್ಧರಿಸಲ್ಪಟ್ಟ” ಎಂದರೆ ಈ ಅಧಿನಿಯಮದ ಕೆಳಗೆ ರಚಿಸಲ್ಪಟ್ಟ ಶಾಸನೆಗಳಿಂದಲೋ ಆರ್ಡಿನನ್ಸುಗಳಿಂದಲೋ ರೆಗ್ಯುಲೇಷನುಗಳಿಂದಲೋ ನಿರ್ಧರಿಸಲ್ಪಟ್ಟ ಎಂದರ್ಥ;

(ಝಡ್ ಎ) “ಪ್ರಾಂಶುಪಾಲರು” ಎಂದರೆ, ಒಂದು ಕಾಲೇಜಿನ ಮುಖ್ಯಾಧಿಕಾರಿ ಎಂದರ್ಥ;

(ಝಡ್ ಬಿ) “ಖಾಸಗಿ ಕಾಲೇಜು” ಎಂದರೆ, ಸರಕಾರ ಅಥವಾ ವಿಶ್ವವಿದ್ಯಾಲಯವಲ್ಲದ ಒಂದು ಶಿಕ್ಷಣ ಏಜನ್ಸಿಯನ್ನು ನಡೆಸುವ ಹಾಗೂ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟ ಒಂದು ಕಾಲೇಜು ಎಂದರ್ಥ;

(ಝಡ್ ಸಿ) “ಸಹ-ಕುಲಾಧಿಪತಿ” ಎಂದರೆ, ವಿಶ್ವವಿದ್ಯಾಲಯದ ಸಹ-ಕುಲಾಧಿಪತಿ ಎಂದರ್ಥ;

(ಝಡ್ ಡಿ) “ಉಪ-ಸಹ-ಕುಲಾಧಿಪತಿ” ಎಂದರೆ, ವಿಶ್ವವಿದ್ಯಾಲಯದ ಉಪ-ಸಹ-ಕುಲಾಧಿಪತಿ ಎಂದರ್ಥ;

(ಝಡ್ ಇ) “ಕುಲಸಚಿವ” ಎಂದರೆ, ವಿಶ್ವವಿದ್ಯಾಲಯದ ಕುಲಸಚಿವ ಎಂದರ್ಥ;

(ಝಡ್ ಎಫ್) “ರೆಗ್ಯುಲರ್ ಕಾಲೇಜು” ಎಂದರೆ ಈ ಅಧಿನಿಯಮದ ಶಾಸನಗಳ ಉಪಬಂಧಗಳಿಗನುಗುಣವಾಗಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ್ಟಿದ್ದು ಮತ್ತು ಶಾಸನಗಳ ಅರ್ಡಿನನ್ಸುಗಳ ಹಾಗೂ ರೆಗ್ಯುಲೇಶನುಗಳ ಉಪಬಂಧಗಳಿಗನುಗುಣವಾಗಿ ಬೋಧನೆಯನ್ನು ನೀಡುವಂತಹ ಒಂದು ಕಾಲೇಜ್ ಎಂದರ್ಥ;

(ಝಡ್ ಜಿ) “ರೆಗ್ಯುಲೇಶನುಗಳು” ಎಂದರೆ ಈ ಅಧಿನಿಯಮದ ಅಧೀನದಲ್ಲಿ ಮಾಡಿರುವಂತಹ ವಿಶ್ವವಿದ್ಯಾಲಯದ ರೆಗ್ಯುಲೇಶನ್‌ಗಳು ಎಂದರ್ಥ;

(ಝಡ್ ಎಚ್) “ಶಾಸನಗಳು” ಎಂದರೆ ಈ ಅಧಿನಿಯಮದ ಅಧೀನದಲ್ಲಿ ಮಾಡಿರುವಂತಹ ವಿಶ್ವವಿದ್ಯಾಲಯದ ಶಾಸನಗಳು ಎಂದರ್ಥವಾಗಿದೆ;

(ಝಡ್ ಐ) “ಪರಿಶಿಷ್ಠ ಜಾತಿಗಳು” ಎಂಬುದಕ್ಕೆ, ಭಾರತದ ಸಂವಿಧಾನದ 366ನೇ ಅನುಚ್ಛೇದದ (24)ನೇ ಖಂಡದಲ್ಲಿ ಅದಕ್ಕೆ ನೀಡಿರುವಂತಹ ಅದೇ ಅರ್ಥವಿರುವುದು;

(ಝಡ್ ಜೆ) "ಪರಿಶಿಷ್ಟ ಪಂಗಡಗಳು" ಎಂಬುವುದಕ್ಕೆ ಭಾರತದ ಸಂವಿಧಾನದ 366ನೇ ಅನುಚ್ಛೇದದ (25)ನೇ ಖಂಡದಲ್ಲಿ ಅದಕ್ಕೆ ನೀಡಿರುವಂತಹ ಅದೇ ಅರ್ಥವಿರುವುದು;

(ಝಡ್ ಕೆ) "ರಾಜ್ಯ" ಎಂದರೆ ಕೇರಳ ರಾಜ್ಯ ಎಂದರ್ಥ;

(ಝಡ್ ಎಲ್) "ವಿದ್ಯಾರ್ಥಿ" ಎಂದರೆ, ವಿಶ್ವವಿದ್ಯಾಲಯ ನೀಡುವ ಒಂದು ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮ, ಸರ್ಟಿಫಿಕೇಟ್ ಅಥವಾ ಇತರ ಶೈಕ್ಷಣಿಕ ಬಿರುದುಗಳನ್ನು ಪಡೆಯುವುದಕ್ಕಾಗಿರುವ ಎಂಜಿನಿಯರಿಂಗ್ ಕೋರ್ಸ್‌ನ್ನು ಕಲಿಯುವುದಕ್ಕಾಗಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿಸಲ್ಪಟ್ಟ ಒಂದು ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ, ಅಥವಾ ಒಂದು ಸಂಸ್ಥೆಯಲ್ಲಿ ಯಥಾಪ್ರಕಾರ ಪ್ರವೇಶ ಪಡೆದಿರುವ ಮತ್ತು ಮುಂದುವರಿಯುತ್ತಿರುವ ಒಬ್ಬ ವ್ಯಕ್ತಿ ಎಂದರ್ಥ;

(ಝಡ್ ಎಮ್) "ಅಧ್ಯಾಪಕ" ಎಂದರೆ ಬೋಧನೆಯನ್ನು ನೀಡುವುದಕ್ಕೋ ಸಂಶೋಧನೆ ಅಥವಾ ಇತರ ಯಾವುದಾದರೂ ಪ್ರೋಜೆಕ್ಟ್ ಅಥವಾ ಯೋಜನೆಗಳನ್ನು ನಡೆಸುವುದಕ್ಕೆ ಮತ್ತು ಮಾರ್ಗದರ್ಶನ ನೀಡುವುದಕ್ಕಾಗಿ ವಿಶ್ವವಿದ್ಯಾಲಯವು ನಿಯಮಿಸಿದ ಅಥವಾ ಅಂಗೀಕರಿಸಿದಂತಹ ವ್ಯಕ್ತಿ ಎಂದರ್ಥವಾಗಿದ್ದು ಅದರಲ್ಲಿ ಅಧ್ಯಾಪಕನೆಂದು ಶಾಸನಗಳ ಮೂಲಕ ಘೋಷಿಸಲ್ಪಡಬಹುದಾದಂತಹ ಬೇರೆ ಯಾವುದಾದರೂ ವ್ಯಕ್ತಿಯೂ ಕೂಡ ಒಳಗೊಳ್ಳುವರು;

(ಝಡ್ ಎನ್) "ಅನುದಾನ ರಹಿತ ಕಾಲೇಜು" ಎಂದರೆ ಸರಕಾರದಿಂದ ಅಥವಾ ವಿಶ್ವವಿದ್ಯಾಲಯದಿಂದ ಯಾವುದೇ ಧನ ಸಹಾಯವನ್ನು ಪಡೆಯಲು ಅರ್ಹತೆಯಿಲ್ಲದ ಒಂದು ಖಾಸಗಿ ಕಾಲೇಜು ಎಂದರ್ಥ;

(ಝಡ್ ಒ) "ಯೂನಿಟರಿ ಮ್ಯಾನೇಜ್‌ಮೆಂಟ್" ಎಂದರೆ ಏಕ ಖಾಸಗಿ ಕಾಲೇಜು ನಡೆಸುವ ಒಂದು ಶೈಕ್ಷಣಿಕ ಏಜನ್ಸಿ ಎಂದರ್ಥ;

(ಝಡ್ ಪಿ) "ವಿಶ್ವವಿದ್ಯಾಲಯ" ಎಂದರೆ, ಈ ಅಧಿನಿಯಮದ ಅಧೀನದಲ್ಲಿ ಸ್ಥಾಪಿಸಲ್ಪಟ್ಟ ಹಾಗೂ ಏಕೀಕೃತಗೊಳಿಸಲ್ಪಟ್ಟ ಎ.ಪಿ.ಜೆ ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಎಂದರ್ಥ;

(ಝಡ್ ಕ್ಯು) "ವಿಶ್ವವಿದ್ಯಾಲಯ ನಿಧಿ" ಎಂದರೆ 50ನೇ ವಿಭಾಗದಡಿಯಲ್ಲಿ ರೂಪೀಕರಿಸಲ್ಪಟ್ಟ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ನಿಧಿ ಎಂದರ್ಥ;

(ಝಡ್ ಆರ್) "ಕುಲಪತಿ" ಎಂದರೆ ವಿಶ್ವವಿದ್ಯಾಲಯದ ಕುಲಪತಿ ಎಂದರ್ಥ.

## ಅಧ್ಯಾಯ II

# ವಿಶ್ವವಿದ್ಯಾಲಯ

3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಏಕೀಕರಣ.—(1) "ಎ.ಪಿ.ಜೆ ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ" ಎಂಬ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದಾಗಿದ್ದು ಹಾಗು ಅದರಲ್ಲಿ ಈ ಅಧಿನಿಯಮದ ಉಪಬಂಧದ ಪ್ರಕಾರ ಒಂದು ಕುಲಾಧಿಪತಿ, ಒಂದು ಸಹ-ಕುಲಾಧಿಪತಿ, ಒಂದು ಕುಲಪತಿ, ಒಂದು ಉಪ ಸಹ-ಕುಲಾಧಿಪತಿ, ಒಂದು ಕಾರ್ಯನಿರ್ವಾಹಕ ಸಮಿತಿ, ಶೈಕ್ಷಣಿಕ ಸಮಿತಿ, ಸಂಶೋಧನಾ ಮಂಡಳಿ ಹಾಗೂ ಇತರ ಪ್ರಾಧಿಕಾರಗಳು, ಅಧಿಕಾರಿಗಳು ಎಂಬಿವರು ಒಳಗೊಂಡಿರ ತಕ್ಕದ್ದಾಗಿರುತ್ತದೆ.

(2) ವಿಶ್ವವಿದ್ಯಾಲಯವು, ಶಾಶ್ವತವಾದ ಉತ್ತರಾಧಿಕಾರ ಸ್ಥಾನ ಹೊಂದಿದ್ದು ಹಾಗೂ ಸಾಮಾನ್ಯ ಮುದ್ರೆಯನ್ನು ಹೊಂದಿದ ಒಂದು ಏಕೀಕೃತ ನಿಕಾಯವಾಗಿರುವುದಲ್ಲದೆ ಪ್ರಸ್ತುತ ಹೆಸರಲ್ಲಿ ವ್ಯವಹರಿಸುವುದು ಮತ್ತು ವ್ಯವಹರಿಸಲ್ಪಡತಕ್ಕದ್ದಾಗಿರುತ್ತದೆ.

(3) ವಿಶ್ವವಿದ್ಯಾಲಯಕ್ಕೆ ಅದರ ಅವಶ್ಯಕತೆಗಳಿಗಾಗಿ ಸ್ಥಿರ ಹಾಗೂ ಚರ ಆಸ್ತಿಗಳನ್ನು ಅರ್ಜಿಸಲು ಮತ್ತು ಹೊಂದಲು ಹಾಗೂ ವಿಶ್ವವಿದ್ಯಾಲಯದ ಅವಶ್ಯಕತೆಗಾಗಿ ಅದರಲ್ಲಿ ನಿಹಿತವಾಗಿರುವ ಅಥವಾ ಅದು ಅರ್ಜಿಸಿರುವಂತಹ ಸ್ಥಿರ ಮತ್ತು ಚರಾಸ್ತಿಗಳಾದಂತಹ ಯಾವುದೇ ಆಸ್ತಿಯನ್ನು ವಿಶ್ವವಿದ್ಯಾಲಯದ ಸೂಕ್ತ ಅಗತ್ಯಕ್ಕಾಗಿ ಅಥವಾ ಅದರ ಅಭಿವೃದ್ಧಿ ಗುರಿಯಾಗಿಸಿಕೊಂಡಿರುವ ಒಂದು ಕಾರ್ಯಕ್ಕಾಗಿ ಸರಕಾರದ ಲಿಖಿತ ಪೂರ್ವಾನುಮತಿಯನ್ನು ಪಡೆದ ನಂತರ, ಗೇಣಿಗೆ ನೀಡುವುದೋ ಮಾರಾಟ ಮಾಡುವುದೋ ಅಥವಾ ಬೇರೆ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ರಾಜ್ಯ ಸರಕಾರದಿಂದಲೋ ಕೇಂದ್ರ ಸರಕಾರದಿಂದಲೋ ಅಥವಾ ಇತರ ರಾಜ್ಯ ಸರಕಾರದಿಂದಲೋ ಕಾನೂನುಬದ್ಧವಾಗಿ ರೂಪೀಕರಿಸಿರುವ ಯಾವುದಾದರೂ ಏಕೀಕೃತ ನಿಕಾಯದಿಂದಲೋ ಹಣವನ್ನು ಸಾಲವಾಗಿ ಪಡೆಯಲು ಹಾಗೂ ಕರಾರು ಮಾಡಲು ಮತ್ತು ಈ ಅಧಿನಿಯಮದ ಎಲ್ಲಾ ಉದ್ದೇಶಕ್ಕಾಗಿ ಬೇಕಾದ ಬೇರೆ ಎಲ್ಲಾ ಕಾರ್ಯಗಳನ್ನು ಮಾಡಲು ಅರ್ಹತೆ ಇರುವುದಾಗಿರುತ್ತದೆ.

(4) ವಿಶ್ವವಿದ್ಯಾಲಯಕ್ಕಾಗಿ ಅಥವಾ ಅದರ ವಿರುದ್ದವಾಗಿ ಇರುವಂತಹ ಎಲ್ಲಾ ದಾವೆಗಳಲ್ಲಿ ಹಾಗೂ ಇತರ ಕಾನೂನು ಕ್ರಮಗಳಲ್ಲಿ ಕುಲಸಚಿವರು ಅಥವಾ ಅವರು ಇದಕ್ಕಾಗಿ ನಿಯೋಜಿಸಿದ ಬೇರೆ ಯಾವುದಾದರೂ ಅಧಿಕಾರಿಯೂ ಸಹಿ ಹಾಕತಕ್ಕದ್ದು, ಸತ್ಯವೆಂದು ಪ್ರಮಾಣೀಕರಿಸತಕ್ಕದ್ದು ಹಾಗೂ ಅಂತಹ ದಾವೆಗಳ ಹಾಗೂ ಕಾನೂನು ಕ್ರಮಗಳ ಎಲ್ಲಾ ಪ್ರೋಸೆಸ್‌ಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಹಾಗೂ ಅವರು ಜಾರಿಗೊಳಿಸತಕ್ಕದ್ದು.

(5) ವಿಶ್ವವಿದ್ಯಾಲಯವು, ಬೋಧನೆ ಮತ್ತು ಸಂಯೋಜನೆ ನೀಡುವಂತಹ ಒಂದು ವಿಶ್ವವಿದ್ಯಾಲಯವಾಗಿರುವುದು.

(6) ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವು ತಿರುವನಂತಪುರದಲ್ಲಿ ಆಗಿರತಕ್ಕದ್ದು.

4. <u>ಕ್ಷೇತ್ರೀಯ ಪರಿಮಿತಿಗಳು.</u>—(1) ವಿಶ್ವವಿದ್ಯಾಲಯದ ಕ್ಷೇತ್ರೀಯ ಪರಿಮಿತಿಯು ಕೇರಳ ರಾಜ್ಯಾದ್ಯಂತ ವ್ಯಾಪಿಸಿರುವುದಾಗಿರುತ್ತದೆ.

(2) ಈ ಅಧಿನಿಯಮದ, ಶಾಸನಗಳ, ಹಾಗೂ ಆರ್ಡಿನನ್ಸುಗಳ ಅಧೀನದಲ್ಲಿ ಸಂಯೋಜನೆಗಾಗಿ ಗೊತ್ತುಮಾಡಲ್ಪಟ್ಟ ಹಾಗೂ ಈ ಅಧಿನಿಯಮದ ಉಪಬಂಧಗಳ ಪ್ರಕಾರ ವಿಶ್ವವಿದ್ಯಾಲಯವು ಕಾಲಕಾಲಗಳಿಂದ ನಿಗದಿಪಡಿಸಿದಂತಹ ಬೋಧಕ ವರ್ಗದ ಲಭ್ಯತೆ, ಆಡಳಿತೆ ವ್ಯವಸ್ಥೆ, ಮೂಲ ಸೌಕರ್ಯಗಳು (ಕಟ್ಟಡಗಳು, ಪ್ರಯೋಗ ಶಾಲೆಗಳು ಇತ್ಯಾದಿ) ಒಳಗೊಂಡು, ಆದರೆ ಅವುಗಳಿಗೆ ಮಾತ್ರ ಸೀಮಿತಗೊಳ್ಳದೆ, ಮಾನದಂಡಗಳನ್ನು ಪಾಲಿಸುವಂತಹ ರಾಜ್ಯದಲ್ಲಿ ನೆಲೆಗೊಂಡಿರುವಂತಹ ಯಾವುದೇ ಎಂಜಿನಿಯರಿಂಗ್ ಕಾಲೇಜನ್ನು ಅಥವಾ ಸಂಸ್ಥೆಯನ್ನು, ಆಯಾಯಾ ಸಂಗತಿಯಂತೆ,—

(i) ರೆಗ್ಯುಲರ್ ಕಾಲೇಜು ಆಗಿಯೋ;

(ii) ಸ್ವಾಯತ ಕಾಲೇಜು ಆಗಿಯೋ;

(iii) ಶೈಕ್ಷಣಿಕ ಸ್ವಾಯತ್ತತೆಯಿರುವ ಕಾಲೇಜು ಆಗಿಯೋ;

(iv) ಸಂಸ್ಥೆ ಆಗಿಯೋ;

ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಬಹುದಾಗಿದೆ.

5. <u>ವಿಶ್ವವಿದ್ಯಾಲಯದ ಉದ್ದೇಶಗಳು.</u>—ವಿಶ್ವವಿದ್ಯಾಲಯದ ಉದ್ದೇಶಗಳು ಕೆಳಗೆ ಹೇಳಿರುವಂತೆ ಆಗಿರತಕ್ಕದ್ದು, ಅದೇನೆಂದರೆ:—

(ಎ) ರಾಜ್ಯದ ತಾಂತ್ರಿಕ ವಿಜ್ಞಾನಕ್ಕೆ ಸಂಬಂಧಿಸಿದ ನೀತಿಯ ರೂಪೀಕರಣಕ್ಕೆ ಹಾಗೂ ಎಂಜಿನಿಯರಿಂಗ್ ಶಿಕ್ಷಣದ ಯೋಜನೆಗೆ ಮುಂದಾಳುತ್ವ ನೀಡುವುದು;

(ಬಿ) ಎಂಜಿನಿಯರಿಂಗ್ ವಿಜ್ಞಾನ, ತಂತ್ರಜ್ಞಾನ ಹಾಗೂ ಮ್ಯಾನೇಜ್‌ಮೆಂಟ್ ಇತ್ಯಾದಿಗಳಲ್ಲಿರುವ ಪದವಿ, ಸ್ನಾತಕೋತ್ತರ ಪದವಿ, ಸಂಶೋಧನಾ ಕಾರ್ಯಕ್ರಮಗಳ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವುದು;

(ಸಿ) ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ್ಟಿರುವಂತಹ ಎಲ್ಲಾ ಕಾಲೇಜುಗಳ ಹಾಗೂ ಸಂಸ್ಥೆಗಳ ಶೈಕ್ಷಣಿಕಗುಣಮಟ್ಟವನ್ನು ಖಾತ್ರಿಪಡಿಸುವುದು;

(ಡಿ) ಎಂಜಿನಿಯರಿಂಗ್ ಸಂಶೋಧನೆಯನ್ನು ಪೋಷಿಸುತ್ತಾ ಹಾಗೂ ಪ್ರೋತ್ಸಾಹಿಸುತ್ತಾ ಎಂಜಿನಿಯರಿಂಗ್ ವಿಜ್ಞಾನಗಳ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಅಧ್ಯಯನವನ್ನು ಮತ್ತು ಜ್ಞಾನವನ್ನು ಅಭಿವೃದ್ಧಿಪಡಿಸುವುದು ಹಾಗೂ ಪ್ರಸಾರಗೊಳಿಸುವುದು;

(ಇ) ಎ. ಐ. ಸಿ. ಟಿ. ಇ ಕಾಲಾಕಾಲಗಳಲ್ಲಿ ವಿಧಿಸುವಂತಹ ಮಾನದಂಡಗಳಿಗನುಗುಣವಾದ ಪ್ರಗತಿಗಳನ್ನುಗನುಸರಿಸಿ ಹೊಸ ಕೋರ್ಸುಗಳು ಮತ್ತು ಪಠ್ಯ ಯೋಜನೆಯನ್ನು ವಿನ್ಯಾಸಗೊಳಿಸುವುದು;

(ಎಫ್) ಎಂಜಿನಿಯರಿಂಗ್ ವಿಜ್ಞಾನ, ತಂತ್ರಜ್ಞಾನ ಮತ್ತು ಮ್ಯಾನೇಜ್‌ಮೆಂಟ್ ಮುಂತಾದ ಕ್ಷೇತ್ರಗಳಲ್ಲಿ ಇತರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕವಿರುವ ನೋಡಲ್ ಏಜನ್ಸಿಯಾಗಿ ಕಾರ್ಯವೆಸಗುವುದು;

(ಜಿ) ಎಂಜಿನಿಯರಿಂಗ್ ವಿಜ್ಞಾನ, ತಂತ್ರಜ್ಞಾನ ಮತ್ತು ಮ್ಯಾನೇಜ್‌ಮೆಂಟ್ ಮುಂತಾದ ಕ್ಷೇತ್ರಗಳಲ್ಲಿ ಅಂತರ್ ವಿಜ್ಞಾನ ಶಾಖಾ ಶಿಕ್ಷಣ ಮತ್ತು ಸಂಶೋಧನೆಯನ್ನು ಪ್ರೋತ್ಸಾಹಿಸುವುದು;

(ಎಚ್) ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಸಮಾಜದಲ್ಲಿ ಜ್ಞಾನ ಆರ್ಜಿಸುವುದನ್ನು ಪ್ರೋತ್ಸಾಹಿಸುವುದು ಹಾಗೂ ಜ್ಞಾನವರ್ಧನೆಗೆ ನಿರಂತರವಾಗಿ ಅವಕಾಶಗಳನ್ನು ನೀಡುವಂತೆ ಮಾಡುವುದು;

(ಐ) ನೂತನ ಆವಿಷ್ಕಾರ, ಸಂಶೋಧನೆ ಹಾಗೂ ಕಂಡುಹಿಡಿತಗಳ ಹಿನ್ನೆಲೆಯಲ್ಲಿ ಎಂಜಿನಿಯರಿಂಗ್ ವಿಜ್ಞಾನಗಳಿಗೆ ಸಂಬಂಧಿಸಿದ ಶೈಕ್ಷಣಿಕ ಶೃಂಖಲೆಯನ್ನು ಸ್ಥಾಪಿಸಿ, ವಿದ್ಯಾವಂತರಾದ ಒಂದು ಸಮಾಜಕ್ಕೆ ಸೂಕ್ತವಾದ ನೈಪುಣ್ಯತೆಯನ್ನು ಬೆಳೆಸುವುದಕ್ಕಾಗಿ ಆಧುನಿಕ ಸಂವಹನ ಮಾಧ್ಯಮಗಳ ಮತ್ತು ತಂತ್ರಜ್ಞಾನದ ಉಪಯೋಗದಿಂದಿರುವ ತರಬೇತಿಯನ್ನು ನೀಡುವುದು;

(ಜೆ) ಸಂಶೋಧನೆಗಳು ಮತ್ತು ಸಂಬಂಧಪಟ್ಟ ಕ್ಷೇತ್ರಗಳಲ್ಲಿನ ಇತರ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿಕೊಂಡು ಸ್ವದೇಶೀಯ ತಂತ್ರಜ್ಞಾನದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವುದು;

(ಕೆ) ಎಂಜಿನಿಯರಿಂಗ್ ಸಂಶೋಧನೆ, ಬೆಳವಣಿಗೆ ಮತ್ತು ನೂತನ ಕಂಡುಹಿಡಿತಗಳನ್ನು ಅಭಿವೃದ್ಧಿಪಡಿಸುವುದೆಂಬ ಲಕ್ಷ್ಯದೊಂದಿಗೆ ಕಾಲೇಜುಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿಗಳಿಗೆ ಮತ್ತು ಸಂಶೋಧನಾ ಕಾರ್ಯಕ್ರಮಗಳಿಗೆ ಬೇಕಾದಂತಹ ದಾಖಲಾತಿಯನ್ನು ವಿಪುಲವಾಗಿ ಹೆಚ್ಚಿಸುವುದು;

(ಎಲ್) ವಿಶಿಷ್ಠ ವಿಷಯಾಧಾರಿತ ಕ್ಷೇತ್ರಗಳಲ್ಲಿ ಮಲ್ಟಿಡಿಸಿಪ್ಲಿನರಿ ಅಪ್ಲೈಡ್ ಸಂಶೋಧನೆಗಾಗಿ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲು ಬೆಂಬಲ ನೀಡುವುದು;

(ಎಮ್) ಶೈಕ್ಷಣಿಕ ಗುಣಮಟ್ಟ ಮತ್ತು ಬೋಧಕ ವರ್ಗದ ಗುಣಮಟ್ಟ ಶಾಶ್ವತವಾಗಿಯೂ ನಿರಂತರವಾಗಿಯೂ ಉತ್ತಮಗೊಳಿಸುವ ಹಾಗೂ ಮೇಲ್ದರ್ಜೆಗೇರಿಸುವ ಮೂಲಕ ವಿದ್ಯಾರ್ಥಿಗಳ ಕಲಿಕಾ ಕೌಶಲ್ಯವನ್ನು ಉತ್ತಮಗೊಳಿಸುವುದು;

(ಎನ್) ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ನೂತನ ರೀತಿಯಲ್ಲಿ ಅಚ್ಚುಕಟ್ಟಾದ ಗುಣಮಟ್ಟವನ್ನು ಉತ್ತಮಗೊಳಿಸಲು ಬೇಕಾದಂತಹ ಯೋಜನೆಗಳನ್ನು ಜಾರಿಗೊಳಿಸುವುದು ಹಾಗೂ ಮುಂದುವರಿಸುವುದು;

(ಒ) ರಾಜ್ಯದ ಎಂಜಿನಿಯರಿಂಗ್ ವಿಜ್ಞಾನ, ತಾಂತ್ರಿಕ ವಿಜ್ಞಾನ ಮತ್ತು ಮ್ಯಾನೇಜ್‌ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ನೂತನ ಕಂಡುಹಿಡಿತಗಳಿಗೆ ಹಾಗೂ ಸಾಂಸ್ಥಿಕಮಟ್ಟದ ಮ್ಯಾನೇಜ್‌ಮೆಂಟ್ ಕಾರ್ಯಕ್ರಮಗಳಿಗೆ ಸಹಾಯ ನೀಡುವುದು;

(ಪಿ) ಸೂಕ್ತವಾದಂತಹ ವ್ಯಾಪನೆ ಚಟುವಟಿಕೆಗಳ ಮೂಲಕ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದು.

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.—(1) ಈ ಅಧಿನಿಯಮದ ಹಾಗೂ ಶಾಸನಗಳ ಉಪಬಂಧಗಳಿಗೆ ವಿಧೇಯವಾಗಿ, ಆಯಾಯ ಸಮಯಗಳಲ್ಲಿ ಅಸ್ತಿತ್ವದಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸಿಕೊಂಡು ಭಾರತದ ಎಲ್ಲಾ ಪ್ರಜೆಗಳಿಗೆ, ಚಾಲ್ತಿಯಲ್ಲಿ ಕಾರ್ಯಚರಣೆಯಲ್ಲಿರುವ ಯಾವುದಾದರೂ ಕಾನೂನಿನ ಉಪಬಂಧಗಳಿಗೆ ವಿಧೇಯವಾಗಿ ನಿಗದಿಪಡಿಸಬಹುದಾದಂತಹ ಮಾನದಂಡಗಳನ್ನು ಪಾಲಿಸುವ ಭಾರತೀಯ ವಂಶಜರಾದ ವ್ಯಕ್ತಿಗಳಿಗೂ ವಿದೇಶಿ ಪೌರರಿಗೂ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಇರುವುದಾಗಿರುತ್ತದೆ:

ಆದರೆ, ಈ ವಿಭಾಗದಲ್ಲಿರುವ ಯಾವುದೊಂದು ಕೂಡ, ಪ್ರವೇಶಕ್ಕೆ ನಿಗದಿಪಡಿಸಿದಂತಹ ಶೈಕ್ಷಣಿಕ ಅರ್ಹತೆಯಿಲ್ಲದ ಯಾವುದಾದರೂ ವ್ಯಕ್ತಿಗೆ ಯಾವುದಾದರೂ ಅಧ್ಯಯನ ಕೋರ್ಸುಗಳಿಗೆ ಪ್ರವೇಶ ಲಭಿಸುವುದಕ್ಕೆ ಒಂದು ಪದವಿಯನ್ನೋ, ಸ್ನಾತಕೋತ್ತರ ಪದವಿಯನ್ನೋ, ಡಿಪ್ಲೊಮಾವನ್ನೋ, ಪ್ರಮಾಣ ಪತ್ರವನ್ನೋ ನೀಡುವುದಕ್ಕೆ ಬೇಕಾದಂತಹ ಅತ್ಯಂತ ಕನಿಷ್ಟ ಅರ್ಹತೆಗಿಂತಲು ಕೆಳಗಿನ ಶೈಕ್ಷಣಿಕ ದಾಖಲೆಗಳಿರುವಂತದ್ದೋ ಇತರ ವಿದ್ಯಾರ್ಥಿಗಳ ಅಥವಾ ನೌಕರರ ಹಕ್ಕುಗಳಿಗೆ ಅಥವಾ ವಿಶೇಷ ಹಕ್ಕುಗಳಿಗೆ ಹಾನಿಯನ್ನುಂಟುಮಾಡುವಂತಹ ರೀತಿಯಲ್ಲಿರುವ ವೈಯಕ್ತಿಕ ನಡತೆಯಿರುವ ಒಬ್ಬನನ್ನು ವಿಶ್ವವಿದ್ಯಾಲಯದ ದಾಖಲಾತಿ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಅಥವಾ ಲಭ್ಯವಿರುವಂತಹ ಸೌಕರ್ಯಗಳಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ಸೇರಿಸಬಹುದೆಂದು ಶೈಕ್ಷಣಿಕ ಸಮಿತಿಯು ನಿರ್ಧರಿಸುವ ಸಂಖ್ಯೆಗಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಯಾವುದಾದರೂ ಒಂದು ಅಧ್ಯಯನ ಕೋರ್ಸ್‌ಗಾಗಿ ಪ್ರವೇಶಾತಿ ನೀಡುವುದಕ್ಕೆ ವಿಶ್ವವಿದ್ಯಾಲಯವನ್ನು ಅನುಮತಿಸಿರುವುದಾಗಿ ಭಾವಿಸತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಉಪಬಂಧಗಳಿಗೆ ವಿಧೇಯವಾಗಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಿಗೆ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವಿಭಾಗದವರಿಗೆ, ಆಯಾಯಾ ಕಾಲಗಳಲ್ಲಿ ಅಧಿಸೂಚನೆ ಮಾಡಬಹುದಾದ ಪ್ರಕಾರ ಪ್ರತ್ಯೇಕ ವಿಭಾಗದವರಿಗೆ ಮತ್ತು ಭಾರತದ ಇತರ ರಾಜ್ಯಗಳಲ್ಲಿನ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಅರ್ಜಿದಾರರಿಗೆ ಕಾಲೇಜುಗಳಲ್ಲಿ ಸೀಟುಗಳನ್ನು ಮೀಸಲಾಗಿಡಬೇಕೆಂದು ಸರಕಾರವು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದಾಗಿದೆ:

ಆದರೆ, ಅಂತಹ ಯಾವುದಾದರೂ ಕೋರ್ಸಿಗೆ ಪ್ರವೇಶ ಪಡೆಯಲು ವಿಶ್ವವಿದ್ಯಾಲಯವು ನಿಗದಿಪಡಿಸಿದಂತಹ ಅತ್ಯಂತ ಕನಿಷ್ಟ ಅರ್ಹತೆಯು ಆತನಿಗೆ ಇಲ್ಲದಿದ್ದಲ್ಲಿ, ಅಂತಹ ಯಾವುದೇ ವ್ಯಕ್ತಿಗೂ ವಿಶ್ವವಿದ್ಯಾಲಯದಲ್ಲಿ ಪ್ರವೇಶವನ್ನು ಪಡೆಯಲು ಅರ್ಹತೆ ಇರುವುದಿಲ್ಲ.

7. ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರ ನೇಮಕಾತಿ.—(1) ಈ ಅಧಿನಿಯಮ ಹಾಗೂ ಅದರ ಪ್ರಕಾರ ಮಾಡಿರುವಂತಹ ಶಾಸನಗಳ ಉಪಬಂಧಗಳಿಗೆ ವಿಧೇಯವಾಗಿ, ಕೇರಳ ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಮಾಡುವಂತಹದ್ದಲ್ಲದ ಹುದ್ದೆಗಳಿಗೆ ವಿಶ್ವವಿದ್ಯಾಲಯವು ನೇಮಕಾತಿ ಮಾಡತಕ್ಕದ್ದಾಗಿದೆ.

(2) ಅಧ್ಯಾಪಕ ಮತ್ತು ಅಧ್ಯಾಪಕೇತರ ಹುದ್ದೆಗಳಿಗೆ ನೇಮಕಾತಿ ಮಾಡುವಾಗ, ವಿಶ್ವವಿದ್ಯಾಲಯವು, 1958ರ ಕೇರಳ ಸ್ಟೇಟ್ ಆಂಡ್ ಸಬೋರ್ಡಿನೇಟ್ ಸರ್ವೀಸಸ್ ನಿಯಮದ ರೂಲ್ ನಂ. 14ನೇ ನಿಯಮದಲ್ಲಿನ (ಎ), (ಬಿ), (ಸಿ) ಎಂಬೀ ಖಂಡಗಳ

ಉಪಬಂಧಗಳನ್ನು ಹಾಗೂ 15, 16, 17 ಮತ್ತು 17ಎ ಎಂಬೀ ನಿಯಮಗಳ ಉಪಬಂಧಗಳನ್ನು, ಆಯಾಯ ಸಮಯದಲ್ಲಿ ತಿದ್ದುಪಡಿಮಾಡಿದ ಪ್ರಕಾರ, ಅವಶ್ಯಕ ಬದಲಾವಣೆಗಳೊಂದಿಗೆ, ಪಾಲಿಸತಕ್ಕದಾಗಿದ್ದು, ಎಲ್ಲಾ ಇಲಾಖೆಗಳನ್ನು ಒಂದು ಯುನಿಟ್ ಆಗಿ ಪರಿಗಣಿಸಿ ಕ್ಯಾಟಗರಿ ಪ್ರಕಾರ ಜಾತಿ ರೊಟೇಶನ್‌ನನ್ನು ಅನುಸರಿಸತ್ತಕ್ಕದ್ದಾಗಿರುತ್ತದೆ.

(3) 3ನೇ ವಿಭಾಗದ ಪ್ರಕಾರ ಎ.ಪಿ.ಜೆ ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವುದರಿಂದಾಗಿ ಬಾಧಿಸಲ್ಪಡುವಂತಹ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೂ ವಿಶ್ವವಿದ್ಯಾಲಯಗಳ ಅಧ್ಯಾಪಕರೇತರ ನೌಕರರಿಗೆ ಈ ವಿಶ್ವವಿದ್ಯಾಲಯದಲ್ಲಿ ನಿಯಮಿಸಲ್ಪಡಲು ಆಪ್‌ಷನ್ ನೀಡಬಹುದಾಗಿದ್ದು, ಅವರನ್ನು ನಿಗದಿಪಡಿಸಿದಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ವಿಧೇಯವಾಗಿ ವಿಶ್ವವಿದ್ಯಾಲಯಕ್ಕೆ ನಿಯಮಿಸಬಹುದಾಗಿದೆ.

(4) ಅಧ್ಯಾಪಕ-ಅಧ್ಯಾಪಕೇತರ ನೌಕರರಿಗೆ ವಿಶ್ವವಿದ್ಯಾಲಯದಲ್ಲಿನ ಸಮಾನ ಹುದ್ದೆಗಳಿಗೆ ನಿಗದಿಪಡಿಸಲಾಗುವಂತಹ ರೀತಿಯಲ್ಲಿ ಡೆಪ್ಯೂಟೇಶನ್ ಮೂಲಕ ನೇಮಕಾತಿ ನೀಡಬಹುದಾಗಿದೆ.

(5) ಅಸ್ತಿತ್ವದಲ್ಲಿರುವ ಯಾವುದಾದರೂ ಕಾನೂನಿನಲ್ಲಿ ಏನೇ ಹೇಳಿದ್ದರೂ, ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವಂತಹ ಹಾಗೂ ಪ್ರಸ್ತುತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಬಾಧಿಸಲ್ಪಡುವಂತಹ, ಈ ಅಧಿನಿಯಮದ ಅನುಸೂಚಿಯಲ್ಲಿ ಹೇಳಿರುವ ಯಾವುದಾದರೂ ವಿಶ್ವವಿದ್ಯಾಲಯದಡಿಯಲ್ಲಿರುವಂತಹ ಅಧ್ಯಾಪಕ-ಅಧ್ಯಾಪಕೇತರ ನೌಕರರಿಗೆ ಆಪ್‌ಷನ್‌ನ ಮೂಲಕ ವಿಶ್ವವಿದ್ಯಾಲಯಕ್ಕೆ ನಿಯಮಿಸಬಹುದಾಗಿದ್ದು ಮತ್ತು ಅಂತಹ ನೇಮಕಾತಿ ಹಾಗೂ ವರ್ಗಾವಣೆ ಮತ್ತು ಅದಕ್ಕೆ ಸಂಬಂಧಿಸಿರುವ ಮಾನದಂಡಗಳನ್ನು ಗಜೆಟ್ ವಿಜ್ಞಾಪನೆಯ ಮೂಲಕ ಸರಕಾರವು ನಿರ್ಧರಿಸಬಹುದಾಗಿದೆ.

8. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು.—ವಿಶ್ವವಿದ್ಯಾಲಯವು ಈ ಕೆಳಗೆ ಹೇಳಿರುವಂತಹ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಹೊಂದಿರುತ್ತವೆ, ಅದೇನೆಂದರೆ:—

(i) ವಿಶ್ವವಿದ್ಯಾಲಯಕ್ಕೆ ಸೂಕ್ತವೆಂದು ತೋರುವಂತಹ ಎಂಜಿನಿಯರಿಂಗ್ ವಿಜ್ಞಾನ ಶಾಖೆಗಳಲ್ಲಿ ಮ್ಯಾನೇಜ್‌ಮೆಂಟ್, ಹಾಗೂ ತಾಂತ್ರಿಕವಿಜ್ಞಾನ ಮತ್ತು ಅದಕ್ಕೆ ಸಂಬಂಧಪಟ್ಟ ಅಂತರ್‌ವಿಜ್ಞಾನ ಕ್ಷೇತ್ರಗಳಲ್ಲಿ ಬೋಧನೆ ನೀಡುವುದು, ಸಂಶೋಧನೆಯನ್ನು ನಡೆಸುವುದು ಹಾಗೂ ಅಂತಹ ಶಾಖೆಗಳಲ್ಲಿನ ಅಧ್ಯಯನದ ಪ್ರಗತಿ ಮತ್ತು ಜ್ಞಾನದ ಪ್ರಸರಣಕ್ಕೆ ಬೇಕಾದಂತಹ ಸೌಕರ್ಯಗಳನ್ನು ಮಾಡಿಕೊಡುವುದು;

(ii) ಮೂಲ ವಿಜ್ಞಾನಗಳು ಮತ್ತು ಮಾನವಿಕ ವಿಷಯಗಳಲ್ಲಿ, ಅದು ಅಂತರ್‌ವಿಜ್ಞಾನ ವಲಯದ ಜ್ಞಾನವನ್ನು ಗಳಿಸುವುದಕ್ಕೆ ಸಂಬಂಧಪಟ್ಟು ಇರುವವರೆಗೆ, ಬೋಧನೆ ಮತ್ತು ಸಂಶೋಧನೆಗೆ ವ್ಯವಸ್ಥೆಯನ್ನು ಮಾಡುವುದು;

(iii) ವಿಶ್ವವಿದ್ಯಾಲಯ ನಡೆಸುವ ಕಾಲೇಜುಗಳ ಮತ್ತು ಕೇಂದ್ರಗಳ ಸ್ಥಾಪನೆ, ಪರಿಪಾಲನೆ, ಆಡಳಿತ, ಮೇಲ್ವಿಚಾರಣೆ ಹಾಗೂ ಅಂಗೀಕಾರ ಮುಂತಾದವುಗಳಿಗೆ ಬೇಕಾದಂತಹ ಮಾನದಂಡಗಳನ್ನು ಹಾಗೂ ಗುಣಮಟ್ಟವನ್ನು ನಿರ್ಧರಿಸುವುದು;

(iv) ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸುಗಳ ಹಾಗೂ ರೆಗ್ಯುಲೇಶನ್‌ಗಳ ಉಪಬಂಧಕ್ಕೆ ಅನುಗುಣವಾಗಿ ಸಂಸ್ಥೆಗಳನ್ನು ಕೋನ್‌ಸ್ಟಿಟ್ಯುವಂಟ್ ಕಾಲೇಜ್‌ಗಳು ಸ್ವಾಯತ್ತ ಕಾಲೇಜುಗಳು ರೆಗ್ಯುಲರ್ ಕಾಲೇಜುಗಳು ಅಥವಾ ಶೈಕ್ಷಣಿಕ ಸ್ವಾಯತ್ತಾಧಿಕಾರವಿರುವ ಕಾಲೇಜುಗಳನ್ನು ಅದರೊಂದಿಗೆ ಸಂಯೋಜನೆ ಮಾಡುವುದು ಹಾಗೂ ವಿಶ್ವವಿದ್ಯಾಲಯದ ಶಾಸನಗಳನ್ನು ಉಲ್ಲಂಘಿಸಿ ಪಡೆದಂತಹವುಗಳ ಸಂಯೋಜನೆಯನ್ನು ಹಿಂತೆಗೆಯುವುದು;

(v) ಸಂಯೋಜನೆ ಮಾಡಿದ ಕಾಲೇಜುಗಳಿಗೆ, ಸಂಸ್ಥೆಗಳಿಗೆ ಅಥವಾ ಸಂಯೋಜನೆ ಮಾಡಲ್ಪಟ್ಟ ಕಾಲೇಜುಗಳ ವಿಭಾಗಗಳಿಗೆ ಅಥವಾ ಸಂಸ್ಥೆಗಳಿಗೆ ಅಥವಾ ವಿಶ್ವವಿದ್ಯಾಲಯ ನಡೆಸುತ್ತಿರುವ ಒಂದು ವಿಭಾಗಕ್ಕೆ ಶೈಕ್ಷಣಿಕಾ ಸ್ವಾಯತ್ತಾಧಿಕಾರವನ್ನು ನೀಡುವುದು;

(vi) ಕಾಲೇಜುಗಳನ್ನು ಅಥವಾ ಇತರ ಅಧ್ಯಯನ ಕೇಂದ್ರಗಳನ್ನು ಅಥವಾ ಸಂಶೋಧನಾ ಕಾರ್ಯಕ್ರಮಗಳನ್ನು ನಡೆಸುವುದಕ್ಕಿರುವ ಕೇಂದ್ರಗಳನ್ನು ಅಥವಾ ವಿಶ್ವವಿದ್ಯಾಲಯದ ಗುರಿಗಳನ್ನು ಜಾರಿಗೊಳಿಸುವುದಕ್ಕೆ ಅವಶ್ಯಕವಾದ ಇತರ ಸಂಸ್ಥೆಗಳನ್ನು ಸ್ಥಾಪಿಸುವುದು, ನಡೆಸುವುದು ಹಾಗೂ ಅದರ ಆಡಳಿತ ನಿರ್ವಹಣೆ ಮಾಡುವುದು;

(vii) ಪರೀಕ್ಷೆಗಳನ್ನು ನಡೆಸುವುದು,—

(ಎ) ವಿಶ್ವವಿದ್ಯಾಲಯ ಅಥವಾ ಅದರ ಅಧೀನದಲ್ಲಿರುವ ಯಾವುದಾದರೂ ಕಾಲೇಜಿನಲ್ಲಿ ಅಥವಾ ಸಂಸ್ಥೆಗಳಲ್ಲಿ ನಿಗದಿಪಡಿಸಿದ ಒಂದು ಅಧ್ಯಯನ ಕೋರ್ಸ್‌ನ್ನು ಮುಂದುವರಿಸುತ್ತಿರುವ ಹಾಗು ನಿಗದಿಪಡಿಸಿದ ರೀತಿಯಲ್ಲಿ ಅದರಿಂದ ಹೊರತುಪಡಿಸದಿದ್ದಲ್ಲಿ ವಿಶ್ವವಿದ್ಯಾಲಯವು ಗೊತ್ತುಪಡಿಸಿದ ಪರೀಕ್ಷೆಗಳಲ್ಲಿ ತೇರ್ಗಡೆಯಾದ; ಅಥವಾ

(ಬಿ) ನಿಗದಿ ಪಡಿಸಬಹುದಾದಂತಹ ನಿಬಂಧನೆಗಳಿಗನುಗುಣವಾಗಿ ಸಂಶೋಧನೆಯನ್ನು ತೃಪ್ತಿಕರವಾಗಿ ಪೂರ್ತೀಕರಿಸಿದ ಹಾಗೂ ಯಥಾ ಪ್ರಕಾರ ಮೌಲ್ಯ ಮಾಪನ ಮಾಡಿಸಲ್ಪಟ್ಟಂತಹ ವ್ಯಕ್ತಿಗಳಿಗೆ ಪದವಿಗಳನ್ನು, ಸ್ನಾತಕೋತ್ತರ ಪದವಿಗಳನ್ನು, ಡಿಪ್ಲೋಮಗಳನ್ನು, ಪ್ರಮಾಣ ಪತ್ರಗಳನ್ನು ಹಾಗೂ ಇತರ ಡಿಸ್ಟಿಂಕ್ಷನ್‌ಗಳನ್ನು ನೀಡುವುದು;

(viii) ಶಾಸನಗಳಲ್ಲಿ ನಿಗದಿಪಡಿಸಬಹುದಾದ ನಿಬಂಧನೆಗಳಿಗನುಗುಣವಾಗಿ ಗೌರವ ಪದವಿಗಳು ಹಾಗೂ ಇತರ ಬಿರುದುಗಳನ್ನು ನೀಡುವುದು;

(ix) ಬಾಧಿತ ವ್ಯಕ್ತಿಗಳಿಗೆ ಸಕಾರಣವನ್ನು ಹೇಳಲು ನ್ಯಾಯಯುತವಾದ ಒಂದು ಅವಕಾಶವನ್ನು ನೀಡಿದ ನಂತರ, ಶಾಸನಗಳ ಮೂಲಕ ನಿಗದಿಪಡಿಸಬಹುದಾದಂತಹ ನಿಬಂಧನೆಗಳಡಿಯಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮ, ಪ್ರಮಾಣ ಪತ್ರ ಅಥವಾ ಇತರ ಬಿರುದುಗಳನ್ನು ತಡೆಹಿಡಿಯುವುದು, ಹಿಂತೆಗೆಯುವುದು ಅಥವಾ ರದ್ದುಗೊಳಿಸುವುದು;

(x) ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಬೇಕಾದಂತಹ ಶುಲ್ಕವನ್ನು ನಿರ್ಧರಿಸುವುದು;

(xi) ಹಾಸ್ಟೆಲ್‌ಗಳನ್ನು ಸ್ಥಾಪಿಸುವುದು, ನಡೆಸುವುದು, ಆಡಳಿತ ನಿರ್ವಹಣೆಯನ್ನು ನಡೆಸುವುದು ಹಾಗೂ ವಿಶ್ವವಿದ್ಯಾಲಯದ ನಿರ್ವಹಣೆಗೆ ಹೊರತಾದ ಹಾಸ್ಟೆಲ್‌ಗಳನ್ನು ಅನುಮತಿಸುವುದು ಹಾಗೂ ಅಂತಹ ಅನುಮತಿಗಾಗಿ ಅಮಾನತುಗೊಳಿಸುವುದು ಅಥವಾ ಹಿಂತೆಗೆಯುವುದು;

(xii) ವಿಶ್ವವಿದ್ಯಾಲಯದಲ್ಲಿ ಹಾಗೂ ವಿಶ್ವವಿದ್ಯಾಲಯ ನಡೆಸುತ್ತಿರುವ ಕಾಲೇಜುಗಳಲ್ಲಿ ಹಾಗೂ ಕೇಂದ್ರಗಳಲ್ಲಿ ಸರಕಾರದ ಪೂರ್ವಾನುಮತಿಯಿಂದ ಅಲ್ಲಿ ವಿವಿಧ ಕ್ಯಾಟಗರಿಗಳಲ್ಲಿರುವ ಹುದ್ದೆಗಳನ್ನು ಸೃಷ್ಟಿಸುವುದು, ಶಾಸನಗಳ ಪ್ರಕಾರ ಅಂತಹ ಹುದ್ದೆಗಳಿಗೆ ವೇತನ ಶ್ರೇಣಿಯನ್ನು ನಿರ್ಧರಿಸುವುದು, ಅವರ ಅರ್ಹತೆಗಳು ಹಾಗೂ ನೇಮಕಾತಿಯ ವಿಧಾನಗಳನ್ನು ನಿರ್ಧರಿಸುವುದು ಮತ್ತು ಕೇರಳ ಲೋಕ ಸೇವಾ ಆಯೋಗದ ಮೂಲಕ ನೇಮಕಾತಿ ಮಾಡುವಂತದ್ದಲ್ಲದ ಹುದ್ದೆಗಳಿಗೆ ನೇಮಕಾತಿಯನ್ನು ನಡೆಸುವುದು;

(xiii) ಕಾಲೇಜುಗಳಲ್ಲಿನ ಮತ್ತು ವಿಶ್ವವಿದ್ಯಾಲಯ ನಡೆಸುತ್ತಿರುವ ವಿಭಾಗಗಳಲ್ಲಿನ ಮತ್ತು ಕೇಂದ್ರಗಳಲ್ಲಿನ ವಿವಿಧ ಅಧ್ಯಯನ ಕೋರ್ಸುಗಳಿಗಾಗಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಿಶ್ಚಯಿಸುವುದು ಹಾಗೂ ಕ್ರಮೀಕರಿಸುವುದು;

(xiv) ಸಂಯೋಜನೆ ಮಾಡಲ್ಪಟ್ಟ ಕಾಲೇಜುಗಳ ಪರಿಶೋಧನೆಗಾಗಿ ವ್ಯವಸ್ಥೆಗಳನ್ನು ಮಾಡುವುದು, ಹಾಗು ವಿಶ್ವವಿದ್ಯಾಲಯಕ್ಕೆ ಉಚಿತವೆಂದು ತೋರುವಂತಹ ನಿರ್ದೇಶಗಳನ್ನು ನೀಡುವುದು;

(xv) ವಿಶ್ವವಿದ್ಯಾಲಯದ ಮತ್ತು ಸಂಯೋಜನೆ ಮಾಡಲ್ಪಟ್ಟ ಕಾಲೇಜುಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಫೆಲೋಶಿಪ್‌ಗಳು, ಟ್ರಾವೆಲಿಂಗ್ ಫೆಲೋಶಿಪ್‌ಗಳು, ಸ್ಕೋಲರ್‌ಶಿಪ್‌ಗಳು, ಸ್ಟೂಡೆಂಟ್‌ಶಿಪ್‌ಗಳು, ಪದಕಗಳನ್ನು ಮತ್ತು ಬಹುಮಾನಗಳನ್ನು ಏರ್ಪಡಿಸುವುದು ಹಾಗೂ ನೀಡುವುದು;

(xvi) ಇತರ ವಿಶ್ವವಿದ್ಯಾಲಯಗಳೊಂದಿಗೆ ಅಥವಾ ಯಾವುದಾದರೂ ಪ್ರಾಧಿಕಾರಗಳೊಂದಿಗೆ ಅಥವಾ ಸಂಘಗಳೊಂದಿಗೆ ವಿಶ್ವವಿದ್ಯಾಲಯವು ನಿರ್ಧರಿಸುವಂತಹ ರೀತಿಯಲ್ಲಿ ಹಾಗೂ ಅಂತಹ ಅವಶ್ಯಕತೆಗಳಿಗೆ ಸಹಕರಿಸುವುದು;

(xvii) ಸಂಶೋಧನೆ, ಅಭಿವೃದ್ಧಿ, ಸಲಹೆ ಹಾಗೂ ತರಬೇತಿ ಕಾರ್ಯಕ್ರಮ ಗಳಾದಂತಹ ಚಟುವಟಿಕೆಗಳನ್ನು ಬಳಸಿ ಅಥವಾ ನವೀಕರಿಸಿ ಕೈಗಾರಿಕೆ, ವಾಣಿಜ್ಯ ಅಥವಾ ಬೇರೆ ಯಾವುದಾದರೂ ಸರಕಾರೇತರ ಸಂಘಗಳು ಇತ್ಯಾದಿಗಳಿಗೆ ಸೇವೆಗಳನ್ನು ಪ್ರಧಾನ ಮಾಡಿಕೊಂಡು ವಿಶ್ವವಿದ್ಯಾಲಯದ ಸಂಪನ್ಮೂಲತೆಯನ್ನು ಹೆಚ್ಚಿಸುವುದು;

(xviii) ಕಾಲೇಜುಗಳ ಅಥವಾ ಸಂಸ್ಥೆಗಳ ನಿರ್ವಹಣೆಯನ್ನು, ಅಂತಹ ಕಾಲೇಜುಗಳ ಅಥವಾ ಸಂಸ್ಥೆಯ ಮ್ಯಾನೇಜ್‌ಮೆಂಟಿನ ದಂಡಾರ್ಹ ಸ್ವಭಾವ ಅವ್ಯವಹಾರಗಳು ಕರ್ತವ್ಯ ಲೋಪಗಳು ವಿಶ್ವವಿದ್ಯಾಲಯವು ಗೊತ್ತುಮಾಡಿದ ತನಿಖಾ ಸಮಿತಿಗೆ ಪ್ರಥಮ ನೋಟದಲ್ಲಿ ಮನವರಿಕೆಯಾದಲ್ಲಿ ಸಾರ್ವಜನಿಕ ಹಿತಾದೃಷ್ಟಿಯಿಂದ, ವಹಿಸಿಕೊಳ್ಳಲು ಸರಕಾರಕ್ಕೆ ಶಿಫಾರಸು ಮಾಡುವುದು;

(xix) ವಿದೇಶಿ ಏಜೆನ್ಸಿಗಳಿಂದಲೂ ಸಹಪ್ರವರ್ತನಾ ಕಾರ್ಯಕ್ರಮಗಳಿಗಾಗಿ ಬೇಕಾದಂತಹ ನಿಧಿಗಳನ್ನು ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಅದಕ್ಕಾಗಿರುವ ನಿಯಮಗಳಿಗೆ ಹಾಗೂ ರೆಗ್ಯುಲೇಶನ್‌ಗಳಿಗೆ ವಿಧೇಯವಾಗಿ ಸ್ವೀಕರಿಸುವುದು;

(xx) ಸಂಯೋಜಿಸಲ್ಪಟ್ಟ ಕಾಲೇಜುಗಳ ಅಧ್ಯಾಪಕರಿಗೂ ವಿಶ್ವವಿದ್ಯಾಲಯದ ಅಧ್ಯಾಪಕರಿಗೂ ಬೇಕಾಗಿ ಸದಾಚಾರ ಸಂಹಿತೆ, ಕೆಲಸದ ಭಾರ, ಕ್ರಿಯಾಶೀಲತೆಯ ಮೌಲ್ಯಮಾಪನಕ್ಕಿರುವ ಮಾರ್ಗಸೂಚಿಗಳು, ವಿಶ್ವವಿದ್ಯಾಲಯದ ಅಭಿಪ್ರಾಯದಂತೆ ಶೈಕ್ಷಣಿಕ ವಿಷಯಗಳಲ್ಲಿ ಅವಶ್ಯಕವಾಗಿರುವಂತಹ ಇತರ ಬೋಧನೆಗಳು ಅಥವಾ ನಿರ್ದೇಶಗಳನ್ನು ಒಳಗೊಂಡ ಸೇವಾ ಷರತ್ತುಗಳನ್ನು ನಿರ್ದೇಶಿಸುವುದು;

(xxi) ಕುಲಪತಿಯವರ ಹೊರತಾದ ವಿಶ್ವವಿದ್ಯಾಲಯದ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಶ್ಚಯಿಸುವುದು;

(xxii) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಹತೋಟಿಯಿಡುವುದು, ಅವರ ವಿದ್ಯಾಭ್ಯಾಸ ಗುಣಮಟ್ಟ, ಕ್ಷೇಮ, ಶಿಸ್ತು, ಹಾಗೂ ಆರೋಗ್ಯವನ್ನು ಖಾತ್ರಿಪಡಿಸುವುದು ಹಾಗೂ ಸಂಯೋಜನೆ ಮಾಡಲ್ಪಟ್ಟ ಕಾಲೇಜುಗಳ ವಿದ್ಯಾರ್ಥಿಗಳ ಮೇಲೆ ಸಮಾನವಾದ ಅವಶ್ಯಕತೆಗಳಿಗಾಗಿ ಅಂತಹ ಕಾಲೇಜುಗಳ ಮುಖೇನ ಹತೋಟಿಯಿಡುವುದು;

(xxiii) ಒಂದು ವಿದೇಶ ರಾಷ್ಟ್ರದಿಂದ, ವಿದೇಶ ಫೌಂಡೇಶನ್‌ನಿಂದ ಅಥವಾ ಅಂತಹ ರಾಷ್ಟ್ರದಿಂದ ಅಥವಾ ಫೌಂಡೇಶನ್‌ನ ಯಾವುದಾದರೂ ವ್ಯಕ್ತಿಯಿಂದ ಯಾವುದಾದರೂ ಕೊಡುಗೆಯನ್ನು ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ನಿಯಮಗಳಿಗೆ ಹಾಗೂ ಮಾರ್ಗಸೂಚಿಗಳಿಗನುಗುಣವಾಗಿ ಮಾತ್ರವೇ ವಿಶ್ವವಿದ್ಯಾಲಯವು ಸ್ವೀಕರಿಸತಕ್ಕದೆಂಬ ಷರತ್ತುಗಳಿಗೆ ವಿಧೇಯವಾಗಿ, ಅನುದಾನ, ಮರಣ ಶಾಸನದ ವಿನಿಯೋಗದ ಪ್ರಕಾರ ಅಥವಾ ಇತರ ವಿಧದಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆಗಳಿಗಾಗಿ, ಅದರಲ್ಲಿ ನಿಹಿತವಾಗಬಹುದಾದಂತಹ ಯಾವುದೇ ದಾನಸ್ವತ್ತುಗಳನ್ನು, ಕೊಡುಗೆಗಳನ್ನು ಅಥವಾ ನಿಧಿಗಳನ್ನು ಸ್ವೀಕರಿಸುವುದು, ಸ್ವಾಧೀನದಲ್ಲಿರಿಸುವುದು ಮತ್ತು ನಿರ್ವಹಿಸುವುದು ಹಾಗು ಅಂತಹ ದಾನಸ್ವತ್ತುಗಳನ್ನು, ಕೊಡುಗೆಗಳನ್ನು ಅಥವಾ ನಿಧಿಗಳನ್ನು ವಿಶ್ವವಿದ್ಯಾಲಯವು ಯುಕ್ತವೆಂದು ಭಾವಿಸುವಂತಹ ಯಾವುದೇ ರೀತಿಯಲ್ಲಿಯೂ ನಿಕ್ಷೇಪಿಸುವುದು ಹಾಗೂ ಅಂತಹ ನಿಧಿಯಿಂದ ಸ್ಕೋಲರ್‌ಶಿಪ್‌ಗಳನ್ನು, ಪದಕಗಳನ್ನು ಮುಂತಾದವುಗಳನ್ನು ನೀಡುವುದು;

(xxiv) ಖರೀದಿ, ಅನುದಾನ, ಮರಣ ಶಾಸನ ಮುಂತಾದ ಅಥವಾ ಇತರ ರೀತಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಅಗತ್ಯಕ್ಕಾಗಿ ಅದರಲ್ಲಿ ನಿಹಿತವಾಗಬಹುದಾದಂತಹ ಯಾವುದಾದರೂ ಚರ ಅಥವಾ ಸ್ಥಿರಾಸ್ತಿಗಳನ್ನು ಆರ್ಜಿಸುವುದು ಹಾಗು ಸ್ವಾಧೀನದಲ್ಲಿರಿಸುವುದು ಹಾಗು ವಿಶ್ವವಿದ್ಯಾಲಯಕ್ಕೆ ಸೇರಿದ ಎಲ್ಲಾ ಅಥವಾ ಯಾವುದಾದರೂ ಆಸ್ತಿಗಳನ್ನು ವಿಶ್ವವಿದ್ಯಾಲಯದ ಉತ್ತಮವಾದ ಅಗತ್ಯಕ್ಕಾಗಿ ಮಾತ್ರ ಪರಭಾರೆ ಮಾಡುವುದೋ ಪರಾಧೀನ ಮಾಡುವುದೋ ಅಥವಾ ಬೇರೆ ರೀತಿಯಲ್ಲಿ ಬಿಟ್ಟುಕೊಡುವುದು ಹಾಗೂ ಒಂದು ಏಕೀಕೃತ ನಿಕಾಯಕ್ಕೆ ಆನುಷಂಗಿಕ ಅಥವಾ ಸಂಬಂಧಪಟ್ಟ ಇತರ ಎಲ್ಲಾ ಕಾರ್ಯಗಳನ್ನು ಮಾಡುವುದು;

ಆದರೆ, ಸ್ಥಿರಾಸ್ತಿಗಳನ್ನು ಪರಭಾರೆ ಮಾಡುವಾಗ ಅಥವಾ ಪರಾಧೀನ ಮಾಡುವಾಗ ಅಥವಾ ಇತರ ರೂಪದಲ್ಲಿ ಬಿಟ್ಟುಕೊಡುವಾಗ ಸರಕಾರದ ಪೂರ್ವಾನುಮತಿಯನ್ನು ಪಡೆದಿರತಕ್ಕದಾಗಿರುತ್ತದೆ.

(xxv) ಈ ಅಧಿನಿಯಮದ ಉಪಬಂಧಗಳಿಗೆ ವಿಧೇಯವಾಗಿ, ಕೇಂದ್ರ ಸರಕಾರದ, ಎ.ಐ.ಸಿ.ಟಿ.ಇ-ಯಿಂದಲೋ ಅಥವಾ ಇತರ ಏಕೀಕೃತ ನಿಕಾಯಗಳಿಂದಲೋ ಸರಕಾರ ಅಂಗೀಕರಿಸಬಹುದಾದಂತಹ ಅವಶ್ಯಕತೆಗಳಿಗಾಗಿ ಭದ್ರತೆಯ ಮೇಲೆಯೋ ಅಥವಾ ಅಲ್ಲದೆಯೋ ಹಣವನ್ನು ಸಾಲವಾಗಿ ಪಡೆಯುವುದು;

(xxvi) ಶಾಸನಗಳು, ಆರ್ಡಿನನ್ಸ್‌ಗಳು, ರೆಗ್ಯುಲೇಶನ್‌ಗಳು ಇತ್ಯಾದಿಗಳನ್ನು ರಚಿಸುವುದು ಹಾಗೂ ಅದಕ್ಕೆ ತಿದ್ದುಪಡಿ ಮಾಡುವುದು ಅಥವಾ ಮಾರ್ಪಾಟುಗೊಳಿಸುವುದು ಅಥವಾ ರದ್ದುಗೊಳಿಸುವುದೋ ಮಾಡುವುದು;

(xxvii) ಸಾಮಾನ್ಯವಾಗಿ, ಈ ಅಧಿನಿಯಮದ ಗುರಿಗಳನ್ನು ಮತ್ತು ಅವಶ್ಯಕತೆಗಳನ್ನು ನೆರವೇರಿಸಲು ಅಗತ್ಯವಾಗುವಂತಹ ಇತರ ಕಾರ್ಯಗಳನ್ನು ಮಾಡುವುದು.

9. ಸರಕಾರದ ನಿಯಂತ್ರಣ.—(1) ಸರಕಾರದ ಪೂರ್ವಾನುಮತಿಯಿಲ್ಲದೆ, ವಿಶ್ವವಿದ್ಯಾಲಯವು,—

(i) ಅಧ್ಯಾಪಕರ, ಅಧಿಕಾರಿಗಳ ಅಥವಾ ಇತರ ನೌಕರರ ಯಾವುದಾದರೂ ಹೊಸ ಹುದ್ದೆಗಳನ್ನು ಸೃಷ್ಟಿಸುವುದೋ;

(ii) ಅದರ ಅಧ್ಯಾಪಕರ, ಅಧಿಕಾರಿಗಳ ಅಥವಾ ಇತರ ನೌಕರರು ಮುಂತಾದವರ ಸಂಬಳ, ಭತ್ಯೆಗಳು, ನಿವೃತ್ತಿ ಹೊಂದಿದ ನಂತರದ ಸೌಲಭ್ಯಗಳು, ಇತರ ಸೌಲಭ್ಯಗಳು ಮುಂತಾದವುಗಳನ್ನು ಪರಿಷ್ಕರಿಸುವುದೋ;

(iii) ಅದರ ಯಾವುದಾದರೂ ಅಧ್ಯಾಪಕರಿಗೆ, ಅಧಿಕಾರಿಗಳಿಗೆ ಇತರ ನೌಕರರಿಗೆ, ಎಕ್ಸ್‌ಗ್ರೇಶ್ಯ ಪೇಮೆಂಟ್ ಅಥವಾ ಆರ್ಥಿಕ ಬಾಧ್ಯತೆಯಿರುವ ಇತರ ಸೌಲಭ್ಯಗಳನ್ನು ಒಳಗೊಂಡು ಯಾವುದಾದರೂ ಪ್ರತ್ಯೇಕ ಸಂಬಳ, ಭತ್ಯೆಗಳು ಅಥವಾ ಯಾವುದಾದರೂ ರೀತಿಯಲ್ಲಿರುವ ಇತರ ಅಧಿಕ ವೇತನ ಅನುಮತಿಸುವುದೋ;

(iv) ಯಾವುದಾದರೂ ಪ್ರತ್ಯೇಕ ಅವಶ್ಯಕತೆಗಾಗಿ ತೆಗೆದಿರಿಸಲ್ಪಟ್ಟ ಯಾವುದೇ ನಿಧಿಗಳನ್ನು ಅದು ಯಾವ ಅವಶ್ಯಕತೆಗೆ ಲಭಿಸಿದೆಯೋ ಆ ಅವಶ್ಯಕತೆಗಳಿಗಲ್ಲದೆ ಬೇರೆ ಯಾವುದೇ ಇತರ ಅವಶ್ಯಕತೆಗಳಿಗಾಗಿ ವರ್ಗಾಯಿಸುವುದೋ;

(v) ಸರಕಾರಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಧಿಕ ಆರ್ಥಿಕ ಬಾಧ್ಯತೆಯನ್ನುಂಟು ಮಾಡುವಂತಹ ಸಂಯೋಜಿಸಲ್ಪಟ್ಟ ಕಾಲೇಜುಗಳಿಗೆ ಸಂಬಂಧಿಸಿ ಯಾವುದಾದರೂ ನಿರ್ಣಯವನ್ನು ಕೈಗೊಳ್ಳುವುದೋ;

ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಹಾಗೂ ಅದರಡಿಯಲ್ಲಿ ಮಾಡಲಾಗುವಂತಹ ಶಾಸನಗಳಲ್ಲಿ ನಿರ್ದಿಷ್ಟಗೊಳಿಸುವಂತಹ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಅಥವಾ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಶ್ವವಿದ್ಯಾಲಯವು ಲೋಪವೆಸಗಿದ ಸಂದರ್ಭದಲ್ಲಿ, ಅಥವಾ ವಿಶ್ವವಿದ್ಯಾಲಯವು ಸೂಕ್ತವಾದ ರೀತಿಯಲ್ಲಿ ಅಂತಹ ಅಧಿಕಾರಗಳನ್ನು ಚಲಾಯಿಸುವುದೋ ಕರ್ತವ್ಯಗಳನ್ನು ನಿರ್ವಹಿಸುವುದೋ ಮಾಡದಿದ್ದಲ್ಲಿ ಅಥವಾ ಸರಕಾರವು ಹೊರಡಿಸಿದ ಯಾವುದಾದರೂ ಆದೇಶವನ್ನು ಪಾಲಿಸುವುದರಲ್ಲಿ ಲೋಪವೆಸಗಿದಲ್ಲಿ ಸರಕಾರವು, ಅದಕ್ಕೆ ಸೂಕ್ತವೆಂದು ತೋರುವಂತಹ ತನಿಖೆಯನ್ನು ಮಾಡಿದ ನಂತರ ವಿಶ್ವವಿದ್ಯಾಲಯಕ್ಕೆ ಅಂತಹ ಅಧಿಕಾರಗಳನ್ನು ಸರಿಯಾಗಿ ನಿರ್ವಹಿಸಲು ಅಥವಾ ಅಂತಹ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಆದೇಶಗಳನ್ನು ಪಾಲಿಸುವುದಕ್ಕೆ ಒಂದು ನಿರ್ದೇಶವನ್ನು ನೀಡಬಹುದಾಗಿದೆ ಹಾಗು ಅಂತಹ ನಿರ್ದೇಶವನ್ನು ಪಾಲಿಸುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿರುವುದಾಗಿದೆ.

(3) ಪ್ರಸಕ್ತ ಅಧಿನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಹಾಗೂ ಸರಕಾರಕ್ಕೆ ಉಚಿತವೆಂದು ತೋರುವ ರೀತಿಯಲ್ಲಿ, ವಿಶ್ವವಿದ್ಯಾಲಯದ ಅಥವಾ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಕೋನ್‌ಸ್ಟಿಟ್ಯುವಂಟ್ ಕಾಲೇಜುಗಳ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಅಂತಹ ಅಂತರಗಳಲ್ಲಿ ವಾಡಿಕೆಯಾಗಿ ಕಂಟ್ರೋಲರ್ ಆಂಡ್ ಆಡಿಟರ್ ಜನರಲ್ ಹಾಗು ಸರಕಾರವು ನಡೆಸತಕ್ಕದ್ದು.

## ಅಧ್ಯಾಯ III

## ಕುಲಾಧಿಪತಿ, ಸಹ ಕುಲಾಧಿಪತಿ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳು

10. ಕುಲಾಧಿಪತಿ.—(1) ಕೇರಳದ ರಾಜ್ಯಪಾಲರು, ಅವರ ಅಧಿಕೃತ ಸ್ಥಾನದ ನಿಮಿತ್ತದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುತ್ತಾರೆ.

(2) ಕುಲಾಧಿಪತಿಯವರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರುವರು ಹಾಗೂ ಅವರು ಉಪಸ್ಥಿತರಾಗಿರುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಕುಲಾಧಿಪತಿಯವರು, ಕುಲಪತಿಯವರಿಂದ ಲಿಖಿತ ಮುಖೇನ ವರದಿಯನ್ನು ಪಡೆದ ಬಳಿಕ ಯಾವುದಾದರೂ ಪ್ರಾಧಿಕಾರ, ನಿಕಾಯ, ಸಮಿತಿ ಅಥವಾ ಅಧಿಕಾರಿಯ ಯಾವುದಾದರೂ ನಿರ್ಣಯವನ್ನು, ಆದೇಶವನ್ನು ಪ್ರಕ್ರಿಯೆಗಳನ್ನು ಕುಲಾಧಿಪತಿಯವರ ಅಭಿಪ್ರಾಯದಲ್ಲಿ ಅದು ಈ ಅಧಿನಿಯಮಕ್ಕೆ, ಶಾಸನಗಳಿಗೆ, ಆರ್ಡಿನನ್ಸ್‌ಗಳು ಅಥವಾ ರೆಗ್ಯುಲೇಶನ್‌ಗಳಿಗುಣವಾಗಿಲ್ಲವೆಂದೋ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ವಿರುದ್ಧವಾಗಿರುವುದೆಂದೋ ಆಗಿದ್ದಲ್ಲಿ ಅವುಗಳನ್ನು ಅಮಾನತು ಪಡಿಸುವುದೋ ಮಾರ್ಪಾಟುಪಡಿಸುವುದೋ ಮಾಡಬಹುದಾಗಿದೆ ಹಾಗು ವಿಶ್ವವಿದ್ಯಾಲಯ, ಪ್ರಾಧಿಕಾರ, ನಿಕಾಯ, ಸಮಿತಿ ಹಾಗೂ ಅಧಿಕಾರಿಯು ಅದನ್ನು ಪಾಲಿಸತಕ್ಕದ್ದು:

ಆದರೆ, ಅಂತಹ ಯಾವುದಾದರೂ ಆದೇಶವನ್ನು ಹೊರಡಿಸುವ ಮೊದಲು ಕುಲಾಧಿಪತಿಯವರು, ಆಯಾಯ ಸಂಗತಿಯಂತೆ, ವಿಶ್ವವಿದ್ಯಾಲಯವನ್ನೋ, ಪ್ರಾಧಿಕಾರವನ್ನೋ, ನಿಕಾಯವನ್ನೋ, ಸಮಿತಿಯನ್ನೋ, ಅಧಿಕಾರಿಯನ್ನೋ ಅಂತಹ ಒಂದು ಆದೇಶವನ್ನು ಯಾಕೆ ಹೊರಡಿಸಬಾರದೆಂಬುದಕ್ಕಿರುವ ಕಾರಣವನ್ನು ನಿಗದಿಪಡಿಸಿದ ಅವಧಿಯೊಳಗೆ ನೀಡಲು ಅವಶ್ಯಪಡತಕ್ಕದ್ದು ಹಾಗೂ ಯಾವುದಾದರೂ ಕಾರಣವನ್ನು ನೀಡುವುದಾದಲ್ಲಿ, ಕುಲಾಧಿಪತಿಯವರು ಅದನ್ನು ಪರಿಗಣಿಸಬೇಕಾಗಿದ್ದು, ಹಾಗೂ ಎಲ್ಲೆಲ್ಲ ಅದು ಅಗತ್ಯವೆಂದು ಅವರು ಭಾವಿಸುತ್ತಾರೋ ಅಲ್ಲೆಲ್ಲ ಸರಕಾರದೊಂದಿಗೆ ಸಮಾಲೋಚನೆ ಮಾಡಿದ ಮೇಲೆ ಪ್ರಸ್ತುತ ವಿಷಯದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸತಕ್ಕದ್ದು ಹಾಗೂ ಅಂತಹ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ನಿಧಿಯ ದುರುಪಯೋಗ, ದುರ್ನಡತೆ, ದುರಾಡಳಿತ ಹಾಗೂ ಬೇರೆ ಯಾವುದಾದರೂ ಸೂಕ್ತ ಹಾಗೂ ಯೋಗ್ಯವಾದ ದೋಷಾರೋಪಣೆ ಇತ್ಯಾದಿಗಳ ಮೇಲೆ, ಸರಕಾರದ ಶಿಫಾರಸಿನ ಮೇರೆಗೆ ಅಥವಾ ಬೇರೆ ರೀತಿಯಲ್ಲಿ ಕುಲಾಧಿಪತಿಯವರಿಗೆ ಮನದಟ್ಟಾಗುವಲ್ಲಿ ಒಂದು ಲಿಖಿತ ಆದೇಶದ ಮೂಲಕ ಕುಲಪತಿಯನ್ನು ಅಧಿಕೃತ ಸ್ಥಾನದಿಂದ ವಜಾಗೊಳಿಸಲು ಕುಲಾಧಿಪತಿಯವರಿಗೆ ಅಧಿಕಾರವಿರುವುದಾಗಿದೆ:

ಆದರೆ, ಈ ಉಪವಿಭಾಗದ ಪ್ರಕಾರ ಕ್ರಮ ಕೈಗೊಳ್ಳುವ ಮೊದಲು ಅಂತಹ ಆರೋಪಗಳಲ್ಲಿ ಕುಲಾಧಿಪತಿಯವರಿಗೆ ಯುಕ್ತ ತನಿಖೆಯಲ್ಲಿ ಆರೋಪದ ನಿಜಸ್ಥಿತಿಯು ಮನದಟ್ಟಾಗಿರತಕ್ಕದ್ದು. ಅದೂ ಅಲ್ಲದೆ, ಕುಲಪತಿಯವರನ್ನು ಅವರ ವಿರುದ್ಧವಾಗಿ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಕಾರಣ ನೀಡಲು ನ್ಯಾಯಯುತವಾದ ಒಂದು ಅವಕಾಶವನ್ನು ನೀಡದಿದ್ದಲ್ಲಿ, ಈ ವಿಭಾಗದ ಪ್ರಕಾರ ವಜಾಮಾಡತಕ್ಕದ್ದಲ್ಲ.

(5) ಕುಲಾಧಿಪತಿಯವರು ಈ ಅಧಿನಿಯಮದ ಪ್ರಕಾರ ಅಥವಾ ಶಾಸನಗಳ ಪ್ರಕಾರ ಅಥವಾ ಅದರಡಿಯಲ್ಲಿ ನೀಡಿದಂತಹ ಅಥವಾ ನಿಹಿತವಾಗಿರುವಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

11. ಸಹ-ಕುಲಾಧಿಪತಿ.—(1) ರಾಜ್ಯದ ಶಿಕ್ಷಣದ ಜವಾಬ್ದಾರಿ ಇರುವ ಸಚಿವರು ಅವರ ಅಧಿಕೃತ ಸ್ಥಾನದ ನಿಮಿತ್ತದಿಂದಾಗಿ ವಿಶ್ವವಿದ್ಯಾಲಯದ ಸಹಕುಲಾಧಿಪತಿಯಾಗಿರುವರು.

(2) ಕುಲಾಧಿಪತಿಯವರ ಗೈರುಹಾಜರಿಯಲ್ಲಿ ಅಥವಾ ಅವರಿಗೆ ಕಾರ್ಯನಿರ್ವಹಿಸಲು ಅಸಾಧ್ಯವಾದ ಸಂದರ್ಭದಲ್ಲಿ, ಸಹ ಕುಲಾಧಿಪತಿಯವರು ಕುಲಾಧಿಪತಿಯವರ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಚಟುವಟಿಕೆಯ ವಾರ್ಷಿಕ ಕಾರ್ಯಯೋಜನೆಯನ್ನು ಸಹಕುಲಾಧಿಪತಿಯವರಿಗೆ ಅವರ ಅವಗಾಹನೆಗಾಗಿ ಸಲ್ಲಿಸತಕ್ಕದು ಹಾಗೂ ಅವರು ನೀಡುವ ಯಾವುದೇ ನಿರ್ದೇಶವನ್ನು ಬೋರ್ಡ್ ಓಫ್ ಗವರ್ನರ್ಸ್ ಪರಿಗಣಿಸಬಹುದಾಗಿದೆ.

(4) ಕುಲಾಧಿಪತಿಯವರು ಲಿಖಿತ ಆದೇಶದ ಮೂಲಕ ಸಹ-ಕುಲಾಧಿಪತಿಯವರಿಗೆ ವಹಿಸಿಕೊಡುವಂತಹ ಕುಲಾಧಿಪತಿಯುವರ ಅಂತಹ ಅಧಿಕಾರಗಳನ್ನೂ ಕೂಡ ಸಹಕುಲಾಧಿಪತಿಯವರು ಚಲಾಯಿಸತಕ್ಕದ್ದು ಹಾಗೂ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಹಾಗೇ ವಹಿಸಿಕೊಟ್ಟಂತಹ ಅಧಿಕಾರಗಳು ಅಂತಹ ಆದೇಶದಲ್ಲಿ ಹೇಳಿರುವಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ವಿಧೇಯವಾಗಿರುವುದಾಗಿದೆ.

12. ವಿಶ್ವವಿದ್ಯಾಲಯದ ಅಧಿಕಾರಿಗಳು.—ಕೆಳಗೆ ಹೇಳಿರುವಂತಹ ಅಧಿಕಾರಿಗಳು ವಿಶ್ವವಿದ್ಯಾಲಯ ಅಧಿಕಾರಿಗಳಾಗಿರುತ್ತಾರೆ, ಅದೇನೆಂದರೆ:—

(i) ಕುಲಪತಿ;

(ii) ಉಪ-ಸಹ-ಕುಲಾಧಿಪತಿ;

(iii) ಕುಲ ಸಚಿವರು;

(iv) ಆರ್ಥಿಕ ಅಧಿಕಾರಿ;

(v) ಪರೀಕ್ಷಾ ನಿಯಂತ್ರಕ;

(vi) ಡೀನ್ (ಸಂಶೋಧನೆ);

(vii) ಡೀನ್ (ಶೈಕ್ಷಣಿಕ);

(viii) ವಿಶ್ವವಿದ್ಯಾಲಯದ ಅಧಿಕಾರಿಗಳಾಗಿ ಶಾಸನಗಳ ಮೂಲಕ ಘೋಷಿಸಲ್ಪಡುವ ವಿಶ್ವವಿದ್ಯಾಲಯದ ಸೇವೆಯಲ್ಲಿರುವಂತಹ ಇತರ ವ್ಯಕ್ತಿಗಳು.

13. ಕುಲಪತಿ.—(1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯ ನಿರ್ವಾಹಕ ಹಾಗೂ ಶೈಕ್ಷಣಿಕ ಅಧಿಕಾರಿ ಆಗಿರುತ್ತಾರೆ. ಅವರು ಕಾರ್ಯನಿರ್ವಾಹಕ ಸಮಿತಿ ಹಾಗೂ ಶೈಕ್ಷಣಿಕ ಸಮಿತಿಯ ಪದನಿಮಿತ್ತ ಚೇರ್‌ಮಾನ್ ಆಗಿರುತ್ತಾರೆ.

(2) ಪ್ರಥಮ ಕುಲಪತಿಯನ್ನು ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಿಯಮಿಸತಕ್ಕದ್ದು ಹಾಗೂ ಅನಂತರದ ಕುಲಪತಿಯವರನ್ನು ಕೆಳಗೆ ಹೇಳಿರುವ ಸದಸ್ಯರುಗಳನ್ನು ಒಳಗೊಂಡ ಒಂದು ತನಿಖಾ ಸಮಿತಿಯು ಶಿಫಾರಸು ಮಾಡುವ ಪ್ಯಾನಲಿನಲ್ಲಿರುವ ಹೆಸರುಗಳಿಂದ ಕುಲಾಧಿಪತಿಯವರು ನಿಯಮಿಸತಕ್ಕದ್ದಾಗಿದೆ, ಅದೇನೆಂದರೆ:—

(i) ಬೋರ್ಡ್ ಓಫ್ ಗವರ್ನರ್ಸ್ ಆಯ್ಕೆಮಾಡಿದ ಓರ್ವ ಸದಸ್ಯ;

(ii) ಎ.ಐ.ಸಿ.ಟಿ.ಇ. ಯು ನಾಮನಿರ್ದೇಶಿಸಿದ ಓರ್ವ ಸದಸ್ಯ:

(iii) ರಾಜ್ಯದ ಮುಖ್ಯಕಾರ್ಯದರ್ಶಿ, ಅವರು ಸಮಿತಿಯ ಸಂಚಾಲಕವಾಗಿರುವರು.

(3) ಕುಲಪತಿಯವರ ಸ್ಥಾನವು ತೆರವಾಗುವ ಸಾಧ್ಯತೆಯಿರುವ ದಿನಾಂಕದಿಂದ ಕನಿಷ್ಟ ಮೂರು ತಿಂಗಳಿಗಿಂತ ಮೊದಲು ಪ್ಯಾನಲನ್ನು ಸಿದ್ದಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿರತಕ್ಕದ್ದು ಹಾಗೂ ಕುಲಾಧಿಪತಿಯವರು ನಿಶ್ಚಯಿಸಿದ ಕಾಲಾವಧಿಯೊಳಗೆ ಪೂರ್ತಿಗೊಳಿಸಿರತಕ್ಕದ್ದು. ಹಾಗಿದ್ದರೂ, ಕುಲಾಧಿಪತಿಯವರಿಗೆ, ಅನಿವಾರ್ಯವಾದ ಸಂದರ್ಭಗಳಲ್ಲಿ ಹಾಗೇ ಮಾಡುವುದು ಅಗತ್ಯವಾಗಿದ್ದಲ್ಲಿ ಅಂತಹ ಕಾಲಾವಧಿಯನ್ನು ವಿಸ್ತರಿಸಬಹುದಾಗಿದೆ. ಹಾಗಿದ್ದರೂ, ಹಾಗೆ ವಿಸ್ತರಿಸಿದ ಕಾಲಾವಧಿಯನ್ನೊಳಗೊಂಡು ಮೂರು ತಿಂಗಳೊಳಗೆ ಪ್ಯಾನಲನ್ನು ಸಿದ್ದಪಡಿಸುವ ಪ್ರಕ್ರಿಯೆಯನ್ನು ಪೂರ್ತಿಗೊಳಿಸತಕ್ಕದ್ದಾಗಿದೆ.

(4) ಎಂಜಿನಿಯರಿಂಗ್ ವಿಜ್ಞಾನ ಕ್ಷೇತ್ರದಲ್ಲಿನ ತಜ್ಞರಾದ ವ್ಯಕ್ತಿಗಳಿಂದ ಯೋಗ್ಯರಾದ ಮೂರು ಮಂದಿಗಿಂತ ಕಡಿಮೆಯಲ್ಲದ ಪ್ಯಾನಲನ್ನು ಸಮಿತಿಯು ಸರ್ವಾನುಮತದಿಂದ ಶಿಫಾರಸು ಮಾಡತಕ್ಕದ್ದು. ಹೆಸರುಗಳು ಇಂಗ್ಲೀಷ್ ಅಕ್ಷರಮಾಲೆಯ ಕ್ರಮದಲ್ಲಿರತಕ್ಕದ್ದು. ಪ್ಯಾನಲಲ್ಲಿ ಒಳಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯ ಯೋಗ್ಯತೆಯ ಕುರಿತಿರುವ ಕೂಲಂಕಷವಾದ ಒಂದು ಟಿಪ್ಪಣಿಯನ್ನು ವರದಿಯೊಂದಿಗೆ ಸೇರಿಸತಕ್ಕದ್ದು. ನಿಬಂಧನೆಯ ಪ್ರಕಾರ ಸರ್ವಾನುಮತದಿಂದ ಒಂದು ಶಿಫಾರಸನ್ನು ಮಾಡಲು ಸಮಿತಿಯೂ ವಿಫಲವಾದ ಸಂದರ್ಭದಲ್ಲಿ ಸಮಿತಿಯಲ್ಲಿನ ಪ್ರತಿಯೊಬ್ಬ ಸದಸ್ಯರು ತಲಾ ಒಬ್ಬ ಹೆಸರನ್ನು ಕುಲಾಧಿಪತಿಯವರಿಗೆ ಸಮರ್ಪಿಸಬಹುದಾಗಿದೆ. ಸಮಿತಿಯ ಯಾವುದಾದರೂ ಒಬ್ಬ ಸದಸ್ಯನು ಹೆಸರನ್ನು ಸಮರ್ಪಿಸದೆ ಇರುವುದರಿಂದ ಕುಲಪತಿಯ ನೇಮಕಾತಿಯು ಅಸಿಂಧುವಾಗುವುದಲ್ಲ.

(5) ಅರುವತ್ತೊಂದು ವರ್ಷಕ್ಕಿಂತಲೂ ಹೆಚ್ಚು ಪ್ರಾಯವಿರುವ ಯಾವುದೇ ವ್ಯಕ್ತಿಯನ್ನು ಕುಲಪತಿಯನ್ನಾಗಿ ನಿಯಮಿಸತಕ್ಕದ್ದಲ್ಲ ಹಾಗೂ ನೇಮಕಾತಿಯ ನಂತರ ಅವರ ನೇಮಕಾತಿಯ ನಿಬಂಧನೆಗಳು ಹಾಗೂ ಶರತ್ತುಗಳಿಗೆ ವಿಧೇಯವಾಗಿ ಅವರು ಪದಗ್ರಹಣ ಮಾಡುವ ದಿನಾಂಕದಿಂದ ನಾಲ್ಕು ವರ್ಷದ ಕಾಲಾವಧಿಯವರೆಗೆ ಅಥವಾ ಅವರಿಗೆ ಅರುವತ್ತೈದು ವರ್ಷವಯಸ್ಸು ಪೂರ್ತಿಯಾಗುವವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ, ಹುದ್ದೆಯನ್ನು ವಹಿಸತಕ್ಕದ್ದು.

(6) (5)ನೇ ಉಪವಿಭಾಗದಲ್ಲಿ ಹೇಳಿರುವಂತಹ ಗರಿಷ್ಠ ವಯಸ್ಸನ್ನು ಪೂರ್ತಿಗೊಳಿಸಿಲ್ಲಯೆಂಬುವುದಕ್ಕೊಳ್ಳಪಟ್ಟು ಕುಲಪತಿಯಾಗಿ ನೇಮಿಸಲ್ಪಟ್ಟಂತಹ ವ್ಯಕ್ತಿಗಳಿಗೆ ಮರುನೇಮಕಾತಿಗೆ ಅರ್ಹತೆಯಿರುವುದಾಗಿದೆ.

(7) ಈ ಕೆಳಗೆ ಹೇಳಿರುವಂತಹ ಯಾವುದಾದರೂ ಸಂದರ್ಭಗಳಲ್ಲಿ ಕುಲಪತಿ ಸ್ಥಾನದ ತೆರವು ಉಂಟಾದಲ್ಲಿ, ಸರಕಾರವು ಶಿಫಾರಸು ಮಾಡುವ ಬೇರೆ ಯಾವುದಾದರೂ ವಿಶ್ವವಿದ್ಯಾಲಯದ ಕುಲಪತಿಯನ್ನೋ ಈ ವಿಶ್ವವಿದ್ಯಾಲಯದ ಸಹ-ಕುಲಾಧಿಪತಿಯನ್ನೋ ಅಥವಾ ಉನ್ನತ ಶಿಕ್ಷಣ ಇಲಾಖಾ ಸರಕಾರೀ ಕಾರ್ಯದರ್ಶಿಯನ್ನೋ ಒಟ್ಟು ಆರು ತಿಂಗಳುಗಳು ಮೀರದ ಕಾಲಾವಧಿವರೆಗೆ ಕುಲಪತಿಯಾಗಿ ಕುಲಾಧಿಪತಿಯವರಿಗೆ ನಿಯಮಿಸಬಹುದಾಗಿದೆ, ಅದೇನೆಂದರೆ:—

(i) (2)ನೇ ಉಪವಿಭಾಗದಡಿಯಲ್ಲಿ ನಿಯಮಿಸಲ್ಪಟ್ಟ ಸಮಿತಿಗೆ ಕುಲಾಧಿಪತಿಯವರು ನಿಗದಿಪಡಿಸಿದಂತಹ ಕಾಲಾವಧಿಯೊಳಗೆ ಯಾವುದಾದರೂ ಹೆಸರನ್ನು ಶಿಫಾರಸು ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ;

(ii) ನಿಧನ ಹೊಂದಿರುವುದರಿಂದಾಗಿ, ರಾಜಿನಾಮೆ ನೀಡಿರುವುದರಿಂದಾಗಿ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಕುಲಪತಿಯವರ ಅಧಿಕೃತ ಸ್ಥಾನದಲ್ಲಿ ತೆರವು ಉಂಟಾದಾಗ ಹಾಗು (1) ರಿಂದ (5)ರ ವರೆಗಿನ ಉಪವಿಭಾಗಗಳ ಉಪಬಂಧಗಳಿಗನುಗುಣವಾಗಿ ಅನುಕೂಲಕರವಾಗಿಯೂ ತ್ವರಿತವಾಗಿಯೂ ಅದನ್ನು ಭರ್ತಿಮಾಡಲು ಸಾಧ್ಯವಾಗದ ಸಂದರ್ಭದಲ್ಲಿ;

(iii) ರಜೆ, ಅಸೌಖ್ಯ ಅಥವಾ ಬೇರೆ ಯಾವುದಾದರೂ ಕಾರಣಗಳಿಂದ ಕುಲಪತಿಯವರ ಅಧಿಕೃತ ಸ್ಥಾನದ ತಾತ್ಕಾಲಿಕವಾದ ತೆರವು ಉಂಟಾಗುವಲ್ಲಿ;

(iv) ಕುಲಪತಿಯವರ ಅಧಿಕೃತ ಸ್ಥಾನದ ಕಾಲಾವಧಿಯು ಕೊನೆಗೊಳ್ಳುವಲ್ಲಿ;

(v) ಬೇರೆ ಯಾವುದಾದರೂ ತುರ್ತು ಸಂದರ್ಭದಲ್ಲಿ;

ಆದರೆ, ಹಾಗೇ ನಿಯಮಿಸಲ್ಪಟ್ಟಂತಹ ವ್ಯಕ್ತಿಯ, ಅಂತಹ ಅಧಿಕೃತ ಪದಾವಧಿಯು ಕಲಪತಿಯವರು ಅಧಿಕೃತ ಸ್ಥಾನಕ್ಕೆ ಮರಳಿ ಪ್ರವೇಶಿಸುವ ದಿನಾಂಕದಿಂದ ಕೊನೆಗೊಳ್ಳುವುದಾಗಿದೆ.

(8) ಕುಲಪತಿಯವರು ವಿಶ್ವವಿದ್ಯಾಲಯದ ಒಂದು ಪೂರ್ಣಕಾಲ ಸಂಬಳ ಪಡೆಯುವಂತಹ ಅಧಿಕಾರಿಯಾಗಿರುತ್ತಾರೆ.

(9) ಕುಲಪತಿಯವರಿಗೆ ನೀಡಬೇಕಾದಂತಹ ವೇತನ ಹಾಗೂ ಇತರ ಸೇವಾಷರತ್ತುಗಳು ಶಾಸನಗಳ ಪ್ರಕಾರ ಗೊತ್ತುಪಡಿಸಿದ ಪ್ರಕಾರವಾಗಿರತಕ್ಕದ್ದು.

(10) ಸರಕಾರವು ಆಯಾಯ ಕಾಲಗಳಲ್ಲಿ ಅಂಗೀಕರಿಸುವ ಅಥವಾ ಶಾಸನಗಳ ಪ್ರಕಾರ ನಿಗದಿ ಪಡಿಸಬಹುದಾದಂತಹ ಆತಿಥ್ಯ ಭತ್ಯೆಯನ್ನು ಕುಲಪತಿಯವರ ವಿನಿಯೋಗಕ್ಕಾಗಿ ನೀಡತಕ್ಕದ್ದು.

(11) ಕುಲಪತಿಯವರು ಸ್ವಂತ ಹಸ್ತಾಕ್ಷರದಲ್ಲಿ ಬರೆದು ಕುಲಾಧಿಪತಿಯವರನ್ನು ಸಂಬೋಧಿಸಿ, ಒಂದು ತಿಂಗಳಿನ ಸೂಚನೆಯನ್ನು ಕುಲಾಧಿಪತಿಯವರಿಗೆ ನೀಡಿದ ನಂತರ, ಅವರ ಅಧಿಕೃತ ಸ್ಥಾನಕ್ಕೆ ರಾಜಿನಾಮೆಯನ್ನು ನೀಡಬಹುದಾಗಿದೆ ಹಾಗು ಕುಲಾಧಿಪತಿಯವರು

ರಾಜಿನಾಮೆಯನ್ನು ಸ್ವೀಕರಿಸುವುದರೊಂದಿಗೋ ಅಥವಾ ಪ್ರಸ್ತುತ ಸೂಚನೆಯ ಕಾಲಾವಧಿಯು ಕೊನೆಗೊಳ್ಳುವ ದಿನಾಂಕದಂದೋ, ಯಾವುದು ಮೊದಲು ಬರುವುದೋ, ಅಂದು ಅಧಿಕೃತ ಸ್ಥಾನವು ಕೊನೆಗೊಳ್ಳುವುದಾಗಿರುತ್ತದೆ.

(12) ಕುಲಾಧಿಪತಿಯರಿಗೆ ಮನದಟ್ಟಾದಲ್ಲಿ, ಕುಲಪತಿಯನ್ನು ಅಧಿಕೃತ ಸ್ಥಾನದಿಂದ, ಅವರು,—

(i) ಬುದ್ಧಿಭ್ರಮಣೆಯಿರುವ ವ್ಯಕ್ತಿಯಾದಾಗ ಹಾಗೂ ಒಂದು ಸಕ್ಷಮ ಪ್ರಾಧಿಕಾರವು ಆ ರೀತಿ ಘೋಷಿಸಿದ್ದಲ್ಲಿ;

(ii) ನೈತಿಕ ಅಧಪತನವು ಒಳಗೊಂಡ ಯಾವುದಾದರೂ ಒಂದು ಅಪರಾಧದಲ್ಲಿ ಒಂದು ನ್ಯಾಯಾಲಯದಿಂದ ಶಿಕ್ಷಿಸಲ್ಪಟ್ಟಲ್ಲಿ;

(iii) ಒಬ್ಬ ದಿವಾಳಿಖೋರನಾದಾಗ ಹಾಗು ಒಂದು ಸಕ್ಷಮ ಪ್ರಾಧಿಕಾರವು ಆ ರೀತಿ ಘೋಷಿಸಿದ್ದಲ್ಲಿ;

(iv) ದೀರ್ಘಕಾಲದ ರೋಗದಿಂದ ಅಥವಾ ಶಾರೀರಿಕವಾದ ವಿಕಲತೆಯ ಕಾರಣದಿಂದಾಗಿ ಕರ್ತವ್ಯಗಳನ್ನು ನಿರ್ವಹಿಸಲು ಶಾರೀರಿಕವಾಗಿ ದುರ್ಬಲನಾದಲ್ಲಿ ಹಾಗೂ ಅಸಮರ್ಥನಾದಲ್ಲಿ;

ವಜಾಮಾಡಬಹುದಾಗಿದೆ:

ಆದರೆ, ಅಧಿಕೃತ ಸ್ಥಾನವನ್ನು ವಹಿಸುತ್ತಿರುವ ಕುಲಪತಿಯವರನ್ನು (iv)ನೇ ಖಂಡದ ಪ್ರಕಾರ ವಜಾ ಮಾಡಲು ಕ್ರಮಕೈಗೊಳ್ಳುವುದಕ್ಕಿಂತ ಮೊದಲು ಅವರಿಗೆ ಕಾರಣ ತೋರಿಸಲು ನ್ಯಾಯಯುತವಾದ ಒಂದು ಅವಕಾಶವನ್ನು ಕುಲಾಧಿಪತಿಯವರು ನೀಡತಕ್ಕದ್ದಾಗಿದೆ.

(v) ಈ ಅಧಿನಿಯಮಕ್ಕೆ, ನಿಯಮಗಳಿಗೆ, ಶಾಸನಗಳಿಗೆ ಹಾಗೂ ರೆಗ್ಯುಲೇಶನ್‌ಗಳಿಗೆ ವಿರುದ್ದವಾಗಿ ಅಧಿಕಾರ ದುರ್ಬಳಕೆ ಮಾಡುವುದೋ, ನಿರ್ಣಯಿಸಲ್ಪಟ್ಟ ಅಧಿಕಾರ ವ್ಯಾಪ್ತಿಯನ್ನು ಉಲ್ಲಂಘಿಸಿ ಮಾಡಿದಂತಹ ಚಟುವಟಿಕೆಗಳಿಂದಲೋ ಆಡಳಿತಾತ್ಮಕ ಸ್ಥಗಿತ ಉಂಟಾಗುತ್ತಿದೆಯೆಂದು ಸರಕಾರಕ್ಕೆ ಮನದಟ್ಟಾದಲ್ಲಿ ಕುಲಪತಿಯವರನ್ನು ಆ ಸ್ಥಾನದಿಂದ ವಜಾಮಾಡುವುದಕ್ಕೆ ಕುಲಾಧಿಪತಿಯುವರಿಗೆ ಶಿಫಾರಸು ಮಾಡಲು ಸರಕಾರಕ್ಕೆ ಅಧಿಕಾರವಿರುವುದಾಗಿದೆ.

14. ಕುಲಪತಿಯವರ ಅಧಿಕಾರಗಳು.—(1) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ-ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುತ್ತಾರೆ. ಅವರು ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳ ಅಭಿವೃದ್ಧಿಗೆ ಜವಾಬ್ದಾರಿಯುತರಾಗಿರುತ್ತಾರೆ. ವಿಶ್ವವಿದ್ಯಾಲಯದ ದಕ್ಷತೆಯನ್ನು ಹಾಗೂ ಸುವ್ಯವಸ್ಥೆಯನ್ನು ಖಾತ್ರಿಪಡಿಸುವುದಕ್ಕಾಗಿ ಅವರು ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳ ಹಾಗೂ ಆಡಳಿತದ ಹಾಗೂ ಸಾಮಾನ್ಯ ಆಡಳಿತದ ಮೇಲ್ವಿಚಾರಣೆ ಹಾಗೂ ನಿರ್ವಹಣೆ ಮಾಡತಕ್ಕದ್ದಾಗಿದೆ.

(2) ಕುಲಪತಿಯವರಿಗೆ ಯಾವುದಾದರೂ ಪ್ರಾಧಿಕಾರಗಳ, ನಿಕಾಯಗಳ ಅಥವಾ ಸಮಿತಿಗಳ ಸಭೆಗಳು, ಆ ರೀತಿ ಸಭೆ ಸೇರಬೇಕಾಗಿರುವುದು ಅಗತ್ಯವೆಂದು ಅವರಿಗೆ ತೋರುವಾಗಲೆಲ್ಲಾ, ಸಭೆ ಕರೆಯಲು ಅಧಿಕಾರವಿರುವುದಾಗಿರುತ್ತದೆ.

(3) ಬೋರ್ಡ್ ಓಫ್ ಗವರ್ನರ್ಸ್ ಹೊರಡಿಸುವಂತಹ ನಿರ್ದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೆಂದೂ ಅಥವಾ ಜಾರಿಗೊಳಿಸಲಾಗುತ್ತಿದೆಯೆಂದೂ ಕುಲಪತಿಯವರು ಖಾತ್ರಿಪಡಿಸತಕ್ಕದ್ದಾಗಿದೆ.

(4) ವಿಶ್ವವಿದ್ಯಾಲಯದ ಕ್ರಮಗಳನ್ನು ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸುಗಳ ಹಾಗೂ ರೆಗ್ಯುಲೇಶನ್‌ಗಳ ಉಪಬಂಧಗಳಿಗನುಗುಣವಾಗಿ ಜಾರಿಗೊಳಿಸಲಾಗುತ್ತಿದೆಯೆಂದು ಹಾಗೂ ಪ್ರಾಧಿಕಾರಿಗಳ, ನಿಕಾಯಗಳ ಹಾಗೂ ಸಮಿತಿಗಳ ನಿರ್ಣಯಗಳು ಈ ಅಧಿನಿಯಮಕ್ಕೆ, ಶಾಸನಗಳಿಗೆ, ಆರ್ಡಿನನ್ಸುಗಳಿಗೆ ಮತ್ತು ರೆಗ್ಯುಲೇಶನ್‌ಗಳಿಗೆ ಅಸಂಗತವಲ್ಲವೆಂದು ಖಾತ್ರಿಪಡಿಸುವುದು ಕುಲಪತಿಯವರ ಕರ್ತವ್ಯವಾಗಿರುತ್ತದೆ.

(5) ತುರ್ತುಕ್ರಮ ಕೈಗೊಳ್ಳಬೇಕಾದಂತಹ ಒಂದು ಅತ್ಯಾವಶ್ಯಕತೆಯು ಇದೆಯೆಂದು ಭಾವಿಸಲು ಕುಲಪತಿಯವರಿಗೆ ಸಾಕಷ್ಟು ಕಾರಣಗಳಿದ್ದಲ್ಲಿ, ಅವರು ಅವಶ್ಯಕವೆಂದು ಭಾವಿಸುವಂತಹ ಕ್ರಮವನ್ನು ಅವರು ಕೈಗೊಳ್ಳಬಹುದಾಗಿದೆ ಹಾಗು ಆದಷ್ಟು ಬೇಗನೆ ತುರ್ತು ಅವಶ್ಯಕತೆಯ ಕಾರಣವನ್ನು ಹಾಗೂ ಅವರು ಕೈಗೊಂಡ ಕ್ರಮಗಳನ್ನು ಸಾಧಾರಣ ಸಂದರ್ಭಗಳಲ್ಲಿ ಆ ವಿಷಯವನ್ನು ನಿರ್ವಹಿಸುತ್ತಿದ್ದಂತಹ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಲಿಖಿತವಾಗಿ ವರದಿ ಮಾಡತಕ್ಕದ್ದಾಗಿರುತ್ತದೆ. ಅಂತಹ ಒಂದು ತುರ್ತುಕ್ರಮವನ್ನು ಕೈಗೊಳ್ಳಬೇಕಾದಂತಹ ಪರಿಸ್ಥಿತಿಯು ಇತ್ತೆಂಬ ವಿಷಯದಲ್ಲಿಯೋ ಕೈಗೊಂಡ ಕ್ರಮದಲ್ಲಿಯೋ ಅಥವಾ ಎರಡರಲ್ಲಿಯೋ ಕುಲಪತಿಯವರಿಗೂ ಹಾಗೂ ಪ್ರಾಧಿಕಾರಕ್ಕೂ ಪರಸ್ಪರ ಭಿನ್ನಾಭಿಪ್ರಾಯ ಉಂಟಾಗುವ ಸಂದರ್ಭದಲ್ಲಿ ವಿಷಯವನ್ನು ಕುಲಾಧಿಪತಿಯವರಿಗೆ ರೆಫರ್ ಮಾಡತಕ್ಕದ್ದು ಹಾಗೂ ಅವರ ತೀರ್ಮಾನವು ಅಂತಿಮವಾಗಿರುತ್ತದೆ.

(6) ಯಾವುದಾದರೂ ವಿಷಯವನ್ನು ಶಾಸನಗಳ ಅಥವಾ ರೆಗ್ಯುಲೇಶನ್‌ಗಳ ಮೂಲಕ ಕ್ರಮಬದ್ಧಗೊಳಿಸಬೇಕಾಗಿದ್ದಲ್ಲಿ, ಆದರೆ ಆ ವಿಷಯದ ಬಗ್ಗೆ ಶಾಸನಗಳನ್ನೋ ರೆಗ್ಯುಲೇಶನ್‌ಗಳನ್ನೋ ಮಾಡದಿರುವಲ್ಲಿ, ತತ್ಸಮಯ ಕುಲಪತಿಯವರು ಅಗತ್ಯವೆಂದು ಭಾವಿಸುವಂತಹ ನಿರ್ದೇಶಗಳನ್ನು ಹೊರಡಿಸಿ ವಿಷಯವನ್ನು ಕ್ರಮಬದ್ಧಗೊಳಿಸತಕ್ಕದ್ದು ಹಾಗೂ ಅನಂತರ ಆದಷ್ಟು ಬೇಗನೆ ಅಂಗೀಕಾರಕ್ಕಾಗಿ ಅವುಗಳನ್ನು ಬೋರ್ಡ್ ಓಫ್ ಗವರ್ನರ್ಸ್‌ಗೆ ಅಥವಾ ಇತರ ಪ್ರಾಧಿಕಾರಕ್ಕೆ ಅಥವಾ ಸಂಬಂಧಪಟ್ಟ ನಿಕಾಯಕ್ಕೆ ಸಮರ್ಪಿಸತಕ್ಕದ್ದು.

(7) ಶಾಸನಗಳಿಂದ ನಿಗದಿಪಡಿಸಬಹುದಾದಂತಹ ಪ್ರಕಾರ ಈ ಅವಶ್ಯಕತೆಗಾಗಿ ರೂಪೀಕರಿಸಿದ ಸೆಲೆಕ್ಷನ್ ಕಮಿಟಿಯ ಶಿಫಾರಸಿನ ಮೇರೆಗೆ ಹಾಗೂ ಕಾರ್ಯನಿರ್ವಾಹಕ ಸಮಿತಿಯ ಅಂಗೀಕಾರದೊಂದಿಗೆ ವಿಶ್ವವಿದ್ಯಾಲಯದ ಶಿಕ್ಷಕರನ್ನು ಕುಲಪತಿಯವರು ನಿಯಮಿಸತಕ್ಕದ್ದು.

(8) ಶಾಸನಗಳಿಂದ ನಿಗದಿಪಡಿಸಬಹುದಾದಂತಹ ಪ್ರಕಾರ ರೂಪೀಕರಿಸಿದ ಸೆಲೆಕ್ಷನ್ ಕಮಿಟಿಯ ಶಿಫಾರಸಿನ ಮೇರೆಗೆ ಹಾಗೂ ಕಾರ್ಯನಿರ್ವಾಹಕ ಸಮಿತಿಯ ಅಂಗೀಕಾರದೊಂದಿಗೆ ವಿಶ್ವವಿದ್ಯಾಲಯದ ಉಪಕುಲಸಚಿವರ ಪದವಿ ಹಾಗೂ ಅದಕ್ಕಿಂತ ಮೇಲಿನ ಎಲ್ಲಾ ಅಧಿಕಾರಿಗಳನ್ನು ಕುಲಪತಿಯವರು ನಿಯಮಿಸತಕ್ಕದ್ದು.

(9) ಶಾಸನಗಳ ಪ್ರಕಾರ ನಿಗದಿಪಡಿಸುವ ಪರಿಮಿತಿಗೆ ವಿಧೇಯವಾಗಿ, ವೆಚ್ಚಮಾಡುವ ಆರ್ಥಿಕ ಅಧಿಕಾರವು ಕುಲಪತಿಯವರಿಗೆ ಇರುವುದಾಗಿರುತ್ತದೆ.

(10) ವಿಶ್ವವಿದ್ಯಾಲಯದ ಪ್ರಾಧಿಕಾರಿಗಳ, ನಿಕಾಯಗಳ ಅಥವಾ ಸಮಿತಿಗಳ ಚೆಯರ್‌ಪರ್ಸನ್ ಎಂಬ ನೆಲೆಯಲ್ಲಿ, ಪ್ರಾಧಿಕಾರದ, ನಿಕಾಯದ ಅಥವಾ ಸಮಿತಿಯ ಸಭೆಯಿಂದ ಓರ್ವ ಸದಸ್ಯನನ್ನು, ಪ್ರಕ್ರಿಯೆಗಳಿಗೆ ಅಡ್ಡಿಪಡಿಸಿರುವುದರಿಂದ ಅಥವಾ ಅದನ್ನು ಸ್ಥಗಿತಗೊಳಿಸಿದುದರಿಂದ ಅಥವಾ ಸದಸ್ಯನ ಘನತೆಗೆ ವಿರುದ್ಧವಾದ ದುರ್ನಡತೆಯಿಂದ ಕಾರ್ಯನಿರ್ವಾಹಕ ಸಮಿತಿಯ ಅಂಗೀಕಾರಕ್ಕೆ ವಿಧೇಯವಾಗಿ, ಅಮಾನತು ಮಾಡಲು ಕುಲಪತಿಯವರಿಗೆ ಅಧಿಕಾರ ಇರುವುದಾಗಿದೆ ಹಾಗೂ ತದಾನುಸಾರ ಆ ವಿಷಯವನ್ನು ಬೋರ್ಡ್ ಓಫ್ ಗವರ್ನರ್ಸ್‌ಗೆ ವರದಿ ಮಾಡತಕ್ಕದ್ದು.

(11) ಶಾಸನಗಳ ಮತ್ತು ಆರ್ಡಿನನ್ಸುಗಳ ಉಪಬಂಧಗಳಿಗೆ ಹಾಗೂ ಕಾರ್ಯ ನಿರ್ವಾಹಕ ಸಮಿತಿಯ ಅಂಗೀಕಾರಕ್ಕೆ ವಿಧೇಯವಾಗಿ ಕುಲಪತಿಯವರಿಗೆ ವಿಶ್ವವಿದ್ಯಾಲಯದ ನೌಕರರನ್ನು ಅವರ ಭಾಗವನ್ನು ಸಮರ್ಥಿಸಲು ನ್ಯಾಯಯುತವಾದ ಅವಕಾಶವನ್ನು ನೀಡಿದ ನಂತರ ಅಮಾನತು ಮಾಡುವ, ಆರೋಪ ಮುಕ್ತಗೊಳಿಸುವ, ವಜಾಮಾಡುವ ಅಥವಾ ಬೇರೆ ರೀತಿಯಲ್ಲಿ ಯಾವುದೇ ಶಿಸ್ತುಕ್ರಮವನ್ನು ಕೈಗೊಳ್ಳುವ ಅಧಿಕಾರವಿರುವುದಾಗಿರುತ್ತದೆ.

(12) ಎಲ್ಲಾ ಸಮಿತಿಗಳ, ಬೋರ್ಡ್‌ಗಳ ಸದಸ್ಯರನ್ನು, ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸದಿದ್ದಲ್ಲಿ, ಶಾಸನಗಳಿಗನುಗುಣವಾಗಿ ಕುಲಪತಿಯವರು ನಿಯಮಿಸತಕ್ಕದ್ದು.

(13) ಶಾಸನಗಳ ಉಪಬಂಧಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯವು ನಡೆಸಿದ ಚಟುವಟಿಕೆಗಳ ಒಂದು ವರದಿಯನ್ನು ನಿಯತಕಾಲಿಕವಾಗಿ ಬೋರ್ಡ್ ಓಫ್ ಗವರ್ನರ್ಸ್ ಹಾಗೂ ನಿರ್ವಾಹಕ ಸಮಿತಿಯ ಮುಂದೆ ಕುಲಪತಿಯವರು ಮಂಡಿಸತಕ್ಕದ್ದು.

(14) ಈ ಅಧಿನಿಯಮದ ಅಥವಾ ಶಾಸನಗಳ ಪ್ರಕಾರ ಕುಲಪತಿಯವರಿಗೆ ಪ್ರಧಾನಮಾಡಿದಂತಹ ಇತರ ಅಧಿಕಾರಗಳನ್ನು ಕುಲಪತಿಯವರು ಚಲಾಯಿಸತಕ್ಕದ್ದು ಹಾಗೂ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

15. ಉಪ-ಸಹ-ಕುಲಾಧಿಪತಿಯ ನೇಮಕ, ಅಧಿಕಾರ ಹಾಗೂ ಕರ್ತವ್ಯಗಳು.— (1) ಸರಕಾರ ಶಿಫಾರಸು ಮಾಡುವ, ಎಂಜಿನಿಯರಿಂಗ್ ಮತ್ತು ಟೆಕ್ನೋಲಜಿ ಕ್ಷೇತ್ರದಲ್ಲಿ ಪ್ರವರ್ತಿಸುವ ಹಾಗೂ ಶಾಸನಗಳಲ್ಲಿ ನಿಗದಿಪಡಿಸಿದಂತಹ ಅರ್ಹತೆಗಳಿರುವ ಒಬ್ಬರನ್ನು ಉಪ-ಸಹ-ಕುಲಾಧಿಪತಿಯನ್ನಾಗಿ ಕುಲಾಧಿಪತಿಯವರು ನಿಯಮಿಸತಕ್ಕದ್ದು ಹಾಗೂ ಅವರು ವಿಶ್ವವಿದ್ಯಾಲಯದ ಸಂಬಳ ಪಡೆಯುವ ಓರ್ವ ಪೂರ್ಣಕಾಲ ಅಧಿಕಾರಿಯಾಗಿರುವರು.

(2) ಅರುವತ್ತು ವರ್ಷಕ್ಕಿಂತಲು ಹೆಚ್ಚು ಪ್ರಾಯವಿರುವ ಯಾವುದೇ ವ್ಯಕ್ತಿಯನ್ನು ಉಪ-ಸಹ-ಕುಲಾಧಿಪತಿಯನ್ನಾಗಿ ನಿಯಮಿಸತಕ್ಕದ್ದಲ್ಲ.

(3) ಉಪ-ಸಹ-ಕುಲಾಧಿಪತಿಯವರ ಪದಾವಧಿಯು ನಾಲ್ಕು ವರ್ಷಗಳಾಗಿರುತ್ತದೆ ಹಾಗೂ ಅರ್ಹರೆಂದು ಕಂಡಲ್ಲಿ ಅವರನ್ನು ನಿಕಟ ತರುವಾಯದ ನಾಲ್ಕು ವರ್ಷಗಳ ವರೆಗೆ ಪುನಃ ನಿಯಮಿಸಬಹುದಾಗಿದೆ:

ಆದರೆ, ಅರುವತ್ತು ವಯಸ್ಸು ಪೂರ್ತಿಯಾದಂತಹ ಯಾವುದೇ ವ್ಯಕ್ತಿಯೂ ಪುನರ್ನೇಮಕಾತಿಗೆ ಅರ್ಹರಾಗಿರುವುದಿಲ್ಲ.

(4) ಉಪ-ಸಹ-ಕುಲಾಧಿಪತಿಯವರ ವೇತನ ಹಾಗೂ ಇತರ ಸೇವಾಷರತ್ತುಗಳು ಕುಲಾಧಿಪತಿಯವರು ನಿರ್ಧರಿಸುವ ಪ್ರಕಾರ ಆಗಿರತಕ್ಕದ್ದು.

(5) ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸುಗಳ ಹಾಗೂ ರೆಗ್ಯುಲೇಶನ್‌ಗಳ ಉಪಬಂಧಗಳಿಗೆ ವಿಧೇಯವಾಗಿ, ಉಪ-ಸಹ-ಕುಲಾಧಿಪತಿಯವರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಕುಲಪತಿಯವರೊಂದಿಗೆ ಸಮಾಲೋಚಿಸಿ ಕುಲಾಧಿಪತಿಯವರು ನಿರ್ಧರಿಸತಕ್ಕದ್ದು ಹಾಗೂ ಅಂತಹ ಅಧಿಕಾರಗಳನ್ನು ಯಥಾಸಮಯ ಉಪ-ಸಹ-ಕುಲಾಧಿಪತಿಯವರು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

16. ಕುಲಸಚಿವರ ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು.—(1) ಶಾಸನಗಳಿಂದ ನಿಗದಿಪಡಿಸಬಹುದಾದಂತಹ ಪ್ರಕಾರ, ಕುಲಪತಿಯವರು ಸಂಚಾಲಕರಾಗಿರುವ ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸುವಂತಹ ಒಂದು ಸೆಲೆಕ್ಷನ್ ಕಮಿಟಿ ಶಿಫಾರಸುಮಾಡುವ ಒಬ್ಬರನ್ನು ಸರಕಾರದ ಅನುಮತಿಯೊಂದಿಗೆ ಕುಲಸಚಿವರಾಗಿ ಕಾರ್ಯನಿರ್ವಾಹಕ ಸಮಿತಿಯು ನಿಯಮಿಸತಕ್ಕದ್ದು. ಪ್ರಥಮ ಕುಲಸಚಿವರನ್ನು ಸರಕಾರವು ನಿಯಮಿಸತಕ್ಕದ್ದು.

(2) ಕುಲಸಚಿವರು ವಿಶ್ವವಿದ್ಯಾಲಯದ ಮುಖ್ಯ ಆಡಳಿತಾಧಿಕಾರಿ ಆಗಿರುವರು. ಅವರು ಸಂಬಳ ಪಡೆಯುವ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರುವರು ಹಾಗು ಕುಲಪತಿಯವರ ನೇರ ಮೇಲ್ವಿಚಾರಣೆ, ನಿರ್ದೇಶ ಹಾಗೂ ನಿಯಂತ್ರಣಕ್ಕೆ ಅನುಸಾರವಾಗಿ ನಿರ್ವಹಿಸತಕ್ಕದ್ದು.

(3) ಕುಲಸಚಿವರ ಸೇವಾ ಕಾಲಾವಧಿಯು, ವಿಶ್ವವಿದ್ಯಾಲಯದ ಅಧಿಕಾರಿಗಳ ಪ್ರಾಯ ಪರಿಮಿತಿಗೆ ಸಂಬಂಧಿಸಿ ಸರಕಾರವು ಕಾಲಕಾಲಕ್ಕೆ ಹೊರಡಿಸಿದಂತಹ ಆದೇಶಕ್ಕನುಗುಣವಾಗಿ ಆಗಿರತಕ್ಕದ್ದು. ಕುಲಸಚಿವರಾಗಿ ನೇಮಿಸುವುದಕ್ಕೆ ಅಗತ್ಯವಾದಂತಹ ಯೋಗ್ಯತೆಗಳು ಮತ್ತು ಅನುಭವವು ಸರಕಾರವು ಅಂಗೀಕರಿಸಿದ ಪ್ರಕಾರ ಆಗಿರತಕ್ಕದ್ದು.

(4) ಕುಲಸಚಿವರ ಅಧಿಕೃತ ಸ್ಥಾನದ ತೆರವು ಇದ್ದಲ್ಲಿಯೋ, ಅಸೌಖ್ಯವೋ, ಗೈರುಹಾಜರಿಯಿಂದಲೋ, ಬೇರೆ ಯಾವುದಾದರೂ ಕಾರಣದಿಂದಲೋ ಕುಲಸಚಿವರಿಗೆ ತನ್ನ ಅಧಿಕೃತ ಕರ್ತವ್ಯಗಳನ್ನು ಆರು ತಿಂಗಳಿಗಿಂತ ಮೀರದ ಒಂದು ಕಾಲಾವಧಿಯವರೆಗೆ ನಿರ್ವಹಿಸಲು ಅಸಾಧ್ಯವಾಗದಿರುವಾಗಲೋ, ಒಬ್ಬ ಹೊಸ ಕುಲಸಚಿವರನ್ನು ನೇಮಿಸಲ್ಪಡುವುದೋ ಹಾಗೂ ಅಧಿಕೃತ ಸ್ಥಾನವನ್ನು ವಹಿಸುವವರೆಗೋ ಅಥವಾ ಕುಲಸಚಿವರು ಮರಳಿ ಕರ್ತವ್ಯಕ್ಕೆ ಹಾಜರಾಗುವವರೆಗೆಯೋ, ಅಯಾಯಾ ಸಂಗತಿಯಂತೆ, ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಲು ಯೋಗ್ಯರಾದ ಒಬ್ಬರನ್ನು ಕುಲಪತಿಯವರು ನಿಯಮಿಸತಕ್ಕದ್ದು.

(5) ಕುಲಸಚಿವರು, ಬೋರ್ಡ್ ಓಫ್ ಗವರ್ನರ್ಸ್ ಮತ್ತು ಕಾರ್ಯನಿರ್ವಾಹಕ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸತಕ್ಕದ್ದು.

(6) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ನಿರ್ಧಾರಗಳಿಗೆ ವಿಧೇಯವಾಗಿ, ಕುಲಸಚಿವರಿಗೆ ವಿಶ್ವವಿದ್ಯಾಲಯದ ಪರವಾಗಿ ಒಪ್ಪಂದ ಮಾಡುವ, ದಾಖಲೆಗಳಿಗೆ ಸಹಿಹಾಕುವ ಮತ್ತು ದಾಖಲೆಗಳನ್ನು ಪ್ರಮಾಣೀಕರಿಸಲು ಅಧಿಕಾರ ಇರುತ್ತದೆ.

(7) ಕುಲಸಚಿವರು, ಬೋರ್ಡ್ ಓಫ್ ಗವರ್ನರ್ಸ್ ಅಥವಾ ಕಾರ್ಯನಿರ್ವಾಹಕ ಸಮಿತಿಯು ಅವರಿಗೆ ವಹಿಸಿಕೊಟ್ಟಂತಹ ವಿಶ್ವವಿದ್ಯಾಲಯದ ದಾಖಲೆಗಳು, ಸಾಮಾನ್ಯ ಮುದ್ರೆಯ ಹಾಗೂ ಇತರ ಸ್ವತ್ತುಗಳ ಸಂರಕ್ಷಕನಾಗಿರುವರು.

(8) ಕುಲಸಚಿವರು, ಪ್ರಾಧಿಕಾರಗಳು, ನಿಕಾಯಗಳು, ಸಮಿತಿಗಳು ಆಯಾಯಾ ಕಾಲಗಳಲ್ಲಿ ಅಂಗೀಕರಿಸಿದಂತಹ ಶಾಸನಗಳ ಮತ್ತು ರೆಗ್ಯುಲೇಶನ್‌ಗಳ ಕೈಪಿಡಿಯನ್ನು ತಯಾರುಮಾಡತಕ್ಕದ್ದು ಹಾಗೂ ಅದನ್ನು ಪರಿಷ್ಕರಿಸಿ ಸಂರಕ್ಷಿಸತಕ್ಕದ್ದು ಹಾಗು ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಂಬಂಧಪಟ್ಟ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಅದನ್ನು ಒದಗಿಸತಕ್ಕದ್ದು.

(9) ಕುಲಸಚಿವರು, ಆಡಳಿತ ನಿರ್ವಹಣೆಯನ್ನು ಉತ್ತಮಗೊಳಿಸುವುದಕ್ಕಿರುವ ದೂರುಗಳನ್ನು ಮತ್ತು ನಿರ್ದೇಶಗಳನ್ನು ಸ್ವೀಕರಿಸತಕ್ಕದ್ದು ಹಾಗೂ ಅವುಗಳನ್ನು ಸೂಕ್ತವಾದ ಕ್ರಮಗಳಿಗಾಗಿ ಪರಿಗಣಿಸತಕ್ಕದ್ದು.

(10) ಕುಲಸಚಿವರು, ಈ ಅಧಿನಿಯಮದ ಪ್ರಕಾರ, ಅದರಡಿಯಲ್ಲಿ ಅಥವಾ ಶಾಸನಗಳ ಪ್ರಕಾರ ನಿರ್ಧರಿಸಬಹುದಾದಂತಹ ಅಥವಾ ಕುಲಪತಿಯವರು ಆಯಾಯಾ ಕಾಲಗಳಲ್ಲಿ ಅವರಿಗೆ ವಹಿಸಿಕೊಡುವಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(11) ಕುಲಸಚಿವರ, ವೇತನ ಹಾಗೂ ಇತರ ಸೇವಾ ವ್ಯವಸ್ಥೆಗಳನ್ನು ಶಾಸನಗಳ ಪ್ರಕಾರ ನಿರ್ಧರಿಸಲ್ಪಡತಕ್ಕದ್ದು.

17. ಆರ್ಥಿಕ ಅಧಿಕಾರಿಯ ನೇಮಕಾತಿ—(1) ಶಾಸನಗಳ ಮೂಲಕ ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಕುಲಪತಿಯವರು ಸಂಚಾಲಕರಾಗಿರುವ ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸುವಂತಹ ಒಂದು ಸೆಲೆಕ್ಷನ್ ಕಮಿಟಿಯು ಶಿಫಾರಸು ಮಾಡುವ ಒಬ್ಬರನ್ನು ಆರ್ಥಿಕ ಅಧಿಕಾರಿಯಾಗಿ ನಿರ್ವಾಹಕ ಸಮಿತಿಯು ನಿಯಮಿಸತಕ್ಕದ್ದು ಹಾಗೂ ಅವರು ಪೂರ್ಣಕಾಲ ಸಂಬಳ ಪಡೆಯುವ ಒಂದು ಅಧಿಕಾರಿಯಾಗಿರುವರು ಹಾಗೂ ಅವರು ಕುಲಪತಿಯವರ ನೇರ ಮೇಲ್ವಿಚಾರಣೆ, ನಿರ್ದೇಶ ಹಾಗೂ ನಿಯಂತ್ರಣಕ್ಕೊಳಪಟ್ಟು ಕಾರ್ಯನಿರ್ವಹಿಸತಕ್ಕದ್ದು. ಪ್ರಥಮ ಆರ್ಥಿಕ ಅಧಿಕಾರಿಯನ್ನು ಸರಕಾರವು ನಿಯಮಿಸತಕ್ಕದ್ದು. ಆರ್ಥಿಕ ಅಧಿಕಾರಿಯ ಸೇವಾ ಕಾಲಾವಧಿಯು, ಅದಕ್ಕೆ ಸಂಬಂಧಿಸಿ ಸರಕಾರವು ಕಾಲಕಾಲಕ್ಕೆ ಹೊರಡಿಸುವಂತಹ ಆದೇಶಗಳಿಗನುಗುಣವಾಗಿ ಆಗಿರತಕ್ಕದ್ದು. ಆರ್ಥಿಕ ಅಧಿಕಾರಿಯಾಗಿ ನೇಮಿಸುವುದಕ್ಕಿರುವ ಯೋಗ್ಯತೆಗಳ ಮತ್ತು ಅನುಭವವು ಸರಕಾರವು ಅಂಗೀಕರಿಸಿದ ಪ್ರಕಾರವಾಗಿರತಕ್ಕದ್ದು.

(2) ಆರ್ಥಿಕ ಅಧಿಕಾರಿಯ ಅಧಿಕಾರಗಳು ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳು ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಅಥವಾ ಶಾಸನಗಳಿಂದ ನಿಗದಿಪಡಿಸಬಹುದಾದ ಅಂತಹ ರೀತಿಯಲ್ಲಿ ಅಥವಾ ಆಯಾಯ ಕಾಲಗಳಲ್ಲಿ ಕುಲಪತಿಯವರು ಆತನಿಗೆ ವಹಿಸಿಕೊಡುವ ರೀತಿಯಲ್ಲಿ ಆಗಿರತಕ್ಕದ್ದು.

18. ಪರೀಕ್ಷಾ ನಿಯಂತ್ರಕನ ನೇಮಕಾತಿ, ಅಧಿಕಾರಗಳು ಹಾಗೂ ಕರ್ತವ್ಯಗಳು. (1) ಶಾಸನಗಳಿಂದ ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಕುಲಪತಿಯುವರು ಸಂಚಾಲಕರಾಗಿರುವ, ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸುವಂತಹ ಒಂದು ಸೆಲೆಕ್ಷನ್ ಕಮಿಟಿಯು ಶಿಫಾರಸು ಮೇರೆಗೆ ಮೂರು ವ್ಯಕ್ತಿಗಳಿಂದ ಸರಕಾರವು ನಾಮನಿರ್ದೇಶಿಸುವಂತಹ ಒಬ್ಬರನ್ನು ಪರೀಕ್ಷಾ ನಿಯಂತ್ರಕರನ್ನಾಗಿ ಕಾರ್ಯನಿರ್ವಾಹಕ ಸಮಿತಿಯು ನಿಯಮಿಸತಕ್ಕದ್ದು ಹಾಗೂ ಅವರು ಸಂಬಳ ಪಡೆಯುವ ಒಂದು ಪೂರ್ಣಕಾಲಿಕ ಅಧಿಕಾರಿಯಾಗಿರುವರು ಹಾಗೂ ಕುಲಪತಿಯವರ ನೇರ ಮೇಲ್ವಿಚಾರಣೆ, ನಿರ್ದೇಶ ಮತ್ತು ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಪ್ರಥಮ ಪರೀಕ್ಷಾ ನಿಯಂತ್ರಕರನ್ನು ಸರಕಾರವು ನಿಯಮಿಸತಕ್ಕದ್ದು.

(2) ಪರೀಕ್ಷಾ ನಿಯಂತ್ರಕನ ಸೇವಾ ಕಾಲಾವಧಿಯು, ಅದಕ್ಕೆ ಸಂಬಂಧಿಸಿ ಸರಕಾರವು ಕಾಲಕಾಲಕ್ಕೆ ಹೊರಡಿಸುವಂತಹ ಆದೇಶಕ್ಕನುಗುಣವಾಗಿ ಆಗಿರತಕ್ಕದ್ದು. ಪರೀಕ್ಷಾ ನಿಯಂತ್ರಕನಾಗಿ ನೇಮಿಸಲ್ಪಡಲು ಅಗತ್ಯವಾದ ಯೋಗ್ಯತೆಗಳು ಹಾಗೂ ಅನುಭವವು ಸರಕಾರವು ಅಂಗೀಕರಿಸಿದ ಪ್ರಕಾರವಾಗಿರತಕ್ಕದ್ದು.

(3) ಪರೀಕ್ಷಾ ನಿಯಂತ್ರಕನು, ವಿಶ್ವವಿದ್ಯಾಲಯದ ಪರೀಕ್ಷೆಗಳ ಹಾಗೂ ಟೆಸ್ಟ್‌ಗಳ ನಿರ್ವಹಣೆಯನ್ನು ಮತ್ತು ಅವುಗಳ ಫಲಿತಾಂಶವನ್ನು ಘೋಷಿಸುವ ಜವಬ್ದಾರಿಯಿರುವ ಪ್ರಧಾನ ಅಧಿಕಾರಿಯಾಗಿರುವರು ಹಾಗೂ ಕುಲಪತಿಯವರ ಮೇಲ್ವಿಚಾರಣೆ, ಮೇಲ್ನೋಟ, ನಿರ್ದೇಶ ಹಾಗೂ ಮಾರ್ಗದರ್ಶನದಲ್ಲಿ ಹೊಣೆಗಾರಿಕೆಗಳನ್ನು ನಿರ್ವಹಿಸತಕ್ಕದ್ದು.

19. ಡೀನ್ (ಶೈಕ್ಷಣಿಕ) ಹಾಗೂ ಡೀನ್ (ಸಂಶೋಧನೆ)ಯವರ ನೇಮಕಾತಿ, ಅಧಿಕಾರಗಳು ಹಾಗೂ ಕರ್ತವ್ಯಗಳು.—(1) ಒಬ್ಬರು ಡೀನ್ (ಶೈಕ್ಷಣಿಕ) ಹಾಗೂ ಒಬ್ಬರು ಡೀನ್ (ಸಂಶೋಧನೆ) ಇರತಕ್ಕದ್ದು. ಶಾಸನಗಳ ಪ್ರಕಾರ ನಿಗದಿಪಡಿಸಬಹುದಾದ ಪ್ರಕಾರ, ಕುಲಪತಿಯವರು ಸಂಚಾಲಕರಾಗಿರುವ ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸುವಂತಹ ಒಂದು ಸೆಲೆಕ್ಷನ್ ಕಮಿಟಿ ಪ್ರತಿಯೊಂದು ವಿಭಾಗಕ್ಕೂ ಶಿಫಾರಸು ಮಾಡುವಂತಹ ತಲಾ ಮೂರು

ಮಂದಿ ಒಳಗೊಂಡ ಪ್ಯಾನಲ್‌ಗಳಿಂದ ಸರಕಾರ ನಾಮನಿರ್ದೇಶಿಸುವ ಒಬ್ಬರನ್ನು ಡೀನ್ (ಶೈಕ್ಷಣಿಕ) ಆಗಿಯೂ ಇನ್ನೊಬ್ಬರನ್ನು ಡೀನ್ (ಸಂಶೋಧನೆ) ಆಗಿಯೂ ಕಾರ್ಯನಿರ್ವಾಹಕ ಸಮಿತಿಯು ನಿಯಮಿಸತಕ್ಕದ್ದು ಹಾಗೂ ಅವರು ಸಂಬಳ ಪಡೆಯುವ ಪೂರ್ಣಕಾಲ ಅಧಿಕಾರಿಯಾಗಿರುವುದಲ್ಲದ ಕುಲಪತಿಯವರ ನೇರವಾದ ಮೇಲ್ವಿಚಾರಣೆ, ನಿರ್ದೇಶ ಹಾಗೂ ನಿಯಂತ್ರಣದಲ್ಲಿ ಕಾರ್ಯವನ್ನು ನಿರ್ವಹಿಸತಕ್ಕದ್ದು. ಪ್ರಥಮ ಡೀನ್ (ಶೈಕ್ಷಣಿಕ) ಹಾಗೂ ಡೀನ್ (ಸಂಶೋಧನೆ)ನನ್ನು ಸರಕಾರವು ನಿಯಮಿಸತಕ್ಕದ್ದು. ಡೀನ್ (ಶೈಕ್ಷಣಿಕ) ಹಾಗೂ ಡೀನ್ (ಸಂಶೋಧನೆ)ಯು ಫ್ಯಾಕಲ್ಟಿಗಳಲ್ಲಿರುವ ಶೈಕ್ಷಣಿಕ ಪ್ರಗತಿ ಹಾಗೂ ಬೋಧಕ ಗುಣಮಟ್ಟವನ್ನು ಕಾಪಾಡುವ, ಮೇಲ್ವಿಚಾರಣೆ ಹಾಗೂ ಅಧ್ಯಾಪಕರುಗಳ ತರಬೇತಿ ಮತ್ತು ಸಂಶೋಧನೆಗೆ ಸಂಬಂಧಿಸಿ ಯಥಾ ಪ್ರಕಾರ ಆಡಳಿತಾ ನಿರ್ವಹಣಾ ಸಮಿತಿಯು ಅಂಗೀಕರಿಸಿದಂತಹ ಶೈಕ್ಷಣಿಕ ಧೋರಣೆಗಳ ಹಾಗೂ ಸಂಶೋಧನಾ ಧೋರಣೆಗಳ ನಿರ್ವಹಣೆಯ ಹೊಣೆಗಾರರಾದ ವಿಶ್ವವಿದ್ಯಾಲಯದ ಶೈಕ್ಷಣಿಕ ಅಧಿಕಾರಿಗಳಾಗಿರುತ್ತಾರೆ. ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕೆಲಸ ಹಂಚಿಕೆಯು ಶಾಸನಗಳಿಂದ ನಿಗದಿಪಡಿಸಬಹುದಾದಂತಹ ಪ್ರಕಾರವಾಗಿರತಕ್ಕದ್ದು. ಡೀನ್ (ಶೈಕ್ಷಣಿಕ) ಅಗತ್ಯವಾದಾಗಲೆಲ್ಲ ಶೈಕ್ಷಣಿಕ ಸಮಿತಿಯ ಸಭೆಯನ್ನು ಕರೆಯತಕ್ಕದ್ದು.

(2) ಡೀನ್‌ಗಳು ವಿಶ್ವವಿದ್ಯಾಲಯದ ಕೇಂದ್ರಗಳ ಹಾಗೂ ಸಂಯೋಜಿಸಲ್ಪಟ್ಟ ಕಾಲೇಜುಗಳ ಫ್ಯಾಕಲ್ಟಿಯು ಶೈಕ್ಷಣಿಕ ಪ್ರಗತಿ ಹಾಗೂ ಸಂಶೋಧನಾ ಅಭಿವೃದ್ಧಿಗೆ ಹೊಣೆಗಾರರಾಗಿರುತ್ತಾರೆ ಹಾಗೂ ಡೀನ್‌ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಾರ್ಯಗಳಿಗೆ ಸಂಬಂಧಿಸಿ ಬೋರ್ಡ್ ಓಫ್ ಗವರ್ನರ್ಸ್, ಕಾರ್ಯನಿರ್ವಾಹಕ ಸಮಿತಿ ಹಾಗೂ ಶೈಕ್ಷಣಿಕ ಸಮಿತಿಯು ನಿರ್ಧಾರಗಳು ಬೇಕಾದ ರೀತಿಯಲ್ಲಿ ಜಾರಿಗೊಳಿಸಲಾಗುತ್ತಿದೆಯೆಂದು ಖಾತ್ರಿಪಡಿಸತಕ್ಕದ್ದು.

(3) ಕುಲಪತಿಯವರ ಮೇಲ್ವಿಚಾರಣೆ, ನಿರ್ದೇಶ ಹಾಗೂ ನಿಯಂತ್ರಣಕ್ಕೆ ವಿಧೇಯವಾಗಿ, ಅಗತ್ಯವೆಂದು ಡೀನ್ ಭಾವಿಸುವಂತಹ ಉಪದೇಶವನ್ನು ಪಡೆದ ನಂತರ ಎನ್‌ರೋಲ್‌ಮೆಂಟ್, ಅರ್ಹತೆ, ಮೈಗ್ರೇಶನ್, ವಿದ್ಯಾರ್ಥಿವೇತನಗಳು, ರಿಸರ್ಚ್‌ಶಿಪ್‌ಗಳು, ಸ್ಟೂಡೆಂಟ್‌ಶಿಪ್‌ಗಳು ಅಥವಾ ಫೀಶಿಪ್‌ಗಳು ಹಾಗು ವಿಶ್ವವಿದ್ಯಾಲಯದ ಪರೀಕ್ಷೆಗಳಿಗಿರುವ ಪ್ರವೇಶಾತಿಯ ನಿಬಂಧನೆಗಳು ಇತ್ಯಾದಿಗೆ ಸಂಬಂಧಿಸಿದಂತಹ ವಿದ್ಯಾರ್ಥಿಗಳ ದೂರುಗಳ ಮೇಲೆ ಡೀನ್ ತೀರ್ಮಾನ ಕೈಗೊಳ್ಳತಕ್ಕದ್ದು.

20. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಸಾರ್ವಜನಿಕ ಸೇವಕರಾಗಿರುತ್ತಾರೆ.—ವಿಶ್ವವಿದ್ಯಾಲಯದ ಸಂಬಳ ಪಡೆಯುವ ಎಲ್ಲಾ ಅಧಿಕಾರಿಗಳು, ಶಿಕ್ಷಕರು, ಹಾಗೂ ಪ್ರಾಧಿಕಾರಗಳ, ಸಮಿತಿಗಳ, ಅಥವಾ ನಿಕಾಯಗಳ ಸದಸ್ಯರು ಮತ್ತು ವಿಶ್ವವಿದ್ಯಾಲಯದ ಇತರ ನೌಕರರನ್ನು ಭಾರತೀಯ ದಂಡ ಸಂಹಿತೆ (1860ರ 45ನೇ ಕೇಂದ್ರ ಅಧಿನಿಯಮ)ಯ 21ನೇ ವಿಭಾಗದ ಅರ್ಥವ್ಯಾಪ್ತಿಯ ಪ್ರಕಾರ ಸಾರ್ವಜನಿಕ ಸೇವಕರಾಗಿರುವರೆಂದು ಭಾವಿಸತಕ್ಕದ್ದು.

21. ನೇಮಕಾತಿಯು ಅಧಿಸೂಚಿಸಬೇಕೆಂದು.—ವಿಶ್ವವಿದ್ಯಾಲಯವು ಕುಲಪತಿ, ಉಪ-ಸಹ-ಕುಲಾಧಿಪತಿ, ಕುಲಸಚಿವರು, ಪರೀಕ್ಷಾ ನಿಯಂತ್ರಕ, ಆರ್ಥಿಕ ಅಧಿಕಾರಿ ಹಾಗು ಡೀನ್ (ಶೈಕ್ಷಣಿಕ) ಮತ್ತು ಡೀನ್ (ಸಂಶೋಧನೆ) ಎಂಬಿವರ ನೇಮಕಾತಿಯನ್ನು ಗಜೆಟ್‌ನಲ್ಲಿ ಅಧಿಸೂಚಿಸಲ್ಪಡತಕ್ಕದ್ದಾಗಿದೆ.

## ಅಧ್ಯಾಯ IV

## ವಿಶ್ವವಿದ್ಯಾಲಯದ ಪ್ರಾಧಿಕಾರಗಳು

22. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.—ಈ ಕೆಳಗಿನವುಗಳು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರುವುವು, ಅದೇನೆಂದರೇ.—

(i) ಬೋರ್ಡ್ ಓಫ್ ಗವರ್ನರ್ಸ್;

(ii) ಕಾರ್ಯ ನಿರ್ವಾಹಕ ಸಮಿತಿ;

(iii) ಶೈಕ್ಷಣಿಕ ಸಮಿತಿ;

(iv) ರಿಸರ್ಚ್ ಕೌನ್ಸಿಲ್; ಅಲ್ಲದೆ

ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರುವುದೆಂದು ಶಾಸನಗಳಿಂದ ಗೊತ್ತುಮಾಡಬಹುದಾದ ವಿಶ್ವವಿದ್ಯಾಲಯದ ಇತರ ನಿಕಾಯಗಳು.

23. ಬೋರ್ಡ್ ಓಫ್ ಗವರ್ನರ್ಸ್.—(1) ಬೋರ್ಡ್ ಓಫ್ ಗವರ್ನರ್ಸ್‌ನಲ್ಲಿ ಈ ಕೆಳಗಿನ ಸದಸ್ಯರುಗಳು ಇರತಕ್ಕದ್ದು, ಅದೇನೆಂದರೆ:—

ಪದನಿಮಿತ್ತ ಸದಸ್ಯರು

(i) ಕುಲಾಧಿಪತಿ;

(ii) ಸಹಕುಲಾಧಿಪತಿ;

(iii) ಕೇರಳ ಸರಕಾರದ ಉನ್ನತ ಶಿಕ್ಷಣ ಇಲಾಖೆಯ ಜವಾಬ್ದಾರಿಯಿರುವ ಸರಕಾರಿ ಕಾರ್ಯದರ್ಶಿ ಅಥವಾ ಅವರು ಅಧಿಕೃತಗೊಳಿಸಿದ ಜಂಟಿ ಕಾರ್ಯದರ್ಶಿಯ ಪದವಿಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(iv) ಕೇರಳ ಸರಕಾರದ ಹಣಕಾಸು ಇಲಾಖೆಯ ಜವಾಬ್ದಾರಿಯಿರುವ ಸರಕಾರಿ ಕಾರ್ಯದರ್ಶಿ ಅಥವಾ ಅವರು ಅಧಿಕೃತಗೊಳಿಸಿದ ಜಂಟಿಕಾರ್ಯದರ್ಶಿಯ ಪದವಿಯಂತಹ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(v) ಕುಲಪತಿ;

(vi) ಸಹ-ಉಪ-ಕುಲಾಧಿಪತಿ;

(vii) ಕೇರಳ ಸರಕಾರದ ತಾಂತ್ರಿಕ ಶಿಕ್ಷಣ ನಿರ್ದೇಶಕ;

(viii) ಡೀನ್ (ಶೈಕ್ಷಣಿಕ);

(ix) ಡೀನ್ (ಸಂಶೋಧನೆ);

(x) ಸರಕಾರವು ನಾಮ ನಿರ್ದೇಶಿಸುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಟೆಕ್ನೋಲಜಿಯ ಒಬ್ಬ ಡಯರಕ್ಟರ್;

(xi) ವಿಕ್ರಮ್ ಸಾರಾಭಾಯಿ ಸ್ಪೇಸ್ ಸೆಂಟರಿನ ಡಯರಕ್ಟರ್ ಅಥವಾ ಅವರು ಅಧಿಕೃತಗೊಳಿಸುವಂತಹ ಒಬ್ಬ ಅಧಿಕಾರಿ;

(xii) ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಸ್ಪೇಸ್ ಸಯನ್ಸ್ ಎಂಡ್ ಟೆಕ್ನೋಲಜಿಯ ಡಯರಕ್ಟರ್;

(xiii) ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಸಯನ್ಸ್ ಎಜುಕೇಶನ್ ಎಂಡ್ ರಿಸರ್ಚ್‌ನ ಡಯರಕ್ಟರ್;

(xiv) ಕೋಯಿಕೋಡ್ ನ್ಯಾಶನಲ್ ಇನ್ಸ್ಟಿಟ್ಯೂಟ್ ಓಫ್ ಟೆಕ್ನೋಲಜಿಯ ಡಯರಕ್ಟರ್;

(xv) ವಿದ್ಯಾರ್ಥಿ ಕೌನ್ಸಿಲ್‌ನ ಚೆಯರ್‌ಮ್ಯಾನ್.

<u>ಚುನಾಯಿತ ಸದಸ್ಯರುಗಳು</u>

(i) ವಿಧಾನ ಸಭೆಯ ಸದಸ್ಯರು ತಮ್ಮೊಳಗಿನಿಂದ ಆಯ್ಕೆಮಾಡುವ ಐದು ಸದಸ್ಯರುಗಳು, ಅವರಲ್ಲಿ ಒಬ್ಬರು ಮಹಿಳೆಯೂ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಒಳಗೊಂಡಿರತಕ್ಕದ್ದು.

(ii) ಶಾಸನಗಳಿಂದ ನಿಗದಿಪಡಿಸಿದ ರೀತಿಯಲ್ಲಿ ವಿದ್ಯಾರ್ಥಿಗಳಿಂದ ಆಯ್ಕೆಮಾಡಲ್ಪಡುವ ನಾಲ್ಕು ವಿದ್ಯಾರ್ಥಿ ಪ್ರತಿನಿಧಿಗಳು, ಅವರಲ್ಲಿ ಒಬ್ಬರು ಸ್ನಾತಕೋತ್ತರ ವಿದ್ಯಾರ್ಥಿಯೂ ಒಬ್ಬರು ವಿದ್ಯಾರ್ಥಿನಿಯೂ ಆಗಿರತಕ್ಕದ್ದು.

<u>ನಾಮ ನಿರ್ದೇಶಿತ ಸದಸ್ಯರುಗಳು</u>

(i) ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಾಮನಿರ್ದೇಶಿಸುವ ಒಬ್ಬ ಪ್ರಮುಖ ಕೈಗಾರಿಕೋದ್ಯಮಿ;

(ii) ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಾಮ ನಿರ್ದೇಶಿಸುವ ಎರಡು ಎಂಜಿನಿಯರಿಂಗ್ ಕಾಲೇಜ್‌ಗಳ ಪ್ರಾಂಶುಪಾಲರುಗಳು, ಅವರಲ್ಲಿ ಒಬ್ಬರು ಸರಕಾರಿ/ ಅನುದಾನಿತ ಕ್ಷೇತ್ರದವರಾಗಿರತಕ್ಕದ್ದು.

(iii) ಪೋಸ್ಟ್ ಡೋಕ್ಟರಲ್ ಪಬ್ಲಿಕೇಶನ್‌ನೊಂದಿಗೆ ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಂಸ್ಥೆಗಳಲ್ಲಿ ಪ್ರವರ್ತಿಸುವ ಹಾಗು (ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಾಮನಿರ್ದೇಶಿಸುವ) ಶ್ರೇಷ್ಟರಾದ ಮೂರು ಶಿಕ್ಷಣ ತಜ್ಞರು, ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು;

(iv) ಪಿ.ಎಚ್.ಡಿ ಸಂಶೋಧನೆಯ ಮೇಲ್ವಿಚಾರಕರಾಗಿರುವ ಹಾಗೂ ಪೋಸ್ಟ್ ಡೋಕ್ಟರಲ್ ಪಬ್ಲಿಕೇಶನ್ ಹೊಂದಿರುವಂತ ಕೇರಳದಲ್ಲಿ ವಿಶ್ವವಿದ್ಯಾಲಯಗಳಲ್ಲಿನ ವಿಜ್ಞಾನ ಅಧ್ಯಯನ ಇಲಾಖೆಗಳಲ್ಲಿ ಉದ್ಯೋಗದಲ್ಲಿರುವ ಇಬ್ಬರು ವಿಜ್ಞಾನ ವಿಭಾಗದ ಶಿಕ್ಷಣ ತಜ್ಞರು;

(v) ಸರಕಾರಿ ನಾಮನಿರ್ದೇಶಿತ ಎಂಜಿನಿಯರಿಂಗ್ ಕೋಲೇಜುಗಳ ನಾಲ್ಕು ಮ್ಯಾನೇಜರ್‌ಗಳು, ಅವರಲ್ಲಿ ಮೂರು ಮಂದಿ ಅನುದಾನ ರಹಿತ ಸ್ವ ಸಹಾಯ ಕ್ಷೇತ್ರದಿಂದಲೂ ಒಬ್ಬರು ಸರಕಾರಿ ನಿಯಂತ್ರಿತ ಅನುದಾನ ರಹಿತ ಸ್ವ ಸಹಾಯ ಕ್ಷೇತ್ರದಿಂದಲೂ ಆಗಿರತಕ್ಕದ್ದು.

(vi) ಸರಕಾರಿ ಕೋಲೇಜು, ಅನುದಾನಿತ ಕಾಲೇಜು, ಸರಕಾರಿ ನಿಯಂತ್ರಿತ ಅನುದಾನ ರಹಿತ ಕಾಲೇಜು ಹಾಗೂ ಅನುದಾನ ರಹಿತ ಕಾಲೇಜು ಇತ್ಯಾದಿಗಳಿಂದ ಸರಕಾರಿ ನಾಮನಿರ್ದೇಶಿತ ತಲಾ ಒಂದೊಂದು ಶಿಕ್ಷಕರು. ಅವರು ಪಿ.ಎಚ್.ಡಿ ಇರುವವರಾಗಿದ್ದು ಹತ್ತು ವರ್ಷಕ್ಕಿಂತ ಕಡಿಮೆಯಲ್ಲದ ಬೋಧನಾ ಅನುಭವ ಇರುವವರಾಗಿರತಕ್ಕದ್ದು.

ಇತರ ಸದಸ್ಯರುಗಳು

(i) ಎ.ಐ.ಸಿ.ಟಿ.ಇ. ಯನ್ನು ಪ್ರತಿನಿಧಿಸುವ ಒಬ್ಬ ಸದಸ್ಯ;

(ii) ಸ್ಟಾರ್ಟ್ ಅಪ್ ಗ್ರಾಮದ ಚೆಯರ್‌ಮ್ಯಾನ್;

(iii) ಕೇರಳ ರಾಜ್ಯ ಉನ್ನತ ಶಿಕ್ಷಣ ಕೌನ್ಸಿಲ್‌ನ ವೈಸ್ ಚೆಯರ್‌ಮ್ಯಾನ್.

(2) ಕುಲ ಸಚಿವರು, ಬೋರ್ಡ್ ಓಫ್ ಗವರ್ನರ್ಸ್‌ನ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

24. ಬೋರ್ಡ್ ಓಫ್ ಗವರ್ನರ್ಸ್‌ನ ಪುನರ್‌ರಚನೆ.—(1) ಬೋರ್ಡ್ ಓಫ್ ಗವರ್ನರ್ಸ್‌ನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪುನರ್ ರಚಿಸತಕ್ಕದ್ದು.

(2) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಬೋರ್ಡ್ ಓಫ್ ಗವರ್ನರ್ಸ್‌ನ ಎಲ್ಲಾ ಸದಸ್ಯರುಗಳು ಈ ಅಧಿನಿಯಮದ; ಶಾಸನಗಳ ಹಾಗೂ ಅಧ್ಯಾದೇಶದ ಉಪಬಂಧಗಳಿಗೆ ಅನುಗುಣವಾಗಿ ಬೋರ್ಡ್ ಓಫ್ ಆರ್ಡಿನನ್ಸುಗಳ ಗವರ್ನರ್ಸ್‌ನ್ನು ಪುನರ್ ರಚನೆಯ ವರೆಗೆ ಅಧಿಕೃತ ಸ್ಥಾನವನ್ನು ವಹಿಸತಕ್ಕದ್ದು.

(3) ತಾತ್ಕಾಲಿಕ ತೆರವನ್ನು ಭರ್ತಿಮಾಡುವುದಕ್ಕಾಗಿ ನಾಮನಿರ್ದೇಶಿಸಲ್ಪಟ್ಟ ಒಬ್ಬ ಸದಸ್ಯನ ಅಧಿಕೃತ ಕಾಲಾವಧಿಯು ಯಾವ ಸದಸ್ಯನ ಸ್ಥಾನದ ತೆರವಿಗೆ ಆತನನ್ನು ನಾಮನಿರ್ದೇಶಿಸಲ್ಪಟ್ಟಿರುವುದೋ, ಆತನ ಉಳಿದ ಅಧಿಕೃತ ಸ್ಥಾನದವರೆಗೆ ಆಗಿರುವುದು.

(4) ಈ ವಿಭಾಗದಲ್ಲಿ ಏನೇ ಹೇಳಿದ್ದರೂ, ಸರಕಾರವು ಅನ್ಯಥಾ ನಿರ್ದೇಶಿಸದಿದ್ದಲ್ಲಿ, ಹೊರಹೋಗುವ ಒಬ್ಬ ಸದಸ್ಯನು ಬೇರೊಬ್ಬರನ್ನು ಆ ಸ್ಥಾನಕ್ಕೆ ಸದಸ್ಯನಾಗಿ ನಿರ್ದೇಶಿಸಲ್ಪಡುವವರೆಗೆ ಅಧಿಕಾರದಲ್ಲಿ ಮುಂದುವರಿಯತಕ್ಕದ್ದು.

(5) ಬೋರ್ಡ್ ಓಫ್ ಗವರ್ನರ್ಸ್‌ನ ಸದಸ್ಯರಿಗೆ ವಿಶ್ವವಿದ್ಯಾಲಯದಿಂದ ಶಾಸನ ಪ್ರಕಾರ ನಿಗದಿಪಡಿಸಿದಂತಹ ಭತ್ತೆಗಳು ಏನಾದರೂ ಇದ್ದಲ್ಲಿ ಪಡೆಯಲು ಅರ್ಹರಾಗಿರುತ್ತಾರೆ:

ಆದರೆ, ಈ ವಿಭಾಗದ ಪ್ರಕಾರ ಅಧಿಕೃತ ಸ್ಥಾನದ ನಿಮಿತ್ತ ಬೋರ್ಡ್ ಓಫ್ ಗವರ್ನರ್ಸ್ ಸದಸ್ಯನಾಗಿರುವಂತಹ ಯಾವುದೇ ವ್ಯಕ್ತಿಯು, ತನ್ನ ಅಧಿಕೃತ ಸ್ಥಾನವು ಕೊನೆಗೊಳ್ಳುವಾಗ ಅದರಲ್ಲಿನ ಸದಸ್ಯನಲ್ಲದಾಗಿರುವನು.

25. ಬೋರ್ಡ್ ಓಫ್ ಗವರ್ನರ್ಸ್‌ನ ಅಧಿಕಾರಗಳು, ಹೊಣೆಗಾರಿಕೆಗಳು ಹಾಗೂ ಕರ್ತವ್ಯಗಳು.—(1) ಬೋರ್ಡ್ ಓಫ್ ಗವರ್ನರ್ಸ್ ವಿಶ್ವವಿದ್ಯಾಲಯದ ಸರ್ವೋಚ್ಚ ಪ್ರಾಧಿಕಾರವಾಗಿರುವುದು ಹಾಗು ಕಾರ್ಯನಿರ್ವಾಹಕ ಸಮಿತಿ ಅಥವಾ ಶೈಕ್ಷಣಿಕ ಸಮಿತಿ ಈ ಅಧಿನಿಯಮದ್ದೋ, ಶಾಸನಗಳದ್ದೋ, ಆರ್ಡಿನನ್ಸುಗಳದ್ದೋ ಅಥವಾ ರೆಗ್ಯುಲೇಶನ್‌ಗಳದ್ದೋ ಪ್ರಕಾರ ಪ್ರದತ್ತವಾದಂತಹ ಅಧಿಕಾರಗಳಿಗನುಸಾರವಾಗಿ ಕಾರ್ಯವೆಸಗುವ ವಿಷಯಗಳನ್ನು ಹೊರತುಪಡಿಸಿ, ಕಾರ್ಯ ನಿರ್ವಾಹಕ ಸಮಿತಿಯು ಹಾಗೂ ಶೈಕ್ಷಣಿಕ ಸಮಿತಿಯು ಪ್ರಕ್ರಿಯೆಗಳನ್ನು ಪುನರಾವಲೋಕನ ಮಾಡುವ ಅಧಿಕಾರವಿರುವುದು ಹಾಗೂ ಈ ಅಧಿನಿಯಮದ ಪ್ರಕಾರವೋ ಶಾಸನಗಳ ಪ್ರಕಾರವೋ ಬೇರೆ ರೀತಿಯಲ್ಲಿ ಉಪಬಂಧಿಸಿರುವುದನ್ನು ಹೊರತುಪಡಿಸಿರುವ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದಾಗಿದೆ.

ಆದರೆ, ಕಾರ್ಯನಿರ್ವಾಹಕ ಸಮಿತಿಯೋ ಶೈಕ್ಷಣಿಕ ಸಮಿತಿಯೋ ಮೇಲೆ ಹೇಳಿದಂತಹ ಅಧಿಕಾರಗಳಿಗನುಗುಣವಾಗಿ ಕಾರ್ಯವೆಸಗಿತ್ತೇ ಅಥವಾ ಇಲ್ಲವೇ ಎಂಬ ಯಾವುದಾದರೂ ಸಮಸ್ಯೆ ಹುಟ್ಟಿಕೊಂಡಲ್ಲಿ, ಅಂತಹ ಸಮಸ್ಯೆಯನ್ನು ಕುಲಾಧಿಪತಿಯವರು ಪರಿಶೀಲಿಸಿ ನಿರ್ಣಯಿಸತಕ್ಕದ್ದು ಹಾಗೂ ಅದಕ್ಕೆ ಸಂಬಂಧಿಸಿದಂತಹ ಅವರ ತೀರ್ಮಾನವೇ ಅಂತಿಮವಾಗಿರುವುದು.

(2) ಈ ಅಧಿನಿಯಮದಲ್ಲಿ ಬೇರೆ ರೀತಿಯಲ್ಲಿ ಸ್ಪಷ್ಟವಾಗಿ ಉಪಬಂಧಿಸಿದ ಸಂಗತಿಗಳನ್ನು ಹೊರತುಪಡಿಸಿ, ಬೋರ್ಡ್ ಓಫ್ ಗವರ್ನರ್ಸ್‌ಗೆ ಈ ಕೆಳಗಿನ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(i) ವಿಶ್ವವಿದ್ಯಾಲಯಕ್ಕೆ ಸೂಕ್ತವೆಂದು ತೋರುವಂತಹ ಎಂಜಿನಿಯರಿಂಗ್ ವಿಜ್ಞಾನ, ಮ್ಯಾನೇಜ್‌ಮೆಂಟ್ ಹಾಗೂ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ ಅಂತರ್‌ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನ ಕ್ಷೇತ್ರಗಳು ಇತ್ಯಾದಿ ವಿಭಾಗಗಳಲ್ಲಿ ಅಧ್ಯಾಪನ ಹಾಗೂ ಸಂಶೋಧನೆಗಳಿಗೆ ಸೌಕರ್ಯವನ್ನೊದಗಿಸುವುದು ಹಾಗೂ ಅಂತಹ ಕ್ಷೇತ್ರದಲ್ಲಿ ಅಧ್ಯಯನದ ಪುರೋಗತಿಗೆ ಹಾಗೂ ಜ್ಞಾನದ ಪ್ರಸರಣಕ್ಕೆ ವ್ಯವಸ್ಥೆ ಮಾಡುವುದು;

(ii) ಅಂತರವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತಹ ಅಧ್ಯಯನ ಕ್ಷೇತ್ರರಂಗಗಳಲ್ಲಿನ ಜ್ಞಾನ ವರ್ಧನೆಗೆ ಸಂಬಂಧಿಸಿ ಮೂಲವಿಜ್ಞಾನ ಹಾಗು ಮಾನವಶಾಸ್ತ್ರಗಳು ಇತ್ಯಾದಿಗಳಲ್ಲಿ ಅಧ್ಯಯನಕ್ಕೆ ಹಾಗೂ ಸಂಶೋಧನೆಗೆ ವ್ಯವಸ್ಥೆ ಮಾಡುವುದು;

(iii) ತನ್ನದೇ ಆದ ಅಥವಾ ಕಾರ್ಯನಿರ್ವಾಹಕ ಸಮಿತಿಯ ಠರಾವು ಪ್ರಕಾರವೋ ಶಾಸನಗಳನ್ನು ರಚಿಸುವುದು ಅಥವಾ ತಿದ್ದುಪಡಿ ಮಾಡುವುದು ಹಾಗೂ ರದ್ದುಗೊಳಿಸುವುದು;

(iv) ಕಾರ್ಯನಿರ್ವಾಹಕ ಸಮಿತಿಯು ಮಂಜೂರುಮಾಡಿದಂತಹ ಯಾವುದಾದರೂ ಆರ್ಡಿನನ್ಸ್‌ನ್ನು ಅಥವಾ ಶೈಕ್ಷಣಿಕ ಸಮಿತಿಯು ಮಂಜೂರು ಮಾಡಿದಂತಹ ಯಾವುದಾದರೂ ರೆಗ್ಯುಲೇಶನ್‌ನನ್ನು ತಿದ್ದುಪಡಿ ಮಾಡುವುದು ಅಥವಾ ರದ್ದುಪಡಿಸುವುದು;

(v) ಕಾಲೇಜುಗಳನ್ನು ರೆಗ್ಯುಲರ್ ಕಾಲೇಜುಗಳಾಗಿ ಅಥವಾ ಸ್ವಾಯತ್ತ ಕಾಲೇಜುಗಳಾಗಿ ಅಥವಾ ಅಂಗ ಸಂಸ್ಥೆ ಕಾಲೇಜುಗಳಾಗಿ ಅಥವಾ ವಿಶ್ವವಿದ್ಯಾಲಯದ ಶೈಕ್ಷಣಿಕ ಸ್ವಾಯತ್ತಾಧಿಕಾರವಿರುವ ಕಾಲೇಜುಗಳನ್ನಾಗಿ ಸಂಯೋಜನೆ ಮಾಡುವುದಕ್ಕಿರುವ ಮಾದರಿಗಳನ್ನು ಮತ್ತು ಮಾನದಂಡಗಳನ್ನು ವಿಧಿಸುವುದು ಹಾಗೂ ಅಂಗೀಕರಿಸುವುದು;

(vi) ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸ್‌ಗಳ ಹಾಗೂ ರೆಗ್ಯುಲೇಶನ್‌ಗಳ ಉಪಬಂಧಗಳಿಗೆ ವಿಧೇಯವಾಗಿ ಸಂಸ್ಥೆಗಳನ್ನು ಕೋನ್‌ಸ್ಟಿಟ್ಯುವಂಟ್ ಕಾಲೇಜುಗಳಾಗಿ, ಅಥವಾ ಸ್ವಾಯತ್ತತ ಕಾಲೇಜುಗಳನ್ನಾಗಿ ಅಥವಾ ರೆಗ್ಯುಲರ್ ಕಾಲೇಜುಗಳಾಗಿ ಅಥವಾ ಶೈಕ್ಷಣಿಕ ಸ್ವಾಯತ್ತತ ಕಾಲೇಜುಗಳೆಂದು ಆದರೊಂದಿಗೆಯೇ ಸಂಯೋಜಿಸುವುದು ಹಾಗೂ ಕಾಲೇಜುಗಳ ಸಂಯೋಜನೆಯನ್ನು ರದ್ದುಗೊಳಿಸುವುದು;

(vii) ಶಾಸನಗಳಿಗನುಗುಣವಾಗಿ ಒಂದು ಕಾಲೇಜಿಗೋ, ಒಂದು ಕಾಲೇಜಿನ ಒಂದು ವಿಭಾಗಕ್ಕೋ ಅಥವಾ ವಿಶ್ವವಿದ್ಯಾಲಯದ ಒಂದು ವಿಭಾಗಕ್ಕೋ, ಕೇಂದ್ರಗಳಿಗೋ ಶೈಕ್ಷಣಿಕ ಸ್ವಾಯತ್ತತೆ ಅಧಿಕಾರವನ್ನು ನೀಡುವುದು;

(viii) ಈ ಅಧಿನಿಯಮದ ಉಪಬಂಧಗಳಿಗೆ ವಿಧೇಯವಾಗಿ, ಆಯಾಯ ಕಾಲಗಳಲ್ಲಿ ಅವಶ್ಯಕವೆಂದು ಕಂಡುಬರುವಂತಹ ಸಂಸ್ಥೆಗಳನ್ನೋ, ವಿಭಾಗಗಳನ್ನೋ, ಕೇಂದ್ರಗಳನ್ನೋ, ಸಂಶೋಧನಾ ಕೇಂದ್ರಗಳನ್ನೋ ಸ್ಥಾಪಿಸುವುದು, ಸಂರಕ್ಷಿಸುವುದು ಹಾಗೂ ಕಾರ್ಯ ನಿರ್ವಹಿಸುವುದು;

(ix) ಶಾಸನಗಳಲ್ಲಿ ನಿಗದಿಪಡಿಸಿದಂತಹ ಷರತ್ತುಗಳಿಗೆ ವಿಧೇಯವಾಗಿ ಒಂದು ನಿಗದಿತ ಕೋರ್ಸುಗಳ ಅಧ್ಯಯನ ಮಾಡುತ್ತಿರುವವರಿಗೆ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮ, ಪ್ರಮಾಣಪತ್ರಗಳು ಅಥವಾ ಇತರ ಡಿಸ್ಟಿಂಕ್ಷನ್ ಪ್ರದಾನ ಮಾಡುವುದು;

(x) ಶಾಸನಗಳ ಪ್ರಕಾರ ನಿಗದಿಪಡಿಸಲಾಗುವಂತಹ ರೀತಿಯಲ್ಲಿ ಅಂತಹ ಶೈಕ್ಷಣಿಕ ಗೌರವ ಪದವಿಗಳನ್ನು ಮತ್ತು ಇತರ ಡಿಸ್ಟಿಂಕ್ಷನ್‌ಗಳನ್ನು ನೀಡುವುದು;

(xi) ಶಾಸನಗಳ ಉಪಬಂಧಗಳಿಗನುಗುಣವಾಗಿ, ಯಾವುದೇ ವ್ಯಕ್ತಿಗೆ ನೀಡಿದ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮ, ಬಿರುದು ಅಥವಾ ಇತರ ಡಿಸ್ಟಿಂಕ್ಷನ್‌ನನ್ನು ಯಾರಿಗೆ ನೀಡಲಾಗಿದೆಯೋ ಅವರಿಗೆ ಕಾರಣ ಹೇಳಲು ನ್ಯಾಯಯುತವಾದ ಒಂದು ಅವಕಾಶವನ್ನು ನೀಡಿದ ಅನಂತರ, ತಡೆಹಿಡಿಯುವುದೋ; ಹಿಂತೆಗೆಯುವುದೋ ಅಥವಾ ರದ್ದುಪಡಿಸುವುದೋ ಮಾಡಬಹುದಾಗಿದೆ;

(xii) ಈ ಅಧಿನಿಯಮ, ಶಾಸನಗಳ, ಆರ್ಡಿನನ್ಸುಗಳ ಅಥವಾ ರೆಗ್ಯುಲೇಶನ್‌ಗಳ ಉಪಬಂಧ ವ್ಯವಸ್ಥೆಗನುಗುಣವಾಗಿ ಫೆಲೋಶಿಪ್‌ಗಳನ್ನು, ಸ್ಕೋಲರ್‌ಶಿಪ್‌ಗಳು, ಸ್ಟೂಡೆಂಟ್‌ಶಿಪ್‌ಗಳನ್ನು ಬರ್ಸರಿಗಳು, ಪದಕಗಳು, ಬಹುಮಾನಗಳು ಇತ್ಯಾದಿಗಳನ್ನು ನೀಡುವುದು ಹಾಗೂ ಪ್ರದರ್ಶನಗಳನ್ನು ಸಂಘಟಿಸುವುದು;

(xiii) 42ನೇ ವಿಭಾಗದ (ix)ನೇ ಖಂಡದ ಪ್ರಕಾರ ವಿಶ್ವವಿದ್ಯಾಲಯದಲ್ಲಿ, ಕೋನ್ಸಿಟ್ಯುಯಂಟ್ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯ ನಡೆಸುವ ಕೇಂದ್ರಗಳಲ್ಲಿ, ಬೋಧನೆಗೆ, ಸಂಶೋಧನೆಗೆ ಹಾಗೂ ಆಡಳಿತಕ್ಕೆ ಬೇಕಾದಂತಹ ಹುದ್ದೆಗಳನ್ನು ಸೃಷ್ಟಿಸುವುದು ಹಾಗು ಈ ಅಧಿನಿಯಮದ ಉಪಬಂಧಗಳಿಗೆ ಹಾಗೂ ಶಾಸನಗಳಿಗನುಗುಣವಾಗಿ ಅಂತಹ ಹುದ್ದೆಗಳಿಗೆ ಬೇಕಾದಂತಹ ಅರ್ಹತೆಯನ್ನು ನಿಗದಿಪಡಿಸುವುದು ಹಾಗೂ ಅಂತಹ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕಾತಿ ಮಾಡುವುದು;

(xiv) ಖಾಸಗಿ ಕಾಲೇಜುಗಳ ಅಧ್ಯಾಪಕರ-ಅಧ್ಯಾಪಕೇತರ ನೌಕರರ ಅರ್ಹತೆಯನ್ನು ನಿಶ್ಚಯಿಸುವುದು, ಅಂತಹ ಕಾಲೇಜುಗಳಲ್ಲಿನ ಅಧ್ಯಾಪಕರುಗಳ ಹಾಗೂ ಅಧ್ಯಾಪಕೇತರ ನೌಕರರ ನೇಮಕಾತಿಯನ್ನು ಅಂಗೀಕರಿಸುವುದು;

(xv) ಕೇಂದ್ರ ಸರಕಾರವೋ ರಾಜ್ಯ ಸರಕಾರವೋ ಜಾರಿಗೆ ತಂದಂತಹ ಕಾನೂನುಗಳ ಉಪಬಂಧಗಳಿಗೆ ವಿಧೇಯವಾಗಿ ವಿಶ್ವವಿದ್ಯಾಲಯದ ನೌಕರರ ಸೇವಾ ಷರತ್ತುಗಳನ್ನು ಹಾಗೂ ನಿಬಂಧನೆಗಳನ್ನು ನಿಶ್ಚಯಿಸುವುದು.

(xvi) ಖಾಸಗಿ ಕಾಲೇಜುಗಳ ಹಾಗೂ ಕೋನ್ಸ್‌ಟಿಟ್ಯುವಂಟ್ ಕಾಲೇಜುಗಳಲ್ಲಿನ ಅಧ್ಯಾಪಕರುಗಳ ಸದಾಚಾರಸಂಹಿತೆಯು ಒಳಗೊಂಡ ಸೇವಾ ಷರತ್ತುಗಳು, ಕೆಲಸದ ಭಾರ, ದಕ್ಷತೆಯನ್ನು ನಿರ್ಣಯಿಸಲು ಬೇಕಾದ ಮಾನದಂಡಗಳನ್ನು ನಿಶ್ಚಯಿಸುವುದು;

(xvii) ಸಂಶೋಧನೆ, ಅಭಿವೃದ್ಧಿ, ಸಲಹೆ, ಹಾಗೂ ತರಬೇತಿಯಂತಹ ಚಟುವಟಿಕೆಗಳನ್ನು ಉಪಯೋಗಿಸಿ ಅಥವಾ ಅದನ್ನು ನವೀಕರಿಸಿ ಕೈಗಾರಿಕೆ, ವಾಣಿಜ್ಯ ಅಥವಾ ಇತರ ಯಾವುದೇ ಸರಕಾರೇತರ ಸಂಘಗಳು ಮುಂತಾದವುಗಳಿಂದಿರುವ ವ್ಯವಹಾರಗಾರರಿಗೆ ಸೇವೆಗಳನ್ನು ಪ್ರಧಾನ ಮಾಡಿಕೊಂಡು ವಿಶ್ವವಿದ್ಯಾಲಯದ ಸಂಪನ್ಮೂಲತೆಯನ್ನು ಹೆಚ್ಚಿಸುವುದು;

(xviii) ಕುಲಪತಿಯವರ ಹೊರತಾದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಅಂತಹ ಅಧಿಕಾರಿಗಳಿಗೆ ಈ ಅಧಿನಿಯಮದ ಪ್ರಕಾರ ನೀಡಿರುವ ಅಧಿಕಾರವನ್ನಲ್ಲದೆ ಇತರ ಅಧಿಕಾರಗಳನ್ನು ಹಾಗೂ ಹೊಣೆಗಾರಿಕೆಗಳನ್ನು ನಿರ್ಣಯಿಸುವುದು;

(xix) ಖರೀದಿಸಿದಂತಹ, ಅನುದಾನವಾಗಿ ಲಭಿಸಿದ, ಮರಣಪತ್ರವಾಗಿ ನೀಡಿದ ಅಥವಾ ಇನ್ನಿತರ ರೂಪದಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆಗಳಿಗಾಗಿ ಅದರಲ್ಲಿ ನಿಕ್ಷಿಪ್ತವಾಗುವಂತಹ ಯಾವುದಾದರೂ ಸ್ಥಿರ ಅಥವಾ ಚರಆಸ್ತಿ ವಗೈರೆಗಳನ್ನು ಅರ್ಜಿಸುವುದು ಹಾಗು ಸ್ವಾಧೀನದಲ್ಲಿರಿಸುವುದು ಹಾಗು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ಎಲ್ಲಾ ಅಥವಾ ಯಾವುದಾದರೂ ವಸ್ತು ವಗೈರೆಯನ್ನು ಪರಭಾರೆ ಮಾಡುವುದು, ಪರಾಧೀನ ಮಾಡುವುದು ಹಾಗೂ ಬೇರೆ ರೀತಿಯಲ್ಲಿ ಬಿಟ್ಟುಕೊಡುವುದು ಹಾಗು ಒಂದು ನಿಗಮಿತ ನಿಕಾಯಕ್ಕೆ ಆನುಷಂಶಿಕವಾದ ಅಥವಾ ಸಂಬಂಧಪಟ್ಟ ಇನ್ನಿತರ ಎಲ್ಲಾ ಕಾರ್ಯಗಳನ್ನು ಮಾಡುವುದು;

ಆದರೆ, ಸ್ಥಿರಾಸ್ತಿಗಳನ್ನು ಪರಭಾರೆ ಮಾಡುವ ಪರಾಧೀನ ಮಾಡುವ ಅಥವಾ ಬೇರೆ ರೀತಿಯಲ್ಲಿ ವಿಲೇವಾರಿ ಮಾಡುವುದಕ್ಕಾಗಿ ಸರಕಾರದ ಪೂರ್ವಾನುಮತಿಯನ್ನು ಪಡೆದಿರತಕ್ಕದ್ದು.

(xx) ಕಾಲೇಜುಗಳ ಅಥವಾ ಸಂಸ್ಥೆಗಳ ನಿರ್ವಹಣೆ, ಅಂತಹ ಕಾಲೇಜುಗಳ ಅಥವಾ ಸಂಸ್ಥೆಗಳ ಮ್ಯಾನೇಜ್‌ಮೆಂಟ್‌ನ ಕ್ರಿಮಿನಲ್ ಸ್ವಭಾವವಿರುವ ಅವ್ಯವಹಾರಗಳು ಅಥವಾ ಕರ್ತವ್ಯ ಲೋಪವು ವಿಶ್ವವಿದ್ಯಾಲಯ ನೇಮಿಸುವ ತನಿಖಾ ಸಮಿತಿಗೆ ಪ್ರಥಮ ದೃಷ್ಟಿಯಲ್ಲೇ ಮನವರಿಕೆಯಾದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಅಂತಹ ಕಾಲೇಜುಗಳ ಅಥವಾ ಸಂಸ್ಥೆಗಳ ನಿರ್ವಹಣೆಯನ್ನು ವಹಿಸಿಕೊಳ್ಳಲು ಸರಕಾರಕ್ಕೆ ಶಿಫಾರಸು ಮಾಡುವುದು;

(xxi) ಅದರ ಸಮಕ್ಷಕ್ಕೆ ಕಾರ್ಯನಿರ್ವಾಹಕ ಸಮಿತಿಯು ಸಲ್ಲಿಸುವಂತಹ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಹಾಗೂ ವಾರ್ಷಿಕ ಲೆಕ್ಕಗಳನ್ನು ಮರು ಪರಿಶೀಲನೆ ಮಾಡುವುದು ಹಾಗೂ ಅದಕ್ಕೆ ಯುಕ್ತವೆಂದು ತೋರುವಂತಹ ಕ್ರಮಗಳನ್ನು ಕೈಗೊಳ್ಳುವುದು, ಹಾಗೂ ಶಾಸನಗಳ ನಿಬಂಧನೆಗಳಿಗನುಗುಣವಾಗಿ ಬಜೆಟ್‌ನ್ನು ಪರಿಗಣಿಸುವುದು ಹಾಗೂ ಮಂಜೂರಾತಿ ನೀಡುವುದು;

(xxii) ಈ ಅಧಿನಿಯುವುದ ಉಪಬಂಧಗಳಿಗೆ ವಿಧೇಯುವಾಗಿ, ಕೇಂದ್ರ ಸರಕಾರದಿಂದಲೋ ಎ.ಐ.ಸಿ.ಟಿ.ಇ. ಯಿಂದಲೋ, ಇತರ ಏಕೀಕೃತ ನಿಕಾಯಗಳಿಂದಲೋ, ಸರಕಾರವು ಅಂಗೀಕರಿಸುವಂತಹ ಅವಶ್ಯಕತೆಗಳಿಗಾಗಿ, ಭದ್ರತೆಯ ಮೇಲೆಯೋ ಭದ್ರತೆ ಇಲ್ಲದೆಯೋ ಹಣ ಸಾಲ ಪಡೆಯುವುದು;

(xxiii) ಇತರ ಯಾವುದಾದರೂ ವಿಶ್ವವಿದ್ಯಾಲಯದೊಂದಿಗೋ, ಸಂಸ್ಥೆಯೊಂದಿಗೋ, ಪ್ರಾಧಿಕಾರದೊಂದಿಗೋ ಅಥವಾ ಸಂಘದೊಂದಿಗೋ ಸಂಶೋಧನೆಗಾಗಿ ಅಥವಾ ಉಪದೇಶಕ ಸೇವೆಗಾಗಿ ಸಹಕರಿಸುವುದೋ ಅಥವಾ ಸಹ ಪ್ರವರ್ತಿಸುವುದು ಹಾಗೂ ಇತರ ವಿಶ್ವವಿದ್ಯಾಲಯುಗಳೊಂದಿಗೋ ಸಂಸ್ಥೆಗಳೊಂದಿಗೋ ಪ್ರಾಧಿಕಾರಗಳೊಂದಿಗೋ, ಸಂಘಟನೆಗಳೊಂದಿಗೋ ಕೋರ್ಸುಗಳನ್ನು ನಡೆಸಲು ಹಾಗೂ ಸಂದರ್ಭೋಚಿತವಾಗಿ ಅಂತಹ ಅವಶ್ಯಕತೆಗಳಿಗಾಗಿ ಸೂಕ್ತವಾದ ವ್ಯವಸ್ಥೆಯಲ್ಲಿ ಏರ್ಪಡಿಸುವುದು;

(xxiv) ಈ ಅಧಿನಿಯಮ ಹಾಗೂ ಶಾಸನಗಳಿಗನುಗುಣವಾಗಿ ನೀಡಲಾಗುವಂತಹ ಇನ್ನಿತರ ಅಧಿಕಾರಗಳನ್ನು ಚಲಾಯಿಸುವುದು ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವುದು.

26. ಬೋರ್ಡ್ ಓಫ್ ಗವರ್ನರ್ಸ್ ಸಭೆಗಳು.—(1) ಕನಿಷ್ಟಪಕ್ಷ ನಾಲ್ಕು ತಿಂಗಳಿಗೊಮ್ಮೆಯಾದರೂ ಬೋರ್ಡ್ ಓಫ್ ಗವರ್ನರ್ಸ್ ನಿರ್ಧರಿಸುವ ರೀತಿಯಲ್ಲಿ, ಕುಲಪತಿಯವರು ನಿಗದಿಪಡಿಸುವ ತಾರೀಖುಗಳಲ್ಲಿ ಬೋರ್ಡ್ ಓಫ್ ಗವರ್ನರ್ಸ್ ಸಭೆ ಸೇರತಕ್ಕದ್ದು ಹಾಗೂ ಇದು ವೀಡಿಯೋ ಕಾನ್ಫೆರನ್ಸ್ ಮೂಲಕ ಆಗಬಹುದಾಗಿದೆ:

(2) ಬೋರ್ಡ್ ಓಫ್ ಗವರ್ನರ್ಸ್ ಒಂದು ಸಭೆಯ ಕೋರಂ ಅದರ ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದು ಇರತಕ್ಕದ್ದು:

ಆದರೆ, ವಿಶ್ವವಿದ್ಯಾಲಯದ ಒಂದು ಘಟಿಕೋತ್ಸವಕ್ಕೋ, ಪದವಿಗಳನ್ನೋ, ಪ್ರಶಸ್ತಿಗಳನ್ನೋ, ಇತರ ಡಿಸ್ಟಿಂಕ್ಷನ್ನೋ ಪ್ರದಾನ ಮಾಡಲು ಬೋರ್ಡ್ ಓಫ್ ಗವರ್ನರ್ಸ್ ಕರೆಯುವ ಒಂದು ಸಭೆಗೆ ಕೋರಂನ ಅವಶ್ಯಕತೆ ಇರುವುದಿಲ್ಲ.

(3) ಕುಲಪತಿಯವರಿಗೆ ಅವರಿಗೆ ಸೂಕ್ತವೆಂದು ತೋರುವಂತಹ ಯಾವುದೇ ಕಾಲದಲ್ಲಿಯೂ ಬೋರ್ಡ್ ಓಫ್ ಗವರ್ನರ್ಸ್‌ನ ಒಂದು ಸಭೆಯನ್ನು ಕರೆಯಬಹುದಾಗಿದೆ ಹಾಗೂ ಬೋರ್ಡ್ ಓಫ್ ಗವರ್ನರ್ಸ್‌ನ ಒಟ್ಟು ಸದಸ್ಯರುಗಳ ಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಲ್ಲದ ಸದಸ್ಯರುಗಳು ಸಹಿಹಾಕಿದ ಲಿಖಿತ ಕೋರಿಕೆಯ ಮೇರೆಗೆ ಕುಲಪತಿಯವರು ಬೋರ್ಡ್ ಓಫ್ ಗವರ್ನರ್ಸ್‌ನ ವಿಶೇಷ ಸಭೆಯನ್ನು ಕರೆಯಬಹುದಾಗಿದೆ.

(4) ಲಿಖಿತಕೋರಿಕೆಯ ಮೇರೆಗೆ ಒಂದು ವಿಶೇಷ ಸಭೆಯನ್ನು ಕರೆಯುವಾಗ, ಲಿಖಿತಕೋರಿಕೆಯಲ್ಲಿರುವ ವಿಷಯವನ್ನಲ್ಲದೆ ಬೇರೆ ಯಾವ ವಿಷಯವನ್ನೂ ಆ ಸಭೆಯಲ್ಲಿ ಪರಿಗಣಿಸತಕ್ಕದ್ದಲ್ಲ.

(5) ಕುಲಾಧಿಪತಿಯವರ ಗೈರು ಹಾಜರಿಯಲ್ಲಿ ಬೋರ್ಡ್ ಓಫ್ ಗವರ್ನರ್ಸ್‌ನ ಸಭೆಯಲ್ಲಿ ಕುಲಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಹಾಗು ಅವರ ಗೈರು ಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ಉಪ-ಸಹ-ಕುಲಾಧಿಪತಿಗಳು ವಹಿಸತಕ್ಕದ್ದು, ಆದರೆ ಕುಲಪತಿಯವರ ಗೈರುಹಾಜರಿಯಲ್ಲಿ ನಿರಂತರವಾಗಿ ಎರಡಕ್ಕಿಂತ ಹೆಚ್ಚು ಸಭೆ ಸೇರತಕ್ಕದ್ದಲ್ಲ.

27. <u>ಕಾರ್ಯನಿರ್ವಾಹಕ ಸಮಿತಿ.</u>—(1) ಕಾರ್ಯ ನಿರ್ವಾಹಕ ಸಮಿತಿಯು ವಿಶ್ವವಿದ್ಯಾಲಯದ ಪ್ರದಾನ ಕಾರ್ಯನಿರ್ವಾಹಕ ನಿಕಾಯವಾಗಿರತಕ್ಕದ್ದು ಹಾಗೂ ಅದರಲ್ಲಿ ಈ ಕೆಳಗಿನ ಸದಸ್ಯರುಗಳು ಇರತಕ್ಕದ್ದು, ಅದೇನೆಂದರೆ:—

<u>ಪದನಿಮಿತ್ತ ಸದಸ್ಯರುಗಳು</u>

(i) ಕುಲಪತಿ;

(ii) ಉಪ-ಸಹ-ಕುಲಾಧಿಪತಿ;

(iii) ಹಣಕಾಸು ಇಲಾಖೆಯ ಸರಕಾರಿ ಕಾರ್ಯದರ್ಶಿ ಅಥವಾ ಅವರು ಅಧಿಕೃತಗೊಳಿಸುವ ಜಂಟಿಕಾರ್ಯದರ್ಶಿ ಪದವಿಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(iv) ಉನ್ನತ ಶಿಕ್ಷಣ ಇಲಾಖೆಯ ಸರಕಾರಿ ಕಾರ್ಯದರ್ಶಿ ಅಥವಾ ಅವರು ಅದಿಕೃತಗೊಳಿಸುವ ಜಂಟಿ ಕಾರ್ಯದರ್ಶಿ ಪದವಿಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(v) ತಾಂತ್ರಿಕ ಶಿಕ್ಷಣ ನಿರ್ದೇಶಕರು;

(vi) ಡೀನ್ (ಸಂಶೋಧನೆ);

(vii) ಡೀನ್ (ಶೈಕ್ಷಣಿಕ);

(viii) ಕುಲಸಚಿವ;

(ix) ಬೋರ್ಡ್ ಓಫ್ ಗವರ್ನರ್ಸ್‌ನಲ್ಲಿ ಸದಸ್ಯರಾಗಿರುವಂತಹ ಶಾಸಕರುಗಳಿಂದ ಸರಕಾರವು ನಾಮ ನಿರ್ದೇಶಿಸುವ ಇಬ್ಬರು ಸದಸ್ಯರುಗಳು;

(x) ಬೋರ್ಡ್ ಓಫ್ ಗವರ್ನರ್ಸ್‌ನ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳೊಳಗಿನಿಂದ ಸರಕಾರವು ನಾಮ ನಿರ್ದೇಶಿಸುವ ಒಬ್ಬ ಸದಸ್ಯ;

(xi) ಶಾಸನಗಳ ಪ್ರಕಾರ ಬೋರ್ಡ್ ಓಫ್ ಗವರ್ನರ್ಸ್ ಆಯ್ಕೆಮಾಡಲಿರುವ ವಿದ್ಯಾರ್ಥಿ ಪ್ರತಿನಿಧಿಗಳನ್ನೊಳಗೊಂಡ ಸರಕಾರವು ನಾಮ ನಿರ್ದೇಶಿಸುವ ಒಬ್ಬ ಸದಸ್ಯ;

(xii) ಬೋರ್ಡ್ ಓಫ್ ಗವರ್ನರ್ಸ್‌ನ ಅಧ್ಯಾಪಕರೊಳಗಿನಿಂದ ಸರಕಾರವು ನಾಮನಿರ್ದೇಶಿಸುವ ಒಬ್ಬ ಸದಸ್ಯ;

(xiii) ಬೋರ್ಡ್ ಓಫ್ ಗವರ್ನರ್ಸ್‌ನ ಖಾಸಗಿ ಕಾಲೇಜುಗಳ ಮ್ಯಾನೇಜರುಗಳೊಳಗಿನಿಂದ ಸರಕಾರ ನಾಮನಿರ್ದೇಶಿಸುವ ಒಬ್ಬ ಸದಸ್ಯ.

ಇತರ ಸದಸ್ಯರುಗಳು

ನಾಮ ನಿರ್ದೇಶಿತ ಸದಸ್ಯರುಗಳಿಂದ ಬೋರ್ಡ್ ಓಫ್ ಗವರ್ನರ್ಸ್ ನಾಮ ನಿರ್ದೇಶಿಸುವ ಒಬ್ಬ ಸದಸ್ಯ.

(2) ಕುಲಪತಿಯವರು ಕಾರ್ಯ ನಿರ್ವಾಹಕ ಸಮಿತಿಯ ಚೆಯರ್ ಪರ್ಸನ್ ಆಗಿರತಕ್ಕದ್ದು ಹಾಗೂ ಕುಲಸಚಿವರು ಕಾರ್ಯ ನಿರ್ವಾಹಕ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

28. ಕಾರ್ಯ ನಿರ್ವಾಹಕ ಸಮಿತಿಯ ಸಭೆಗಳು.—(1) ಕಾರ್ಯ ನಿರ್ವಾಹಕ ಸಮಿತಿಯು, ಕುಲಪತಿಯವರು ನಿಗದಿ ಪಡಿಸುವಂತಹ ರೀತಿಯಲ್ಲಿ ಸಾಧ್ಯವಾದಷ್ಟು ಸಲ ಸಭೆ ಸೇರತಕ್ಕದ್ದು, ಆದರೆ ಕನಿಷ್ಠ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಕುಲಪತಿಯವರು ನಿಗದಿಪಡಿಸುವಂತಹ ದಿನಾಂಕದಂದು ಸಭೆ ಸೇರಿರತಕ್ಕದ್ದು. ಕಾರ್ಯನಿರ್ವಾಹಕ ಸಮಿತಿಯ ಒಂದು ಸಭೆಯ ಕ್ವಾರಂ ಐದು ಆಗಿರತಕ್ಕದ್ದಾಗಿದೆ.

(2) ಕುಲಪತಿಯವರು ಆದೇಶಿಸುವ ಅಂತಹ, ಸ್ಥಳದಲ್ಲಿ, ತಾರೀಖಿನಂದು, ಹಾಗೂ ಕಾಲದಲ್ಲಿ ಕಾರ್ಯನಿರ್ವಾಹಕ ಸಮಿತಿಯ ಸಭೆಗಳನ್ನು ಕುಲಸಚಿವರು ಕರೆಯತಕ್ಕದ್ದಾಗಿದೆ.

29. <u>ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಸದಸ್ಯರುಗಳ ಅಧಿಕಾರ ಕಾಲಾವಧಿ.</u>— ಕಾರ್ಯನಿರ್ವಾಹಕ ಸಮಿತಿಯ ಪದನಿಮಿತ್ತ ಸದಸ್ಯರುಗಳನ್ನು ಹೊರತಾದ ಸದಸ್ಯರುಗಳು ಅವರನ್ನು ನಾಮ ನಿರ್ದೇಶನದ ದಿನಾಂಕದಿಂದ ನಾಲ್ಕು ವರ್ಷಗಳ ಕಾಲಾವಧಿಯ ವರೆಗೆ ಅಧಿಕಾರ ವಹಿಸತಕ್ಕದ್ದಾಗಿದೆ. ಕಾರ್ಯನಿರ್ವಾಹಕ ಸಮಿತಿಯ ಇತರ ಸದಸ್ಯರುಗಳ ಅಧಿಕಾರದ ಕಾಲಾವಧಿಯು ಅವರ ಅಧಿಕೃತ ಪದಾವಧಿಯು ಕೊನೆಗೊಳ್ಳುವವರೆಗೆ ಆಗಿರುವುದಾಗಿದೆ.

30. <u>ಕಾರ್ಯ ನಿರ್ವಾಹಕ ಸಮಿತಿಯ ಅಧಿಕಾರಗಳು ಹೊಣೆಗಾರಿಕೆಗಳು ಹಾಗೂ ಕರ್ತವ್ಯಗಳು.</u>—(1) ಈ ಅಧಿನಿಯಮ ಮತ್ತು ಶಾಸನಗಳ ಉಪಬಂಧಗಳಿಗೆ ವಿಧೇಯವಾಗಿ, ವಿಶ್ವವಿದ್ಯಾಲಯದ ಸಂಸ್ಥೆಗಳ ಮೇಲಿನ ಸಾಮಾನ್ಯ ಮೇಲ್ವಿಚಾರಣೆ ಹಾಗೂ ನಿಯಂತ್ರಣ ವನ್ನೊಳಗೊಂಡು ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಹೊಣೆಗಾರಿಕೆಯು ಕಾರ್ಯನಿರ್ವಾಹಕ ಸಮಿತಿಗೆ ನಿಹಿತವಾಗಿರುವುದು.

(2) ಈ ಅಧಿನಿಯಮದ ಹಾಗೂ ಶಾಸನಗಳ ಉಪಬಂಧ ವಿಧೇಯವಾಗಿ ಸಮಿತಿಗೆ ಈ ಕೆಳಗಿನ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(i) ಈ ಅಧಿನಿಯಮ ಹಾಗೂ ಅದರಡಿಯಲ್ಲಿ ಮಾಡಿರುವಂತಹ ಶಾಸನಗಳಿಗೆ ಅನುಗುಣವಾಗಿ ಅಧ್ಯಾದೇಶಗಳನ್ನು ಹೊರಡಿಸುವುದು, ತಿದ್ದುಪಡಿಮಾಡುವುದು ಮತ್ತು ರದ್ದು ಪಡಿಸುವುದು;

(ii) ಬೋರ್ಡ್ ಓಫ್ ಗವರ್ನರ್ಸ್‌ನ ಪರಿಗಣನೆಗಾಗಿ ಶಾಸನಗಳನ್ನು ನಿರ್ದೇಶಿಸುವುದು;

(iii) ಕಾಲೇಜುಗಳನ್ನು ವಿಶ್ವವಿದ್ಯಾಲಯದ ರೆಗ್ಯುಲರ್ ಕಾಲೇಜುಗಳಾಗಿ ಅಥವಾ ಸ್ವಾಯತ್ತಕಾಲೇಜುಗಳಾಗಿ ಅಥವಾ ಕೋನ್‌ಸ್ಟಿಟ್ಯುಯಂಟ್ ಕಾಲೇಜುಗಳಾಗಿ ಸಂಯೋಜನೆ ನೀಡುವುದಕ್ಕೆ ಬೇಕಾಗಿರುವ ಮಾನದಂಡ ಹಾಗೂ ಗುಣಮಟ್ಟವನ್ನು ನಿರ್ದೇಶಿಸುವುದು;

(iv) ಹಾಸ್ಟೆಲುಗಳನ್ನು ಸ್ಥಾಪಿಸುವುದು, ನಡೆಸುವುದು ಹಾಗೂ ಅದರ ಆಡಳಿತ ನಿರ್ವಹಿಸುವುದು ಹಾಗೂ ವಿಶ್ವವಿದ್ಯಾಲಯವು ನಡೆಸದಂತಹ ಹಾಸ್ಟೆಲುಗಳಿಗೆ ಅಂಗೀಕಾರ ನೀಡುವುದು, ಹಾಗೂ ಅಂತಹ ಅಂಗೀಕಾರವನ್ನು ಅಮಾನತುಗೊಳಿಸುವುದು ಮತ್ತು ಹಿಂತೆಗೆಯುವುದು;

(v) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ನಿಯಂತ್ರಿಸುವುದು, ಅವರ ಆರೋಗ್ಯ ಖಾತ್ರಿಪಡಿಸುವುದು, ಕಲ್ಯಾಣ ಹಾಗೂ ಶಿಸ್ತನ್ನು ಹಾಗೂ ಸಂಯೋಜಿಸಲ್ಪಟ್ಟ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಮೇಲೆಯೂ ಅಂತಹ ಅವಶ್ಯಕತೆಗಳಿಗಾಗಿ ಸಂಯೋಜಿಸಲ್ಪಟ್ಟಿರುವ ಕಾಲೇಜುಗಳ ಮೂಲಕ ನಿಯಂತ್ರಣವನ್ನು ಹೇರುವುದು;

(vi) ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿಭಾಗಗಳಲ್ಲಿಯೂ ಕೇಂದ್ರಗಳಲ್ಲಿಯೂ ವಿವಿಧ ಅಧ್ಯಯನ ಕೋರ್ಸುಗಳಲ್ಲಿನ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಿಯಂತ್ರಿಸುವುದು ಹಾಗೂ ಕ್ರಮೀಕರಿಸುವುದು;

(vii) ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ನಡೆಸುವುದು, ಅದರ ಫಲಿಂತಾಶಗಳನ್ನು ಅಂಗೀಕರಿಸುವುದು ಹಾಗೂ ಪ್ರಕಟಗೊಳಿಸುವುದು;

(viii) ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದಂತಹ ಶುಲ್ಕವನ್ನು ನಿಗದಿಪಡಿಸುವುದು ಹಾಗೂ ಅಂತಹ ಶುಲ್ಕವನ್ನು ಕೇಳುವುದು ಹಾಗೂ ಸ್ವೀಕರಿಸುವುದು;

(ix) ದತ್ತಿಗಳನ್ನು, ಮರಣ ಪತ್ರದ ಮೂಲಕ ನೀಡಿದ ಆಸ್ತಿಗಳನ್ನು ಕೊಡುಗೆಗಳಾಗಿ ವಿಶ್ವವಿದ್ಯಾಲಯಕ್ಕಾಗಿ ಹಸ್ತಾಂತರ ಮಾಡುವ ಸ್ಥಿರ ಮತ್ತು ಚರ ಆಸ್ತಿ ವಗೈರೆಗಳನ್ನು ಸ್ವೀಕರಿಸುವುದು;

ಆದರೆ ಅಂತಹ ಎಲ್ಲಾ ದತ್ತಿಗಳ, ಮರಣ ಪತ್ರದ ಮೂಲಕ ನೀಡಿದಂತಹ ಆಸ್ತಿಯ, ದಾನಗಳ ಮತ್ತು ಹಸ್ತಾಂತರಗಳ ಕುರಿತು ಬೋರ್ಡ್ ಓಫ್ ಗವರ್ನರ್ಸ್‌ನ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು;

(x) ವಿದೇಶದ ಏಜೆನ್ಸಿಗಳಿಂದ ಸಹಭಾಗಿತ್ವ ಕಾರ್ಯಕ್ರಮಗಳಿಗೆ ಬೇಕಾದ ನಿಧಿಗಳನ್ನು ಆ ಅವಶ್ಯಕತೆಗಾಗಿರುವ ಕೇಂದ್ರ ಹಾಗೂ ರಾಜ್ಯ ಸರಕಾರದ ನಿಯಮಗಳಿಗೆ ಹಾಗೂ ರೆಗ್ಯುಲೇಶನ್‌ಗಳಿಗೆ ವಿಧೇಯವಾಗಿ ಸ್ವೀಕರಿಸುವುದು;

(xi) ವಿಶ್ವವಿದ್ಯಾಲಯಕ್ಕೆ ಸರಕಾರ ಹಸ್ತಾಂತರ ಮಾಡಿದ ಎಲ್ಲಾ ಸ್ಥಿರ ಹಾಗೂ ಚರಾಸ್ತಿಗಳನ್ನು ನಿರ್ವಹಿಸಲು ಹಾಗೂ ನಿಯಂತ್ರಿಸಲು ನಿರ್ದೇಶಿಸುವುದು;

(xii) ವಿಶ್ವವಿದ್ಯಾಲಯದ ಆರ್ಥಿಕ ಅಂದಾಜನ್ನು ಪರಿಗಣಿಸುವುದು, ಹಾಗು ಅದನ್ನು ಈ ಉದ್ದೇಶಕ್ಕಾಗಿ ಮಾಡಿದ ಶಾಸನಗಳ ಉಪಬಂಧಗಳಿಗೆ ಅನುಗುಣವಾಗಿ ಬೋರ್ಡ್ ಓಫ್ ಗವರ್ನರ್ಸ್‌ಗೆ ಸಮರ್ಪಿಸುವುದು;

(xiii) ವಿಶ್ವವಿದ್ಯಾಲಯದ ಸಾಮಾನ್ಯ ಮುದ್ರೆಯ ಮಾದರಿ, ಸ್ವಾಧೀನ ಹಾಗೂ ಅದರ ಬಳಕೆ ಇತ್ಯಾದಿ ಬಗ್ಗೆ ನಿರ್ದೇಶಿಸುವುದು;

(xiv) ಸಂಯೋಜಿಸಲ್ಪಟ್ಟ ಕಾಲೇಜುಗಳ ವ್ಯವಹಾರಗಳ ಬಗ್ಗೆ ತನಿಖೆ ಮಾಡಲು ನಿರ್ದೇಶಿಸುವುದು ಹಾಗೂ ಅದಕ್ಕೆ ಬೇಕಾದ ಸಿದ್ದತೆಗಳನ್ನು ಮಾಡಿಕೊಡುವುದು, ಅದರ ಕಾರ್ಯದಕ್ಷತೆಗಾಗಿಯೂ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸಂಪನ್ಮೂಲಗಳನ್ನು ಖಾತ್ರಿಪಡಿಸುವುದಕ್ಕಾಗಿಯೂ ಮೂಲ ಸೌಕರ್ಯಕ್ಕಾಗಿಯೂ ಶೈಕ್ಷಣಿಕ ಸಾಧನೆಗಾಗಿಯೂ ಈ ಕಾಲೇಜುಗಳಲ್ಲಿರುವ ಅಧ್ಯಾಪಕರುಗಳ ಚಟುವಟಿಕೆಗಾಗಿಯೂ ಖಾಸಗಿ ಕೋಲೇಜುಗಳ ವಿಷಯದಲ್ಲಿ ನೌಕರವರ್ಗಕ್ಕೆ ತಕ್ಕ ಸಂಬಳ ಹಾಗೂ ಸೇವಾ ವ್ಯವಸ್ಥೆಗಳನ್ನು ಖಾತ್ರಿ ಪಡಿಸುವುದಕ್ಕಾಗಿಯೂ ಅಂತಹ ನಿರ್ದೇಶಗಳನ್ನು ಅವಗಣಿಸುವಂತಹ ಸಂದರ್ಭದಲ್ಲಿ ಸಂಯೋಜನೆಯ ವ್ಯವಸ್ಥೆಗಳಲ್ಲಿ ಬದಲಾವಣೆ ಮಾಡುವುದಕ್ಕಾಗಿಯೂ ಉಚಿತವೆಂದು ತೋರುವಂತಹ ಕ್ರಮಗಳನ್ನು ಕೈಗೊಳ್ಳುವುದು;

(xv) ಈ ಅಧಿನಿಯುವುದಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ ವಿಶ್ವವಿದ್ಯಾಲಯದಲ್ಲಿನ ಅಧಿಕಾರಿಗಳ ಅಧಿಕಾರಗಳನ್ನು ಹಾಗೂ ಕರ್ತವ್ಯಗಳನ್ನು ಗೊತ್ತುಪಡಿಸುವುದು;

(xvi) ಅದರ ಯಾವುದಾದರೂ ಅಧಿಕಾರವನ್ನು ಕುಲಪತಿಯವರಿಗೋ ಅದರ ಸದಸ್ಯರುಗಳಿಂದ ನಿಯಮಿಸಲ್ಪಟ್ಟಂತಹ ಒಂದು ಸಮಿತಿಗೆಯೋ ವಹಿಸಿಕೊಡುವುದು;

(xvii) ಈ ಅಧಿನಿಯಮಕ್ಕೆ, ಶಾಸನಗಳಿಗೆ ಹಾಗೂ ಅಧ್ಯಾದೇಶಗಳಿಗೆ ಅನುಗುಣವಾಗಿ ನಿಗದಿಪಡಿಸಿದಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸುವುದು.

31. ಶೈಕ್ಷಣಿಕ ಸಮಿತಿಯ ರೂಪೀಕರಣ.—(1) ಶೈಕ್ಷಣಿಕ ಸಮಿತಿಯ ಬೋಧನೆ, ವಿದ್ಯಾಭ್ಯಾಸ, ತರಬೇತಿ, ಸಂಶೋಧನೆ, ಹಾಗೂ ಪರೀಕ್ಷೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದಕ್ಕಾಗಿಯು ಖಾತ್ರಿಪಡಿಸುವ ಹೊಣೆಗಾರಿಕೆಯಿರುವ ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ಅಂಗವಾಗಿರುವುದಾಗಿದೆ ಹಾಗು ಪ್ರತಿ ಎರಡು ಶೈಕ್ಷಣಿಕ ವರ್ಷಗಳಿಗಾಗಿ ಬೋರ್ಡ್ ಓಫ್ ಗವರ್ನರ್ಸ್‌ನಿಂದ ರೂಪೀಕರಿಸಲ್ಪಡತಕ್ಕದ್ದು.

(2) ಶೈಕ್ಷಣಿಕ ಸಮಿತಿಯಲ್ಲಿ ಈ ಕೆಳಗಿನ ಸದಸ್ಯರುಗಳು ಇರತಕ್ಕದ್ದು, ಅದೇನೆಂದರೆ:—

(i) ಕುಲಪತಿ, ಪದನಿಮಿತ್ತ ಅಧ್ಯಕ್ಷ;

(ii) ಉಪ-ಸಹ-ಕುಲಾಧಿಪತಿ;

(iii) ಕುಲಪತಿಯವರ ಶಿಫಾರಸಿನ ಮೇರೆಗೆ ಬೋರ್ಡ್ ಓಫ್ ಗವರ್ನರ್ಸ್ ನಾಮನಿರ್ದೇಶಿತ ಸಂಯೋಜಿಸಲ್ಪಟ್ಟ ಕಾಲೇಜುಗಳ ನಾಲ್ಕು ಪ್ರಾಂಶುಪಾಲರುಗಳು ಅವರಲ್ಲಿ ಒಬ್ಬರು ಸರಕಾರಿ ಕಾಲೇಜುಗಳಿಂದಲೂ, ಒಬ್ಬರು ಸರಕಾರೀ ನಿಯಂತ್ರಿತ ಸ್ವಸಹಾಯ ಕಾಲೇಜುಗಳಿಂದಲೂ, ಒಬ್ಬರು ಅನುದಾನರಹಿತ ಕಾಲೇಜುಗಳಿಂದಲೂ, ಒಬ್ಬರು ಅನುದಾನಿತ ಕಾಲೇಜುಗಳಿಂದಲೂ, ಇರತಕ್ಕದ್ದು;

(iv) ಕುಲಪತಿಯವರ ಶಿಫಾರಸಿನ ಮೇರೆಗೆ ಬೋರ್ಡ್ ಓಫ್ ಗವರ್ನರ್ಸ್ ನಾಮನಿರ್ದೇಶಿತ, ಸಂಯೋಜಿಸಲ್ಪಟ್ಟ ಕಾಲೇಜುಗಳಿಂದಿರುವ ವಿವಿಧ ಎಂಜಿನಿಯರಿಂಗ್ ಶಾಖೆಗಳನ್ನು ಪ್ರತಿನಿಧೀಕರಿಸುವ ಪ್ರೊಫೆಸರ್ ಪದವಿಗಿಂತ ಕಡಿಮೆಯಲ್ಲದ ನಾಲ್ಕು ಅಧ್ಯಾಪಕರುಗಳು, ಅವರಲ್ಲಿ ಪ್ರತಿಯೊಬ್ಬರು ಅನುಕ್ರಮವಾಗಿ ಸರಕಾರಿ ಕಾಲೇಜುಗಳನ್ನೂ, ಸರಕಾರದ ನಿಯಂತ್ರಣದಲ್ಲಿರುವ ಸ್ವಸಹಾಯ ಕಾಲೇಜುಗಳನ್ನೂ ಅನುದಾನ ರಹಿತ ಕಾಲೇಜುಗಳನ್ನೂ ಅನುದಾನಿತ ಕಾಲೇಜುಗಳನ್ನೂ ಪ್ರತಿನಿಧಿಸುವಂತಹದ್ದಾಗಿರತಕ್ಕದ್ದು ಹಾಗೂ ಅವರಲ್ಲಿ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು;

(v) ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಾಮನಿರ್ದೇಶಿಸುವ ಎಂಜಿನಿಯರಿಂಗ್ ಪದವಿಯನ್ನು ಹೊಂದಿರುವ ಎರಡು ಪ್ರಮುಖ ಉದ್ಯಮಗಳು;

(vi) ಸರಕಾರದ ಶಿಫಾರಸಿನ ಮೇರೆಗೆ ಕುಲಾಧಿಪತಿಯವರು ನಾಮನಿರ್ದೇಶಿಸುವಂತಹ ರಾಷ್ಟ್ರೀಯ ಅಂಗೀಕಾರ ಪಡೆದಂತಹ ಸ್ಥಾಪನೆಗಳಲ್ಲಿ ಕೆಲಸ ಮಾಡುತ್ತಿರುವ ಶ್ರೇಷ್ಟರಾದಂತಹ ಇಬ್ಬರು ಅಧ್ಯಾಪಕರುಗಳು;

(vii) ಡೀನ್ (ಶೈಕ್ಷಣಿಕ), ಸಂಚಾಲಕ;

(viii) ಡೀನ್ (ಸಂಶೋಧನೆ).

32. <u>ಶೈಕ್ಷಣಿಕ ಸಮಿತಿಯ ಸಭೆಗಳು</u>.—ಶೈಕ್ಷಣಿಕ ಸಮಿತಿಯ ಕುಲಪತಿಯವರು ನಿಶ್ಚಯಿಸುವ ಪ್ರಕಾರ ಸಾಧ್ಯವಾದಷ್ಟು ಸಲ ಸಭೆ ಸೇರಬೇಕಾಗಿದ್ದು, ಆದರೆ ಕನಿಷ್ಟ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಕುಲಪತಿಯವರು ನಿಶ್ಚಯಿಸುವಂತಹ ದಿನಾಂಕಗಳಂದು ಸಭೆ ಸೇರಿರತಕ್ಕದ್ದಾಗಿದೆ. ಶೈಕ್ಷಣಿಕ ಸಮಿತಿಯ ಸಭೆ ಸೇರಬೇಕೆಂದ ಕೋರಂ ಅದರ ಒಟ್ಟು ಸದಸ್ಯರುಗಳ ಮೂರರಲ್ಲಿ ಒಂದು ಆಗಿರತಕ್ಕದ್ದಾಗಿದೆ. ಕುಲಪತಿಯವರು ನಿರ್ದೇಶಿಸುವ ಪ್ರಕಾರ ಡೀನ್ (ಶೈಕ್ಷಣಿಕ) ಶೈಕ್ಷಣಿಕ ಸಮಿತಿಯ ಸಭೆಗಳನ್ನು ಕರೆಸೇರಿಸತಕ್ಕದ್ದಾಗಿದೆ.

33. ಶೈಕ್ಷಣಿಕ ಸಮಿತಿಯ ಸದಸ್ಯರುಗಳ ಅಧಿಕಾರದ ಕಾಲಾವಧಿ.—ಶೈಕ್ಷಣಿಕ ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ಅಧಿಕೃತ ಕಾಲಾವಧಿಯು ನಿರಂತರವಾಗಿ ಎರಡು ಶೈಕ್ಷಣಿಕ ವರ್ಷಗಳಾಗಿದ್ದು ಹಾಗು ಎರಡನೇ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಪದಾವಧಿಯು ಮುಕ್ತಾಯವಾಗುವುದಾಗಿರುತ್ತದೆ. ಶೈಕ್ಷಣಿಕ ಸಮಿತಿಯ ಇತರ ಸದಸ್ಯರುಗಳ ಅಥಕೃತ ಪದಾವಧಿಯು ವಿಶ್ವವಿದ್ಯಾಲಯದಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ ಅಂತಹ ಅಧಿಕಾರ ಅವರು ವಹಿಸುವಂತಹ ಸ್ಥಾನವು ಅಥಕೃತ ಸ್ಥಾನದೊಂದಿಗೆ ಮುಕ್ತಾಯವಾಗುದಾಗಿದೆ.

34. ಶೈಕ್ಷಣಿಕ ಸಮಿತಿಯ ಅಧಿಕಾರಗಳು, ಹೊಣೆಗಾರಿಕೆಗಳು ಹಾಗೂ ಕರ್ತವ್ಯಗಳು.—ಈ ಅಧಿನಿಯಮದ ಹಾಗೂ ಶಾಸನಗಳ ನಿಬಂಧನೆಗಳಿಗೆ ವಿಧೇಯವಾಗಿ, ಶೈಕ್ಷಣಿಕ ಸಮಿತಿಗೆ ಈ ಕೆಳಗಿನ ಅಧಿಕಾರಗಳು, ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು ಇರುವುದಾಗಿದೆ, ಅದೇನೆಂದರೆ:—

(i) ಎಲ್ಲಾ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿ ಬೋರ್ಡ್ ಓಫ್ ಗವರ್ನರ್ಸ್ ಹಾಗೂ ಕಾರ್ಯನಿರ್ವಾಹಕ ಸಮಿತಿಗೆ ಸಲಹೆ ನೀಡುವುದು;

(ii) ಈ ಅಧಿನಿಯಮದ ಹಾಗೂ ಅದರ ಕೆಳಗೆ ಮಾಡಿರುವ ಶಾಸನಗಳ ಹಾಗೂ ಆರ್ಡಿನನ್ಸುಗಳಿಗನುಗುಣವಾಗಿ ರೆಗ್ಯುಲೇಶನ್‌ಗಳನ್ನು ಮಾಡುವುದು ಅದಕ್ಕೆ ತಿದ್ದುಪಡಿ ತರುವುದು ಮತ್ತು ಅವುಗಳನ್ನು ರದ್ದುಮಾಡುವುದು;

(iii) ಸಂಶೋಧನೆಯ ಹಾಗು ಜ್ಞಾನದ ಅಭಿವೃದ್ಧಿಗಾಗಿ ಮತ್ತು ಪ್ರಚಾರಕ್ಕಾಗಿ ಬೇಕಾದ ನಿರ್ದೇಶಗಳನ್ನು ನೀಡುವುದು;

(iv) ವಿಶ್ವವಿದ್ಯಾಲಯುವು ನಡೆಸುತ್ತಿರುವಂತಹ ಅಥವಾ ಅದಕ್ಕೆ ಸಂಯೋಜಿಸಲ್ಪಟ್ಟಿರುವಂತಹ ಕಾಲೇಜುಗಳ ಹಾಗೂ ಸಂಸ್ಥೆಗಳ ಅಧ್ಯಯನ ಕೋರ್ಸುಗಳನ್ನು ನಿಗದಿಪಡಿಸುವುದು;

(v) ಕಾರ್ಯನಿರ್ವಾಹಕ ಸಮಿತಿಯು ಅಂಗೀಕಾರದೊಂದಿಗೆ ವಿವಿಧ ಅಧ್ಯಯನಕ್ಕಿರುವ ಶಾಖೆಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಗೆ ಹಾಗೂ ಪರೀಕ್ಷೆಗಳಿಗಾಗಿರುವ ಅರ್ಹತೆಯನ್ನು ನಿಗದಿಪಡಿಸುವುದು;

(vi) ಪದವಿಗಳಿಗೆ, ಸ್ನಾತ್ತಕೋತರ ಪದವಿಗಳಿಗೆ, ಡಿಪ್ಲೋಮಗಳಿಗೆ, ಪ್ರಮಾಣ ಪತ್ರಗಳಿಗೆ ಹಾಗೂ ಇತರ ಡಿಸ್ಟಿಂಕ್ಷನ್‌ಗಳಿಗೆ ಸಂಬಂಧಿಸಿದಂತಹ ಪ್ರಸ್ತಾವನೆಗಳನ್ನು ಬೋರ್ಡ್ ಓಫ್ ಗವರ್ನರ್ಸ್‌ಗೆ ಹಾಗೂ ಕಾರ್ಯನಿರ್ವಾಹಕ ಸಮಿತಿಗೆ ನೀಡುವುದು;

(vii) ಇತರ ವಿಶ್ವವಿದ್ಯಾಲಯಗಳ ಯಾವೆಲ್ಲ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಸಮಾನವೆಂದು ಅಂಗೀಕರಿಸುವುದು ಹಾಗು ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಅಂಗೀಕರಿಸುವುದಕ್ಕಾಗಿ ಇತರ ವಿಶ್ವವಿದ್ಯಾಲಯಗಳೊಂದಿಗೆ ಸಮಾಲೋಚನೆ ಮಾಡುವುದು;

(viii) ಆರ್ಡಿನನ್ಸುಗಳ ನಿಬಂಧನೆಗಳಿಗೂ ಹಾಗೂ ಇದಕ್ಕೆ ಸಂಬಂಧಿಸಿದಂತಹ ರಾಜ್ಯ ಸರಕಾರದ ನೀತಿಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಸಂಸ್ಥೆಗಳಿಗೆ, ವಿಭಾಗಗಳಿಗೆ, ಸಂಯೋಜಿಸಲ್ಪಟ್ಟ ಕಾಲೇಜುಗಳಿಗೆ, ಸಂಸ್ಥೆಗಳಿಗೆ ಸ್ವಾಯತ್ತಾ ಪದವಿ ನೀಡುವುದಕ್ಕಾಗಿ ಬೋರ್ಡ್ ಓಫ್ ಗವರ್ನರ್ಸ್‌ಗೆ ಶಿಫಾರಸು ಮಾಡುವುದು;

(ix) ಬೋರ್ಡ್ ಓಫ್ ಗವರ್ನರ್ಸ್ ಅದರ ಕೊನೆಯ ವಾರ್ಷಿಕ ಸಭೆಯಲ್ಲಿ ಶಿಫಾರಸು ಮಾಡಿರುವಂತಹ ಶೈಕ್ಷಣಿಕ ಕಾರ್ಯಕ್ರಮಗಳ ಸಾಧ್ಯತಾ ವರದಿಗಳನ್ನು ಬೋರ್ಡ್ ಓಫ್ ಗವರ್ನರ್ಸ್‌ಗೆ ಸಲ್ಲಿಸುವುದು;

(x) ಈ ಅಧಿನಿಯಮದ ಅಥವಾ ಅದರ ಪ್ರಕಾರ ಮಾಡಿರುವಂತಹ ಶಾಸನಗಳ ಆರ್ಡಿನನ್ಸ್‌ಗಳ ರೆಗ್ಯುಲೇಶನ್‌ಗಳ ಪ್ರಕಾರ ಅದಕ್ಕೆ ನೀಡಬಹುದಾದಂತಹ ಇತರ ಅಧಿಕಾರಗಳನ್ನು ವಿನಿಯೋಗಿಸುವುದು, ಹಾಗೂ ಅಂತಹ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

35. ಸಂಶೋಧನಾ ಮಂಡಳಿಯ ರೂಪೀಕರಣ.—ಈ ಕೆಳಗಿನ ಸದಸ್ಯರುಗಳನ್ನೊಳಗೊಂಡ ಒಂದು ಸಂಶೋಧನಾ ಮಂಡಳಿಯು ಇರತಕ್ಕದ್ದಾಗಿದೆ.

(i) ಕುಲಪತಿ (ಚೇರ್‌ಮೆನ್);

(ii) ಉಪ-ಸಹ-ಕುಲಾಧಿಪತಿ;

(iii) ಉನ್ನತ ಶಿಕ್ಷಣ ಇಲಾಖೆಯ ಜವಾಬ್ದಾರಿ ಇರುವ ಸರಕಾರೀ ಕಾರ್ಯದರ್ಶಿ ಅಥವಾ ಅವರು ಅಧಿಕೃತಗೊಳಿಸುವ ಜಂಟಿ ಕಾರ್ಯದರ್ಶಿಯ ಪದವಿಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(iv) ವೈಸ್ ಚೇರ್‌ಮೆನ್, ಉನ್ನತ ಶಿಕ್ಷಣ ಕೌನ್ಸಿಲ್ ಕೇರಳ ಸರಕಾರ (ಪದನಿಮಿತ್ತ ಸದಸ್ಯ);

(v) ನಿರ್ದೇಶಕ, ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಟೆಕ್ನೋಲಜಿ, ಮದ್ರಾಸ್ (ಪದನಿಮಿತ್ತ ಸದಸ್ಯ);

(vi) ಸರಕಾರೀ ನಾಮನಿರ್ದೇಶಿತ ಕೇರಳದ ಒಂದು ವಿಶ್ವವಿದ್ಯಾಲಯದ ಕುಲಪತಿ (ಪದನಿಮಿತ್ತ ಸದಸ್ಯ);

(vii) ನಿರ್ದೇಶಕ, ವಿಕ್ರಮ್ ಸಾರಾಭಾಯಿ ಸ್ಪೇಸ್ ಸೆಂಟರ್, ತಿರುವನಂತಪುರಂ (ಪದನಿಮಿತ್ತ ಸದಸ್ಯ);

(viii) ನಿರ್ದೇಶಕ, ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಸ್ಪೇಸ್ ಟೆಕ್ನೋಲಜಿ, ತಿರುವನಂತಪುರಂ (ಪದನಿಮಿತ್ತ ಸದಸ್ಯ);

(ix) ನಿರ್ದೇಶಕ, ನೇವಲ್ ಫಿಸಿಕಲ್ ಎಂಡ್ ಓಶ್ಯಾನೋಗ್ರಾಫಿಕ್ ಲ್ಯಾಬೋರೆಟರಿ, ಕೊಚ್ಚಿ (ಪದನಿಮಿತ್ತ ಸದಸ್ಯ);

(x) ನಿರ್ದೇಶಕ, ನ್ಯಾಶನಲ್ ಇನ್‌ಸ್ಟಿಟ್ಯೂಟ್ ಓಫ್ ಟೆಕ್ನೋಲಜಿ, ಕೋಝಿಕೋಡ್ (ಪದನಿಮಿತ್ತ ಸದಸ್ಯ);

(xi) ನಿರ್ದೇಶಕ, ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಸಯನ್ಸ್, ಎಜುಕೇಶನ್ ಎಂಡ್ ರಿಸರ್ಚ್, ತಿರುವನಂತಪುರಂ (ಪದನಿಮಿತ್ತ ಸದಸ್ಯ);

(xii) ವೈಸ್ ಚೇರ್‌ಮೆನ್, ಕೇರಳ ಸ್ಟೇಟ್ ಕೌನ್ಸಿಲ್ ಫೋರ್ ಸಯನ್ಸ್, ಟೆಕ್ನೋಲಜಿ ಎಂಡ್ ಎನ್ವಯರ್ನ್‌ಮೆಂಟ್, ತಿರುವನಂತಪುರಂ (ಪದನಿಮಿತ್ತ ಸದಸ್ಯ);

(xiii) ಕಾರ್ಯದರ್ಶಿ, ಸಯನ್ಸ್ ಎಂಡ್ ಟೆಕ್ನೋಲಜಿ ಡಿಪಾರ್ಟ್‌ಮೆಂಟ್, ಭಾರತ ಸರಕಾರ ಅಥವಾ ಅವರು ನಾಮ ನಿರ್ದೇಶಿಸುವ ವ್ಯಕ್ತಿ (ಪದನಿಮಿತ್ತ ಸದಸ್ಯ);

(xiv) ಮಹಾ ನಿರ್ದೇಶಕ, ಕೌನ್ಸಿಲ್ ಫೋರ್ ಸಯಂಟಿಫಿಕ್ ಎಂಡ್ ಇಂಡಸ್ಟ್ರಿಯಲ್ ರಿಸರ್ಚ್, ನವದೆಹಲ್ಲಿ (ಪದನಿಮಿತ್ತ ಸದಸ್ಯ);

(xv) ಹಣಕಾಸು ಇಲಾಖೆಯ ಹೊಣೆಗಾರಿಕೆ ಇರುವ ಸರಕಾರಿ ಕಾರ್ಯದರ್ಶಿ ಅಥವಾ ಅವರು ಅಧಿಕೃತಗೊಳಿಸುವ ಪದವಿಯಲ್ಲಿ ಜಂಟಿ ಕಾರ್ಯದರ್ಶಿಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(xvi) ತಾಂತ್ರಿಕ ಶಿಕ್ಷಣ ನಿರ್ದೇಶಕ, ಕೇರಳ ಸರಕಾರ (ಪದನಿಮಿತ್ತ ಸದಸ್ಯ);

(xvii) ಡೀನ್ (ಸಂಶೋಧನೆ), (ಸದಸ್ಯ ಕಾರ್ಯದರ್ಶಿ);

(xviii) ಸರಕಾರೀ ನಾಮ ನಿರ್ದೇಶಿತ ಪಿ.ಎಚ್.ಡಿ ಹಾಗೂ ಹತ್ತು ವರ್ಷಗಳ ಬೋಧನಾ ಅನುಭವವಿರುವಂತಹ ಮೂವರು ಅಧ್ಯಾಪಕ ಪ್ರತಿನಿಧಿಗಳು;

(xix) ವಿಶ್ವವಿದ್ಯಾಲಯದ ಅಥವಾ ಸಂಯೋಜಿತ ಕಾಲೇಜುಗಳಲ್ಲಿನ ಸಂಶೋಧನಾ ವಿದ್ಯಾರ್ಥಿಗಳಿಂದ ಸರಕಾರಿ ನಾಮ ನಿರ್ದೇಶಿತ ಮೂವರು ವಿದ್ಯಾರ್ಥಿ ಪ್ರತಿನಿಧಿಗಳು, ಅವರಲ್ಲಿ ಒಬ್ಬರು ವಿದ್ಯಾರ್ಥಿನಿಯಾಗಿರತಕ್ಕದ್ದು.

36. ಸಂಶೋಧನಾ ಮಂಡಳಿಯ ಅಧಿಕಾರಗಳು, ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು.—(1) ಈ ಅಧಿನಿಯಮ ಹಾಗೂ ಶಾಸನಗಳ ಉಪಬಂಧಗಳಿಗೆ ವಿಧೇಯವಾಗಿ, ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ನೆರವು ನೀಡಲು ಹಾಗೂ ಮಾನವ ಕುಲದ ಒಳಿತಿಗಾಗಿ ತಾಂತ್ರಿಕ ಶಿಕ್ಷಣ, ಎಂಜಿನಿಯರಿಂಗ್, ತಂತ್ರಜ್ಞಾನ ಹಾಗೂ ಅನುಬಂಧ ವಿಜ್ಞಾನಗಳ ಪ್ರಧಾನ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ವಿಶ್ವವಿದ್ಯಾಲಯವು ರಾಜ್ಯದಾದ್ಯಂತ ಸಂಶೋಧನೆಯನ್ನು ನಡೆಸತಕ್ಕದ್ದಾಗಿದೆ.

(2) ವಿಶ್ವವಿದ್ಯಾಲಯವು, ಅದರ ಸಂಶೋಧನಾ ಮಂಡಳಿ ಮೂಲಕ ಮುಂದೆ ಹೇಳುವಂತಹ ಅಧಿಕಾರಗಳನ್ನು, ಹೊಣೆಗಾರಿಕೆಗಳನ್ನು ಹಾಗೂ ಕರ್ತವ್ಯಗಳನ್ನು ವಿನಿಯೋಗಿಸಿಕೊಂಡು ರಾಜ್ಯದ ಸಂಶೋಧನಾ ಚಟುವಟಿಕೆಗಳನ್ನು ನಿಯಂತ್ರಿಸುವಂತಹ ಪ್ರಧಾನ ಸಂಸ್ಥೆಯಾಗಿರುವುದು, ಅದೇನೆಂದರೆ:—

(i) ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟ ಕಾಲೇಜುಗಳಲ್ಲಿನ ಸಂಶೋಧನಾ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು;

(ii) ಸಂಶೋಧನೆಯನ್ನು ಪ್ರೋತ್ಸಾಹಿಸಲು ಬೇಕಾದ ಅನುಕೂಲಕರ ವಾತವರಣವನ್ನು ಸೃಷ್ಟಿಸುವುದು;

(iii) ವಿವಿಧ ಸಂಯೋಜಿತ ಕಾಲೇಜುಗಳಲ್ಲಿನ ಸಂಶೋಧಕರಿಗೆ ಸಲಹೆ ನೀಡುವುದು;

(iv) ಕೈಗಾರಿಕಾ ವಲಯದಲ್ಲಿ ತ್ವರಿತ ಅಭಿವದ್ಧಿಗೊಳ್ಳುವ ಸಂಶೋಧನೆ ಹಾಗೂ ಅಭಿವೃದ್ಧಿಯ ಅಗತ್ಯತೆಗಳನ್ನು ಸಾಧಿಸಲು ಶೈಕ್ಷಣಿಕ-ಕೈಗಾರಿಕೆಗಳೊಳಗಿನ ಅನ್ಯೋನ್ಯತೆ ಮಾಡುವ ಮೂಲಕ ಅವುಗಳೊಳಗಿನ ಅಂತರ ಇಲ್ಲದಾಗಿಸುವುದು;

(v) ವಿವಿಧ ರಾಷ್ಟ್ರೀಯ-ಅಂತರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳೊಂದಿಗೆ ಸಂವಹನ ನಡೆಸುವುದು;

(vi) ರಾಜ್ಯದ ಸಂಯೋಜಿತ ಕಾಲೇಜುಗಳಲ್ಲಿನ ಸಂಶೋಧನೆಯ ಗುಣಮಟ್ಟವನ್ನು ರಾಷ್ಟ್ರೀಯ ಮಟ್ಟಕ್ಕೆ ಏರಿಸುವುದು;

(vii) ಇಂಡಿಯನ್ ಸ್ಪೇಸ್ ರಿಸರ್ಚ್ ಓರ್ಗನೈಸೇಶನ್, ಡಿಫೆನ್ಸ್ ರಿಸರ್ಚ್ ಎಂಡ್ ಡೆವಲಪ್‌ಮೆಂಟ್ ಓರ್ಗನೈಸೇಶನ್, ಕೌನ್ಸಿಲ್ ಫೋರ್ ಸಯಂಟಿಫಿಕ್ ಎಂಡ್ ಇಂಡಸ್ಟ್ರಿಯಲ್ ರಿಸರ್ಚ್, ಡಿಪಾರ್ಟ್‌ಮೆಂಟ್ ಓಫ್ ಸಯನ್ಸ್ ಎಂಡ್ ಟೆಕ್ನೋಲಜಿ,

ಆಲ್ ಇಂಡಿಯಾ ಕೌನ್ಸಿಲ್ ಫೋರ್ ಟೆಕ್ನಿಕಲ್ ಎಜುಕೇಶನ್, ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್, ಡಿಪಾರ್ಟ್‌ಮೆಂಟ್ ಓಫ್ ಬಯೋಟೆಕ್ನೋಲಜಿ, ಇನ್‌ಫೋಸಿಸ್ ಇತ್ಯಾದಿ ಏಜನ್ಸಿಗಳು ಸಂಶೋಧನಾ ಚಟುವಟಿಕೆಗಳನ್ನು ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ವಹಿಸಿಕೊಳ್ಳುವುದು;

(viii) ಸಂಶೋಧನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಬಂಡವಾಳ ಹೂಡುವ ಏಜನ್ಸಿಗಳಿಂದ ನಿಧಿಗಳನ್ನು ಹಾಗೂ ಮೂಲ ಸೌಕರ್ಯ ಸಹಾಯವನ್ನು ಪಡೆಯುವುದು;

(ix) ಸಮರ್ಥರಾದ ಸಂಶೋಧಕರನ್ನು ಪತ್ತೆ ಹಚ್ಚುವುದು, ಹಾಗು ಸಂಶೋಧನೆಗೆ ನಿಕ್ಷೇಪವನ್ನು ಗಳಿಸುವುದಕ್ಕಾಗಿ ಅವಶ್ಯಕವಾದ ಬಂಡವಾಳವನ್ನು ನೀಡುವುದು;

(x) ಕೇರಳ ರಾಜ್ಯ ತಂತ್ರಜ್ಞಾನ ಮಹಾಸಭೆಯನ್ನು ಸಂಘಟಿಸುವುದು;

(xi) ವಿಶ್ವವಿದ್ಯಾಲಯವನ್ನು ಕೇಂದ್ರೀಕರಿಸಿರುವ ಒಂದು ರಿಸರ್ಚ್ ಪಾರ್ಕ್ ಸ್ಥಾಪಿಸುವುದು;

(xii) ವಿಶ್ವವಿದ್ಯಾಲಯದ ಕಾಲೇಜುಗಳ ಹಾಗೂ ಸ್ಥಾಪನೆಗಳ ಮೂಲಕ ಸಲಹಾ ಸೇವೆಗಳನ್ನು ನೀಡುವುದು;

(xiii) ಸಂಯೋಜಿಸಲ್ಪಟ್ಟ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೂ ಮತ್ತು ಅಧ್ಯಾಪಕ ವೃಂದಕ್ಕೂ ಅವರ ಹೊಸ ಅಭಿವೃದ್ಧಿ ಆಶಯಗಳನ್ನು ನನಸಾಗಿಸಲು ಪ್ರೋತ್ಸಾಹ ಹಾಗೂ ಬೆಂಬಲವನ್ನು ನೀಡುವುದು;

(xiv) ಎಂಜಿನಿಯರಿಂಗ್ ಸಂಶೋಧನೆಗಳಿಗೆ ಸಂಬಂಧಿಸಿದಂತಹ ನಿಯತಕಾಲಿಕಗಳು, ಬುಲೆಟಿನ್‌ನ್ನು, ಜರ್ನಲನ್ನು ಇತ್ಯಾದಿಗಳನ್ನು ಪ್ರಕಟಿಸುವುದು;

(xv) ವಿವಿಧ ಏಜೆನ್ಸಿಗಳಿಗೆ ಹಾಗೂ ಸಂಘಗಳಿಗೆ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದ ಎಲ್ಲಾ ಕ್ಷೇತ್ರಗಳಲ್ಲೂ, ತಜ್ಞ ಅಭಿಪ್ರಾಯವನ್ನು, ತಜ್ಞ ಸಲಹೆಯನ್ನು, ಪರಿಶೋಧನೆಯನ್ನು, ಪ್ರಮಾಣೀಕರಣವನ್ನು ಮತ್ತು ತಂತ್ರಜ್ಞಾನದ ನೆರವನ್ನು ನೀಡುವುದು.

37. ಇತರ ಸಮಿತಿಗಳು.—ಈ ಅಧಿನಿಯಮದ ಉದ್ದೇಶಗಳನ್ನು ನೇರವೇರಿಸುವುದಕ್ಕಾಗಿ ಅಧ್ಯಯನ ಮಂಡಳಿಗಳು, ಪರೀಕ್ಷಾ ಮಂಡಳಿಗಳು, ಯೋಜನಾ ಸಮಿತಿಗಳು, ವಿದ್ಯಾರ್ಥಿ ಮಂಡಳಿಗಳು ಇತ್ಯಾದಿ ಸಮಿತಿಗಳನ್ನು ನಿಯಮಿಸಲು ಕುಲಪತಿಗೆ ಅಧಿಕಾರ ಇರುವುದಾಗಿದೆ ಹಾಗೂ ಆ ಸಮಿತಿಯಲ್ಲಿ, ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಅನ್ಯಥಾ ವ್ಯವಸ್ಥೆ ಮಾಡಿರದಿದ್ದಲ್ಲಿ, ಪ್ರಾಧಿಕಾರಗಳ ಸದಸ್ಯರನ್ನು ಹಾಗೂ ಅವರಿಗೆ ಉಚಿತವೆಂದು ತೋರುವಂತಹ ಇತರ ಸದಸ್ಯರುಗಳನ್ನು ಸೇರಿಸಬಹುದಾಗಿದೆ.

38. ಪ್ರಾಧಿಕಾರಗಳ ಸದಸ್ಯತ್ವಕ್ಕೆ ಸಂಬಂಧಿಸಿದಂತಹ ಉಪಬಂಧಗಳು.—(1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ್ದಿದ್ದಲ್ಲಿ, ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರದಲ್ಲಿರುವ, ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಸದಸ್ಯರುಗಳ ಯಾವುದಾದರೂ ಸ್ಥಾನದ ಆಕಸ್ಮಿಕ ತೆರವನ್ನು ಆದಷ್ಟು ಬೇಗನೆ, ಆ ವ್ಯಕ್ತಿಯನ್ನು ನಾಮನಿರ್ದೇಶಿಸಿದ ಮಾಡಿದ ವ್ಯಕ್ತಿ ಅಥವಾ ನಿಕಾಯ ನೇಮಿಸತಕ್ಕದ್ದು ಹಾಗೂ ಅಂತಹ ಆಕಸ್ಮಿಕ ತೆರವಿಗೆ ನಾಮ ನಿರ್ದೇಶಿಸಲ್ಪಡುವ ವ್ಯಕ್ತಿಯು ಯಾವ ವ್ಯಕ್ತಿಯ ಸ್ಥಾನದ ತೆರವಿಗೆ ಆತನನ್ನು ನಾಮನಿರ್ದೇಶಿಸಲಾಗಿದೆಯೋ ಅಂತಹ ವ್ಯಕ್ತಿಯ ಸದಸ್ಯನಾಗಿರಬೇಕಾಗಿದ್ದಂತಹ ಕಾಲಾವಧಿಯವರೆಗೆ ಪ್ರಾಧಿಕಾರದ್ದಲ್ಲೋ ನಿಕಾಯದಲ್ಲೋ ಸದಸ್ಯನಾಗಿರುವನು.

(2) ಬೋರ್ಡ್ ಓಫ್ ಗವರ್ನರ್ಸ್, ಯಾವುದೇ ವ್ಯಕ್ತಿಯನ್ನು, ಆತನು ನೈತಿಕ ಪತನಕ್ಕೊಳಪಟ್ಟ ಒಂದು ಅಪರಾಧದಲ್ಲಿ ಶಿಕ್ಷಿಸಲ್ಪಟ್ಟದ್ದಲ್ಲಿ ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ನಿಕಾಯದ ಸದಸ್ಯತ್ವದಿಂದ ವಜಾ ಮಾಡಬಹುದಾಗಿದೆ:

ಆದರೆ, ಅಂತಹ ವ್ಯಕ್ತಿಗೆ ಕಾರಣ ಹೇಳಲು ಒಂದು ಅವಕಾಶವನ್ನು ನೀಡದೆ ವಜಾಮಾಡುವಂತಹ ಯಾವುದೇ ಆದೇಶವನ್ನು ಹೊರಡಿಸುವಂತದ್ದಲ್ಲ.

(3) ವಿಶ್ವವಿದ್ಯಾಲಯದ ಅಥವಾ ಇತರ ನಿಕಾಯದ ಪ್ರತಿನಿಧಿಯಾಗಿ ಬೋರ್ಡ್ ಓಫ್ ಗವರ್ನರ್ಸ್ ಅಥವಾ ಕಾರ್ಯನಿರ್ವಾಹಕ ಸಮಿತಿಯ ಹೊರತಾದ ವಿಶ್ವವಿದ್ಯಾಲಯದ ಯಾವುದಾದರೂ ಅಧಿಕಾರದಲ್ಲಿ ಸದಸ್ಯನಾಗಿರುವ ಯಾವುದೇ ವ್ಯಕ್ತಿ ಆತನು ಯಾವ ನಿಕಾಯದಿಂದ ನಾಮನಿರ್ದೇಶಿಸಲ್ಪಟ್ಟಿರುವನೋ ಆ ನಿಕಾಯದಲ್ಲಿ ಸದಸ್ಯನಾಗಿ ಮುಂದುವರೆಯುವವರೆಗೆ ಮಾತ್ರ ಹಾಗು ಅದರ ನಂತರ ಆತನ ಉತ್ತರಾಧಿಕಾರಿಯು ಯಥಾಪ್ರಕಾರ ನಾಮನಿರ್ದೇಶಿಸಲ್ಪಡುವವರೆಗೆ ಪ್ರಾಧಿಕಾರದ ಅಥವಾ ನಿಕಾಯದ ಪದವಿಯಲ್ಲಿ ಉಳಿಸತಕ್ಕದಾಗಿದೆ.

(4) ಯಾವುದಾದರು ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರಕ್ಕೆ ಯಥಾಪ್ರಕಾರ ನಾಮ ನಿರ್ದೇಶಗೊಂಡಿರುವನೇ ಅಥವಾ ಆತ ಅಂತಹ ಪ್ರಾಧಿಕಾರದಲ್ಲಿ ಒಬ್ಬ ಸದಸ್ಯನಾಗಿರಲು ಅರ್ಹನೇ ಎಂಬುವುದಕ್ಕೆ ಸಂಬಂಧಿಸಿ ಯಾವುದಾದರೂ ವಿವಾದ ಉಂಟಾದ್ದಲ್ಲಿ ಆ ವಿವಾದವನ್ನು ಕುಲಾಧಿಪತಿಗೆ ಒಪ್ಪಿಸತಕ್ಕದ್ದು ಹಾಗೂ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

39. ಮೇಲ್ಮನವಿ ನ್ಯಾಯಾಧೀಕರಣ.—(1) ಈ ಅಧಿನಿಯಮದ ಉದ್ದೇಶಕ್ಕಾಗಿ ಸರಕಾರವು ಒಂದು ಮೇಲ್ಮನವಿ ನ್ಯಾಯಾಧಿಕರಣವನ್ನು ರೂಪೀಕರಿಸತಕ್ಕದ್ದು.

(2) ಈ ಅಧಿನಿಯಮದ ನಿಬಂಧನೆಗಳ ಪ್ರಕಾರ ಕೈಗೊಂಡ ಕ್ರಮಗಳಿಂದಾಗಿ ಸಂಕಟವನುಭವಿಸುವ ಯಾವುದೇ ವ್ಯಕ್ತಿಗೆ ಇದಕ್ಕೆದುರಾಗಿ ಮೇಲ್ಮನವಿ ನ್ಯಾಯಾಧಿಕರಣವನ್ನು ಸಮೀಪಿಸಬಹುದಾಗಿದೆ.

(3) ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸುತಾ ಕುಲಾಧಿಪತಿಯವರು ನಾಮ ನಿರ್ದೇಶಿಸುವ ಜಿಲ್ಲಾ ನ್ಯಾಯಾಧೀಶರ ಪದವಿಗಿಂತ ಕಡಿಮೆಯಲ್ಲದ ಒಬ್ಬ ನ್ಯಾಯಿಕ ಅಧಿಕಾರಿಯವರನ್ನು ಮೇಲ್ಮನವಿ ಪ್ರಾಧಿಕಾರವಾಗಿ ನೇಮಿಸತಕ್ಕದ್ದಾಗಿದೆ.

(4) ಮೇಲ್ಮನವಿ ಪ್ರಾಧಿಕಾರದ ಕಾಲಾವಧಿಯನ್ನು ಅಧಿಕಾರ ವ್ಯಾಪ್ತಿಯನ್ನು, ಕರ್ತವ್ಯಗಳನ್ನು, ಸೇವೆ-ವೇತನ ನಿಬಂಧನೆಗಳನ್ನು ಇತ್ಯಾದಿಗಳನ್ನು ಸರಕಾರದ ಪೂರ್ವಾನುಮತಿಯೊಂದಿಗೆ ಶಾಸನಗಳಿಂದ ನಿರ್ಣಯಿಸತಕ್ಕದ್ದಾಗಿದೆ.

40. <u>ಸಿಂಧುತ್ವದ ಸಂರಕ್ಷಣೆ.</u>—(1) ವಿಶ್ವವಿದ್ಯಾಲಯದಲ್ಲಿನ ಯಾವುದಾದರು ಪ್ರಾಧಿಕಾರದ ಅಥವಾ ನಿಕಾಯದ ಕ್ರಮಗಳ ಹಾಗೂ ಪ್ರಕ್ರಿಯೆಗಳಿಂದಲೋ ಆ ಪ್ರಾಧಿಕಾರದ ನಿಕಾಯದ ರೂಪೀಕರಣದಲ್ಲಿನ ಯಾವುದಾದರೂ ನ್ಯೂನತೆ ಉಂಟಾಗಿದೆಯೆಂಬ ಕಾರಣದಿಂದ ಮಾತ್ರವೋ ಯಾವುದಾದರೂ ತೆರವು ಇರುವುದರಿಂದಲೋ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ ಯಾವುದಾದರೂ ವ್ಯಕ್ತಿಯ ಅಧಿಕಾರ ಕಾಲಾವಧಿಯ ಪ್ರಶ್ನಾರ್ಹವಾಗಿದೆಯೆಂಬ ಕಾರಣದಿಂದಲೋ ಮಾತ್ರ ಅಸಿಂಧುವಾಗತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದನ್ನು ಹೊರತು ಪಡಿಸಿ, ಉತ್ತಮ ವಿಶ್ವಾಸದಿಂದ ವಿಶ್ವವಿದ್ಯಾಲಯವೋ ವಿಶ್ವವಿದ್ಯಾಲಯದ ಯಾವುದಾದರು ಪ್ರಾಧಿಕಾರವೋ ನಿಕಾಯವೋ ಕೈಗೊಂಡಂತಹ ಎಲ್ಲಾ ಕ್ರಮಗಳು ಹಾಗೂ ಹೊರಡಿಸಿದಂತಹ ಆದೇಶಗಳು ಅಂತಿಮವಾಗಿರುವುದು ಹಾಗೂ ಈ ಅಧಿನಿಯಮ ಅಥವಾ ಅದರ ಪ್ರಕಾರ ಮಾಡಿದಂತಹ ಶಾಸನಗಳಿಗೆ ಆರ್ಡಿನನ್ಸ್‌ಗಳಿಗೆ ಮತ್ತು ರೆಗ್ಯುಲೇಶನ್‌ಗಳಿಗನುಗುಣವಾಗಿ ಕೈಗೊಂಡ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸಲ್ಪಡುವಂತಹ ಯಾವುದಕ್ಕೂ ವಿಶ್ವವಿದ್ಯಾಲಯದ ಅಂತಹ ಪ್ರಾಧಿಕಾರದ ಅಥವಾ ನಿಕಾಯದ ವಿರುದ್ದ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಜರುಗಿಸುವಂತಿಲ್ಲ.

(3) ಕುಲಾಧಿಪತಿಯವರ ಪೂರ್ವಾನುಮತಿಯಿಲ್ಲದೆ ಕುಲಪತಿಯವರ ವಿರುದ್ದವಾಗಿ ದಾವೆಯನ್ನು ಹಾಗೂ ಕಾನೂನು ಕ್ರಮ ಅಥವಾ ಇತರ ಯಾವುದೇ ತನಿಖೆಯನ್ನು ನಡೆಸುವಂತಿಲ್ಲ.

(4) ಈ ಅಧಿನಿಯಮದ್ದೋ ಶಾಸನಗಳದ್ದೋ ಆರ್ಡಿನನ್ಸ್‌ಗಳದ್ದೋ ಮತ್ತು ರೆಗ್ಯುಲೇಶನ್‌ಗಳದ್ದೋ ಪ್ರಕಾರ ಕೈಗೊಂಡ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸುವಂತಹ ಯಾವುದಾದರೂ ಕ್ರಮಗಳಿಗೆ ಬೋರ್ಡ್ ಓಫ್ ಗವರ್ನರ್ಸ್‌ನ ಪೂರ್ವಾನುಮತಿ ಇಲ್ಲದೆ ವಿಶ್ವವಿದ್ಯಾಲಯದ ಯಾವುದಾದರೂ ಅಧಿಕಾರಿಯ ಅಥವಾ ನೌಕರನಿಗೆದುರಾಗಿ ಯಾವುದೇ ದಾವೆಯನ್ನು, ಕಾನೂನು ಕ್ರಮವನ್ನು ಅಥವಾ ಇತರ ಕಾನೂನು ಕ್ರಮಗಳು ಸಮರ್ಥನೀಯವಲ್ಲ.

41. ಅಧಿಕಾರಿಗಳು ಹಾಗೂ ನೌಕರರು ಪ್ರತಿಫಲವನ್ನು ಪಡೆಯುವುದರ ಮೇಲೆ ಪ್ರತಿಬಂಧ.—ಶಾಸನಗಳಲ್ಲಿ ಉಪಬಂಧಿಸಬಹುದಾದದ್ದನ್ನು ಹೊರತು ಪಡಿಸಿ, ವಿಶ್ವವಿದ್ಯಾಲಯದ ಯಾವುದೇ ಅಧಿಕಾರಿಯೋ ನೌಕರನೋ ಯಾವುದೇ ಮೂಲದಿಂದಲೂ ಯಾವುದಾದರು ಪ್ರತಿಫಲವನ್ನು ಸ್ವೀಕರಿಸತಕ್ಕದ್ದಲ್ಲ.

## ಅಧ್ಯಾಯ V

## **ಶಾಸನಗಳು, ಆರ್ಡಿನನ್ಸುಗಳು, ರೆಗ್ಯುಲೇಶನ್‌ಗಳು ಹಾಗೂ ಆದೇಶಗಳು**

42. ಶಾಸನಗಳು.—ಈ ಅಧಿನಿಯಮದ ಉಪಬಂಧಕ್ಕೆ ವಿಧೇಯವಾಗಿ, ಈ ಕೆಳಗಿನ ಎಲ್ಲಾ ಅಥವಾ ಯಾವುದಾದರೂ ಉದ್ದೇಶಕ್ಕಾಗಿ ಶಾಸನಗಳಲ್ಲಿ ಉಪಬಂಧಿಸಬಹುದಾಗಿದೆ, ಅದೇನೆಂದರೆ:—

(i) ವಿಶ್ವವಿದ್ಯಾಲಯದ ಅಧಿಕಾರಿಗಳ ಅಧಿಕಾರಗಳು ಹಾಗೂ ಕರ್ತವ್ಯಗಳು;

(ii) ಈ ಅಧಿನಿಯಮದಲ್ಲಿ ಪ್ರತ್ಯೇಕವಾಗಿ ಉಪಬಂಧಿಸದ ವಿಶ್ವವಿದ್ಯಾಲಯ ಪ್ರಾಧಿಕಾರದ ರೂಪೀಕರಣ, ಅಧಿಕಾರಗಳು ಹಾಗೂ ಕರ್ತವ್ಯಗಳು;

(iii) ವಿಶ್ವವಿದ್ಯಾಲಯದ ಬೋರ್ಡ್ ಓಫ್ ಗವರ್ನರ್ಸ್‌ಗೆ, ಕಾರ್ಯನಿರ್ವಾಹಕ ಸಮಿತಿಗೆ, ಶೈಕ್ಷಣಿಕ ಸಮಿತಿಗೆ, ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಕ್ಕೆ ಅಥವಾ ನಿಕಾಯಗಳಿಗೆ ಸದಸ್ಯರುಗಳನ್ನು ನಿಯಮಿಸುವುದಕ್ಕೆ, ಆರಿಸುವುದಕ್ಕೆ ಹಾಗೂ ನಾಮನಿರ್ದೇಶಿಸುವುದಕ್ಕಿರುವ ಪ್ರಕ್ರಿಯೆ, ಈ ಪ್ರಾಧಿಕಾರಿಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟ ಉಪಬಂಧಿಸುವುದು ಅವಶ್ಯ ಅಥವಾ ಅಪೇಕ್ಷಣೀಯವಾಗಬಹುದಾದಂತಹ ಇತರ ಎಲ್ಲಾ ಕಾರ್ಯಗಳು;

(iv) ಗೌರವ ಪದವಿಗಳು, ಬಿರುದುಗಳು, ಡಿಸ್ಟಿಂಕ್ಷನ್‌ಗಳು ಇತ್ಯಾದಿಗಳನ್ನು ನೀಡುವುದು ಹಾಗೂ ಘಟಿಕೋತ್ಸವವನ್ನು ಸಂಘಟಿಸುವುದು;

(v) ವಿಶ್ವವಿದ್ಯಾಲಯದ, ವಿಭಾಗಗಳ ಸಂಸ್ಥೆಗಳ, ಕೋನ್ಸ್‌ಟಿಟ್ಯುವಂಟ್ ಕಾಲೇಜುಗಳ, ಉನ್ನತ ಅಧ್ಯಯನ ಸಂಸ್ಥೆಗಳ, ಸಂಶೋಧನೆ ಅಥವಾ ಉನ್ನತ ಅಧ್ಯಯನಕ್ಕಾಗಿರುವ ಕೇಂದ್ರಗಳ ಹಾಗೂ ಹಾಸ್ಟೆಲುಗಳ ಸ್ಥಾಪನೆ ಹಾಗೂ ನಿರ್ವಹಣೆ;

(vi) ವಿಶ್ವವಿದ್ಯಾಲಯದ ನೌಕರರ ಜ್ಯೇಷ್ಠತೆ ಹಾಗೂ ಸೇವಾ ನಿಬಂದನೆಗಳನ್ನು ನಿಯಂತ್ರಿಸುವ ಸೂತ್ರಗಳು;

(vii) ವಿಶ್ವವಿದ್ಯಾಲಯದ ಪ್ರಾಧಿಕಾರಗಳಲ್ಲಿನ, ನಿಕಾಯಗಳಲ್ಲಿನ ಅಥವಾ ಸಮಿತಿಗಳಲ್ಲಿನ ಸದಸ್ಯರುಗಳನ್ನು ಅನರ್ಹನನ್ನಾಗಿಸುವುದಕ್ಕೆ ಬೇಕಾದಂತಹ ನಿಬಂಧನೆ;

(viii) ಕಾಲೇಜುಗಳಿಗೆ, ಕಾಲೇಜಿನ ಅಥವಾ ವಿಶ್ವವಿದ್ಯಾಲಯದ ವಿಭಾಗಗಳಿಗೆ ಅಥವಾ ಅದರ ಪ್ರಯೋಗ ಶಾಲೆಗಳಿಗೆ, ಕೇಂದ್ರಗಳಿಗೆ ಸ್ವಾಯತ್ತತ ಅಧಿಕಾರವನ್ನು ನೀಡುವುದು ಹಾಗೂ ಸಂಸ್ಥೆಗಳಿಗೆ ಅಂಗೀಕಾರ ನೀಡುವುದು;

(ix) ವಿಶ್ವವಿದ್ಯಾಲಯದಲ್ಲಿನ ಅಥವಾ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ನೀಡಲ್ಪಟ್ಟಿರುವ ಖಾಸಗಿ ಕಾಲೇಜುಗಳಲ್ಲಿನ ಅಥವಾ ವಿಶ್ವವಿದ್ಯಾಲಯದ ಖಾಸಗಿ ಕಾಲೇಜುಗಳಲ್ಲಿನ ಅಥವಾ ವಿಶ್ವವಿದ್ಯಾಲಯದ ಕೋನ್ಸ್‌ಟಿಟ್ಯುವಂಟ್ ಕಾಲೇಜುಗಳಲ್ಲಿನ ಅಧ್ಯಾಪಕರ, ಅಧಿಕಾರಿಗಳ ಹಾಗೂ ಇತರ ನೌಕರರ, ನಿಯತಕಾಲಿಕ ಮೌಲ್ಯ ನಿರ್ಣಯ ಒಳಗೊಂಡು ರಾಜ್ಯ ಸರಕಾರವು ಅಂಗೀಕರಿಸಿದಂತಹ ಅರ್ಹತೆಗಳು, ನೇಮಕಾತಿ, ಕೆಲಸದ ಭಾರ ಸದಾಚಾರ ಸಂಹಿತೆ, ಪದಾವಧಿಗಳು ಸೇವಾನಿಬಂಧನೆಗಳು ಹಾಗೂ ಕರ್ತವ್ಯಗಳು, ಪಿಂಚಣಿ, ಗ್ರಾಚುವಿಟಿ, ಭವಿಷ್ಯ ನಿಧಿ ಇತ್ಯಾದಿಗಳ ನಿಬಂಧನೆಗಳು, ನೇಮಕಾತಿಯ ಪ್ರಕ್ರಿಯೆಗಳು, ಅವರ ಸೇವಾ ಮುಕ್ತಾಯ ಪ್ರಕ್ರಿಯೆಗಳು ಇತ್ಯಾದಿಗಳು ಅನ್ವಯಿಸುವ ಎಲ್ಲಾ ಕಡೆಗಳಲ್ಲಿ;

(x) ವಿಶ್ವವಿದ್ಯಾಲಯದ ಉದ್ದೇಶ ಗುರಿಗಳನ್ನು ನರವೇರಿಸುವುದಕ್ಕಾಗಿ ವಿಶ್ವವಿದ್ಯಾಲಯದ ನಿಧಿಗಳನ್ನು ಬಳಸುವುದು;

(xi) ಕಾಲೇಜುಗಳನ್ನು ಸಂಯೋಜನೆ ಮಾಡುವುದಕ್ಕಾಗಿಯೋ ಕಾಲೇಜುಗಳ ಸಂಯೋಜನೆಯನ್ನು ಹಿಂಪಡೆಯುವುದಕ್ಕಾಗಿಯೋ ಬೇಕಾದ ಷರತ್ತುಗಳು ಹಾಗೂ ಪ್ರಕ್ರಿಯೆ;

(xii) ವ್ಯಕ್ತಿಗಳಿಂದಲೋ, ಸಂಘಗಳಿಂದಲೋ, ಟ್ರಸ್ಟ್‌ಗಳನ್ನು, ಮರಣಾಶಾಸನಗಳನ್ನು, ದೇಣಿಗೆಗಳನ್ನು, ದತ್ತಿಗಳನ್ನು, ಹಾಗು ಅನುದಾನಗಳನ್ನು ಇತ್ಯಾದಿಗಳನ್ನು ಸ್ವೀಕರಿಸುವುದು ಹಾಗೂ ಅದನ್ನು ನಿರ್ವಹಿಸುವುದು;

(xiii) ಸಂವಿಧಾನದ ಉಪಬಂಧಕ್ಕನುಗುಣವಾಗಿ ಹಾಗೂ ರಾಜ್ಯ ಸರಕಾರದ ನೀತಿಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಾಮಾಜಿಕ ಶೈಕ್ಷಣಿಕವಾಗಿ ಹಿಂದುಳಿದಂತಹ ಜನರಿಗಾಗಿ ವಿಶ್ವವಿದ್ಯಾಲಯದ ಹಾಗೂ ಸಂಯೋಜಿತ ಕಾಲೇಜುಗಳ ಅಧ್ಯಾಪಕರ, ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿಗೆ ಬೇಕಾದಂತಹ ಸಾಕಷ್ಟು ಸಂಖ್ಯೆಯ ಹುದ್ದೆಗಳನ್ನು ಮೀಸಲಿಡುವುದಕ್ಕಿರುವ ನಿಬಂಧನೆ;

(xiv) ಸರಕಾರವು ಯಾವುದೇ ರೀತಿಯಲ್ಲಿ ಸಹಾಯವನ್ನು ನೀಡದ ಖಾಸಗಿ ಕಾಲೇಜುಗಳನ್ನು ಹೊರತಾದ ವಿಶ್ವವಿದ್ಯಾಲಯದ ಅಥವಾ ಸಂಯೋಜಿತ ಕಾಲೇಜುಗಳ ಅಂಗೀಕೃತ ಸಂಸ್ಥೆಗಳ ಅಥವಾ ರಾಜ್ಯ ಸರಕಾರವೋ ಕೇಂದ್ರ ಸರಕಾರವೋ ಅಥವಾ ಸ್ಥಳೀಯಾಡಳಿತ ಸಂಸ್ಥೆಯು ನೋಡಿಕೊಳ್ಳುತ್ತಿರುವಂತಹ ಅಥವಾ ನಡೆಸುತ್ತಿರುವಂತಹ ಕಾಲೇಜುಗಳಲ್ಲಿನ ಅಥವಾ ಸಂಸ್ಥೆಗಳಲ್ಲಿನ ಅಧ್ಯಾಪಕರು ಅಧಿಕಾರಿಗಳು ಮತ್ತು ಇತರ ನೌಕರರು ಎಂಬಿವರ ವಿರುದ್ಧವಾದ ಶಿಸ್ತುಕ್ರಮ;

(xv) ರಾಜ್ಯ ಸರಕಾರದ ಅಂಗೀಕಾರಕ್ಕೆ ವಿಧೇಯವಾಗಿ, ಸಾರ್ವಜನಿಕ ಹಿತಾಸಕ್ತಿಯಿಂದ ಒಂದು ಕಾಲೇಜಿನ ಅಥವಾ ಸಂಸ್ಥೆಯ ನಿರ್ವಹಣೆಯನ್ನು ವಿಶ್ವವಿದ್ಯಾಲಯವು ವಹಿಸಿಕೊಳ್ಳುವುದು ಅಥವಾ ಹಸ್ತಾಂತರಿಸುವುದು ಹಾಗೂ ಅಂತಹ ವಹಿಸಿಕೊಳ್ಳುವಿಕೆ ಹಾಗೂ ಹಸ್ತಾಂತರಕ್ಕೆ ಬೇಕಾದ ನಿಬಂಧನೆಗಳೂ;

(xvi) ಹಾಸ್ಟೆಲುಗಳ ಸ್ಥಾಪನೆ ಹಾಗೂ ನಿರ್ವಹಣೆ;

(xvii) ಈ ಅಧಿನಿಯಮದಲ್ಲಿ ಅನ್ಯಥಾ ಹೇಳಿರದಿದ್ದಲ್ಲಿ ಯಾವುದೇ ಪ್ರಾಧಿಕಾರದಲ್ಲಿರುವ ಸದಸ್ಯರ ತೆರವುಗಳನ್ನು ತುಂಬುವ ವಿಧಾನ;

(xviii) ಕುಲಪತಿಯವರ ಪ್ರತಿಫಲ ಹಾಗೂ ಸೇವಾ ನಿಬಂಧನೆಗಳು;

(xix) ಶಾಸನಗಳಿಂದ ನಿಗದಿಪಡಿಸಬಹುದಾದ ಅಥವಾ ಈ ಅಧಿನಿಯಮದ ಉಪಬಂಧಕ್ಕೆ ಪ್ರಾಬಲ್ಯ ನೀಡಲು ಅಗತ್ಯವಾದ ಯಾವುದೇ ಸಂಗತಿಗೆ.

43. ಶಾಸನಗಳನ್ನು ಮಾಡುವುದಕ್ಕಿರುವ ಪ್ರಕ್ರಿಯೆ.—(1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದ ಪ್ರಥಮ ಶಾಸನವನ್ನು ಸರಕಾರವು ಮಾಡತಕ್ಕದ್ದಾಗಿದೆ.

(2) ಬೋರ್ಡ್ ಓಫ್ ಗವರ್ನರ್ಸ್‌ಗೆ ಆಯಾಯ ಕಾಲದಲ್ಲಿ ಹೊಸತಾದ ಅಥವಾ ಹೆಚ್ಚು ಶಾಸನಗಳನ್ನು ಮಾಡಬಹುದಾಗಿದ್ದು, ಹಾಗೂ (1)ನೇ ಉಪ-ವಿಭಾಗದಲ್ಲಿ ಹೇಳಿರುವಂತಹ ಶಾಸನಗಳನ್ನು ತಿದ್ದುಪಡಿ ಮಾಡುವುದೋ ಅಥವಾ ರದ್ದು ಮಾಡುವುದೋ ಮಾಡಬಹುದಾಗಿದೆ.

(3) ಕಾರ್ಯ ನಿರ್ವಾಹಕ ಸಮಿತಿಯ ಶಿಫಾರಸಿನ ಮೇರೆಗೆ ಬೋರ್ಡ್ ಓಫ್ ಗವರ್ನರ್ಸ್ ಈ ಕೆಳಗಿನ ಉಪಬಂಧಿಸಿದಂತೆ ಶಾಸನಗಳನ್ನು ಮಾಡುವುದೋ ತಿದ್ದುಪಡಿ ಮಾಡುವುದೋ ಅಥವಾ ರದ್ದುಪಡಿಸುವುದೋ ಮಾಡಬಹುದಾಗಿದೆ,—

(i) ಬೋರ್ಡ್ ಓಫ್ ಗವರ್ನರ್ಸ್‌ನ ಯಾವುದಾದರೂ ಒಬ್ಬ ಸದಸ್ಯನು ಮಂಡಿಸಿದ ಅಥವಾ ಕುಲಪತಿಯವರು ಪ್ರಸ್ತಾಪಿಸಿದಂತಹ ಒಂದು ಶಾಸನದ ಕರಡನ್ನು, ಬೋರ್ಡ್ ಓಫ್ ಗವರ್ನರ್ಸ್ ಪರಿಗಣನೆಗೆ ತೆಗೆಯಬಹುದಾಗಿದೆ;

(ii) ಬೋರ್ಡ್ ಓಫ್ ಗವರ್ನರ್ಸ್‌ಗೆ ಅವಶ್ಯಕವೆಂದು ತೋರಿದ್ದಲ್ಲಿ ತನ್ನ ಮುಂದಿರುವ ಯಾವುದೇ ಕರಡು ಶಾಸನವನ್ನು ಪರಿಗಣಿಸುವುದಕ್ಕೆ ಸಂಬಂಧಿಸಿ ವಿಶ್ವವಿದ್ಯಾಲಯದ ಯಾವುದಾದರೂ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಪಡೆಯಬಹುದಾಗಿದೆ:

ಆದರೆ ಅಂತಹ ಯಾವುದೇ ಕರಡು ಶಾಸನವು ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದುದಾದಲ್ಲಿ ಅದನ್ನು ಪರಿಗಣಿಸುವ ಮೊದಲು ಶೈಕ್ಷಣಿಕ ಸಮಿತಿಯ ಅಭಿಪ್ರಾಯವನ್ನು ಕೂಡ ಬೋರ್ಡ್ ಓಫ್ ಗವರ್ನರ್ಸ್ ಪಡೆದಿರತಕ್ಕದ್ದಾಗಿದೆ:

(iii) ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರದ ಅಂತಸ್ತನ್ನೋ ಅಧಿಕಾರಗಳನ್ನೋ ಅಥವಾ ರೂಪೀಕರಣ ಭಾಧಿಸುವಂತಹ ಒಂದು ಶಾಸನದ ಕರಡನ್ನೋ, ಒಂದು ಶಾಸನದ ತಿದ್ದುಪಡಿಯನ್ನೋ ಅಂತಹ ಪ್ರಾಧಿಕಾರಕ್ಕೆ ಅಂತಹ ಪ್ರಸ್ತಾವನೆಯ ಬಗ್ಗೆ ಅಭಿಪ್ರಾಯವನ್ನು ತಿಳಿಸಲು ಅವಕಾಶ ನೀಡುವವರೆಗೆ ಬೋರ್ಡ್ ಓಫ್ ಗವರ್ನರ್ಸ್ ಆ ಕರಡನ್ನು ಪ್ರಸ್ತಾಪಿಸತಕ್ಕದ್ದಲ್ಲ ಹಾಗೂ ಹಾಗೇ ದಾಖಲಿಸುವಂತಹ ಯಾವುದೇ ಅಭಿಪ್ರಾಯವು ಲಿಖಿತವಾಗಿರತಕ್ಕದ್ದು ಹಾಗೂ ಬೋರ್ಡ್ ಓಫ್ ಗವರ್ನರ್ಸ್ ಅದನ್ನು ಪರಿಗಣಿಸತಕ್ಕದ್ದಾಗಿದೆ.

(iv) ಖಾಸಗಿ ಕಾಲೇಜುಗಳ ಸಂಯೋಜನೆಗಾಗಿರುವ ಷರತ್ತುಗಳನ್ನೋ ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನೋ ಮಾಡಲ್ಪಡುವಂತಹ ಯಾವುದೇ ಒಂದು ಶಾಸನವನ್ನು ಸರಕಾರದ ಪೂರ್ವಾನುಮತಿಯಿಲ್ಲದೆ ಬೋರ್ಡ್ ಓಫ್ ಗವರ್ನರ್ಸ್ ಮಂಜೂರು ಮಾಡತಕ್ಕದ್ದಲ್ಲ;

(v) ಬೋರ್ಡ್ ಓಫ್ ಗವರ್ನರ್ಸ್ ಮಂಜೂರು ಮಾಡುವಂತಹ ಪ್ರತಿಯೊಂದು ಶಾಸನವನ್ನು ಕುಲಾಧಿಪತಿಯವರಿಗೆ ಸಮರ್ಪಿಸತಕ್ಕದ್ದು ಹಾಗೂ ಅವರು ಅದಕ್ಕೆ ಅನುಮತಿಯನ್ನು ನೀಡುವುದೋ ನೀಡದಿರುವುದೋ ಅಥವಾ ಪುನರ್ ಪರಿಶೀಲನೆಗಾಗಿ ಅದನ್ನು ಬೋರ್ಡ್ ಓಫ್ ಗವರ್ನರ್ಸ್‌ಗೆ ಹಿಂತಿರುಗಿಸುವುದೋ ಮಾಡಬಹುದಾಗಿದೆ;

(vi) ಬೋರ್ಡ್ ಓಫ್ ಗವರ್ನರ್ಸ್ ಮಂಜೂರು ಮಾಡಿದಂತಹ ಯಾವುದೇ ಶಾಸನಕ್ಕೆ ಕುಲಾಧಿಪತಿಯವರು ಅನುಮತಿಯನ್ನು ನೀಡುವವರೆಗೆ ಸಿಂಧುವಾಗಿರುವುದಿಲ್ಲ ಅಥವಾ ಅದಕ್ಕೆ ಪ್ರಾಬಲ್ಯವಿರುವುದಿಲ್ಲ.

44. ಆರ್ಡಿನನ್ಸುಗಳು.—ಈ ಅಧಿನಿಯಮದ ಪ್ರಕಾರ ಅಥವಾ ಅದರ ಕೆಳಗೆ ನಿಗದಿಪಡಿಸಿರುವ ಉಪಬಂಧಗಳಿಗೆ ವಿಧೇಯವಾಗಿ, ಕಾರ್ಯನಿರ್ವಾಹಕ ಸಮಿತಿಗೆ ಈ ಕೆಳಗಿನ ಎಲ್ಲಾ ಅಥವಾ ಯಾವುದೇ ಸಂಗತಿಗಳಿಗಾಗಿ ಆರ್ಡಿನನ್ಸುಗಳನ್ನು ಮಾಡಬಹುದಾಗಿದೆ, ಅದೇನೇಂದರೆ:—

(i) ಅಧ್ಯಯನ ಕೋರ್ಸುಗಳಿಗೂ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೂ ವಿದ್ಯಾರ್ಥಿಗಳ ಪ್ರವೇಶದ ಅರ್ಹತೆಗೆ ಪದವಿ, ಹಾಗು ಸ್ನಾತಕೋತ್ತರ ಪದವಿ, ಡಿಪ್ಲೋಮ, ಪ್ರಮಾಣಪತ್ರ ಮತ್ತು ಇತರ ಶೈಕ್ಷಣಿಕ ಬಿರುದುಗಳು ಇತ್ಯಾದಿಯನ್ನು ನೀಡುವುದಕ್ಕಿರುವ ಅರ್ಹತೆ ಹಾಗೂ ಷರತ್ತುಗಳ ಪ್ರಕಾರವೆಂದು;

(ii) ವಿಶ್ವವಿದ್ಯಾಲಯದಲ್ಲಿನ ಅಂತಹ ಕೋರ್ಸುಗಳಿಗೆ ಸೇರುವುದಕ್ಕಾಗಿ ವಿದ್ಯಾರ್ಥಿಗಳ ಹೆಸರು ದಾಖಲಿಸುವುದಕ್ಕಾಗಿ ಪದವಿಗಳು, ಸ್ನಾತಕೋತರ ಪದವಿಗಳು, ಡಿಪ್ಲೋಮಗಳು, ಪ್ರಮಾಣಪತ್ರಗಳು, ಮತ್ತು ಇತರ ಶೈಕ್ಷಣಿಕ ಬಿರುದುಗಳು ಇತ್ಯಾದಿಗಳಿಗೆ ಬೇಕಾಗಿರುವ ಪರೀಕ್ಷೆಗಳಿಗಾಗಿ ಪ್ರವೇಶಕ್ಕೂ ಪದವೀಧರರನ್ನು ನೋಂದಣಿ ಮಾಡುವುದಕ್ಕೆ ಹೊರಿಸಬೇಕಾದಂತಹ ಶುಲ್ಕಕ್ಕೆ ಹಾಗೂ ಹೊರಿಸಬೇಕಾದಂತಹ ಇನ್ನಿತರ ರೀತಿಯ ಶುಲ್ಕಕ್ಕೆ;

(iii) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ನಡತೆ, ಶಿಸ್ತು ಇತ್ಯಾದಿಗಳ ಷರತ್ತುಗಳಿಗೆ ಹಾಗೂ ಈ ಕೆಳಗಿನ ಶಿಸ್ತು ಒಳಗೊಂಡ ಉಲ್ಲಂಘನೆಗಾಗಿಯೋ ದುರ್ನಡತೆಗಾಗಿಯೋ ಅವರ ವಿರುದ್ದ ಕೈಗೊಳ್ಳಬೇಕಾದಂತಹ ಕ್ರಮಗಳಿಗೆ.—

(ಎ) ಒಂದು ಪರೀಕ್ಷೆಯಲ್ಲಿ ಕಾನೂನು ಬಾಹಿರವಾದಂತಹ ಮಾರ್ಗಗಳನ್ನು ಅನುಸರಿಸುವುದೋ ಅಥವಾ ಅದಕ್ಕೆ ಪ್ರೇರಣೆಯನ್ನು ನೀಡುವುದೋ;

(ಬಿ) ಒಂದು ಪರೀಕ್ಷೆಯ ಜವಾಬ್ದಾರಿಯಿರುವ ಅಧಿಕಾರಿಯೋ, ವಿಶ್ವವಿದ್ಯಾಲಯದ ಯಾವುದಾದರೂ ಅಧಿಕಾರಿಯೋ, ಪ್ರಾಧಿಕಾರವೋ ನಡೆಸುತ್ತಿರುವ ಯಾವುದಾದರೂ ಅಧಿಕೃತವಾದ ತನಿಖೆಯಲ್ಲಿ ಹಾಜರಾಗಲು ಅಥವಾ ಪುರಾವೆಯನ್ನು ನೀಡಲು ಅಸಮ್ಮತಿಸುವುದು; ಅಥವಾ

(ಸಿ) ವಿಶ್ವವಿದ್ಯಾಲಯದ ಒಳಗೆ ಅಥವಾ ಹೊರಗೆ ಅಕ್ರಮವಾಗಿಯೋ ಅಥವಾ ಬೇರೆ ರೀತಿಯಲ್ಲಿ ಆಕ್ಷೇಪಾರ್ಹವಾದ ತರದಲ್ಲಿನ ನಡತೆ;

(iv) ಪರೀಕ್ಷಕರನ್ನು ಗೊತ್ತುಮಾಡುವ ಹಾಗೂ ಅವರ ಕರ್ತವ್ಯಗಳನ್ನು ನಿಯಂತ್ರಣೆಯ ವಿಧಾನಕ್ಕೆ;

(v) ಪರೀಕ್ಷೆಗಳ ಹಾಗೂ ಇತರ ಟೆಸ್ಟ್‌ಗಳ ನಡೆಸುವಿಕೆಗೆ ಮತ್ತು ಪರೀಕ್ಷಕರು ವಿದ್ಯಾರ್ಥಿಗಳನ್ನು ಮೌಲ್ಯನಿರ್ಣಯಿಸುವ ಹಾಗೂ ಪರಿಶೋಧಿಸುವ ರೀತಿ;

(vi) ಅಧ್ಯಾಪಕರ ವರ್ಗೀಕರಣಕ್ಕೆ, ವಿವಿಧ ವಿಭಾಗಗಳ ನೌಕರರ ಸಂಖ್ಯಾಬಲಕ್ಕೆ, ವಿಶ್ವವಿದ್ಯಾಲಯದ ವಿಭಾಗಗಳಲ್ಲಿನ ಹಾಗೂ ಸಂಯೋಜಿಸಲ್ಪಟ್ಟ ಕಾಲೇಜುಗಳಲ್ಲಿನ ಅಧ್ಯಾಪಕರ ಹಾಗೂ ಇತರ ನೌಕರರ ಕೆಲಸ ಭಾರಕ್ಕೆ;

(vii) ಸಂಯೋಜಿಸಲ್ಪಟ್ಟ ಕಾಲೇಜುಗಳ, ಸಂಸ್ಥೆಗಳ ಹಾಗೂ ಹಾಸ್ಟೆಲುಗಳ ಪರಿಶೋಧನೆಗೆ;

(viii) ವಿಶ್ವವಿದ್ಯಾಲಯವೋ ವಿಶ್ವವಿದ್ಯಾಲಯದ ಪರವಾಗಿಯೋ ಕರಾರುಗಳಿಗೆ ಅಥವಾ ಒಪ್ಪಂದಗಳಿಗೆ ಸಹಿ ಹಾಕುವ ರೀತಿಗೆ;

(ix) ಅವಶ್ಯಕತೆಯಿದ್ದಲ್ಲಿ ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿ ಸಂಯೋಜಿತ ಕಾಲೇಜುಗಳು ಹಾಗೂ ಸಂಸ್ಥೆಗಳು ಪಾಲಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ನಿಯಮಗಳಿಗೆ;

(x) ಈ ಅಧಿನಿಯಮದ್ದೋ ಅಥವಾ ಶಾಸನದ್ದೋ ಅದರ ಅಧೀನದಲ್ಲಿಯೋ ಆರ್ಡಿನನ್ಸ್‌ಗಳ ಮೂಲಕ ಉಪಬಂಧಿಸಬೇಕಾದಂತಹ ಅಥವಾ ಮಾಡಬೇಕಾದಂತಹ ಇನ್ನಿತರ ಎಲ್ಲಾ ಸಂಗತಿಗಳಿಗೆ; ಅದಲ್ಲದೆ.

(xi) ಸಾಮಾನ್ಯವಾಗಿ, ಬೋರ್ಡ್ ಓಫ್ ಗವರ್ನರ್ಸ್‌ನ ಅಭಿಪ್ರಾಯದಲ್ಲಿ ಈ ಅಧಿನಿಯಮದ ಅಥವಾ ಶಾಸನಗಳ ಪ್ರಕಾರ ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರಕ್ಕೆ ನಿಹಿತಗೊಳಿಸಿರುವಂತಹ ಅಧಿಕಾರಗಳನ್ನು ವಿನಿಯೋಗಿಸುವುದಕ್ಕಾಗಿಯೋ ನೀಡಿರುವಂತಹ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೋ ಅವಶ್ಯವಾಗಿರುವಂತಹ ಎಲ್ಲಾ ಸಂಗತಿಗಳಿಗೆ.

45. ಆರ್ಡಿನನ್ಸ್‌ಗಳನ್ನು ರಚಿಸುವುದಕ್ಕಿರುವ ಪ್ರಕ್ರಿಯೆ.—ಈ ಕೆಳಗೆ ಉಪಬಂಧಿಸಿದಂತೆ ಕಾರ್ಯನಿರ್ವಾಹಕ ಸಮಿತಿಯು ಆರ್ಡಿನನ್ಸ್‌ಗಳನ್ನು ಮಾಡುವುದೋ, ತಿದ್ದುಪಡಿ ಮಾಡುವುದೋ ರದ್ದುಪಡಿಸುವುದೋ ಮಾಡಬಹುದಾಗಿದೆ.

(i) 44ನೇ ವಿಭಾಗದಲ್ಲಿ ಉಲ್ಲೇಖಿಸಲ್ಪಟ್ಟಿರುವಂತಹ ವಿಷಯಗಳ ಕುರಿತಾಗಿ ಅಥವಾ ವಿಶ್ವವಿದ್ಯಾಲಯದಲ್ಲಿನ ಅಧ್ಯಾಪನದ ಗುಣಮಟ್ಟವನ್ನು ಕಾಯ್ದುಕೊಳ್ಳುವ ಬಗ್ಗೆಯೋ ಪರೀಕ್ಷೆಗಳಿಗೆ ಸಂಬಂಧಿಸಿದ ಮತ್ಯಾವುದಾದರೂ ಸಂಗತಿಗಾಗಿಯೋ ಯಾವುದೇ ಆರ್ಡಿನನ್ಸಿನ ಕರಡನ್ನು ಶೈಕ್ಷಣಿಕ ಸಮಿತಿಯು ಪರಿಗಣಿಸದಿದ್ದಲ್ಲಿ ಕಾರ್ಯನಿರ್ವಾಹಕ ಸಮಿತಿಯು ರಚಿಸತಕ್ಕದ್ದಲ್ಲ;

(ii) ಮೇಲೆ ಪ್ರಸ್ತಾಪಿಸಿದ (i)ನೇ ಖಂಡದ ಪ್ರಕಾರ ಶೈಕ್ಷಣಿಕ ಸಮಿತಿಯು ಮಂಡಿಸಿದಂತಹ ಯಾವುದಾದರೂ ಕರಡನ್ನು ತಿದ್ದುಪಡಿ ಮಾಡಲು ಕಾರ್ಯ ನಿರ್ವಾಹಕ ಸಮಿತಿಗೆ ಅಧಿಕಾರವಿರುವುದಿಲ್ಲ; ಆದರೆ, ಕಾರ್ಯನಿರ್ವಾಕ ಸಮಿತಿಯು ಸೂಚಿಸಬಹುದಾದಂತಹ ಯಾವುದಾದರೂ ತಿದ್ದುಪಡಿಯೊಂದಿಗೆ ಅದನ್ನು ಭಾಗಿಕ ಅಥವಾ ಸಂಪೂರ್ಣ ಮರು ಪರಿಶಿಲನೆಗಾಗಿ ಮರಳಿ ಶೈಕ್ಷಣಿಕ ಸಮಿತಿಗೆ ಹಿಂತಿರುಗಿಸಬಹುದಾಗಿದೆ;

(iii) ಕಾರ್ಯ ನಿರ್ವಾಹಕ ಸಮಿತಿಯು ಮಾಡಿರುವಂತಹ ಎಲ್ಲಾ ಆರ್ಡಿನನ್ಸುಗಳಿಗೂ ಅದು ಪ್ರಸ್ತಾಪಿಸುವಂತಹ ದಿನಾಂಕದಿಂದ ಪ್ರಾಬಲ್ಯವಿರುವುದಾಗಿದೆ. ಆದರೆ ಹಾಗೆ ಮಾಡಿದಂತಹ ಪ್ರತಿಯೊಂದು ಆರ್ಡಿನನ್ಸನ್ನು ಬೋರ್ಡಿನ ಮುಂದಿನ ಸಭೆಯಲ್ಲಿಯೇ ಬೋರ್ಡ್ ಓಫ್ ಗವರ್ನರ್ಸ್ ಸಲ್ಲಿಸತಕ್ಕದ್ದಾಗಿದೆ. ಆರ್ಡಿನನ್ಸ್ ಲಭಿಸಿ ನಾಲ್ಕು ವಾರದೊಳಗೆ ಅದರ ಪ್ರಾಬಲ್ಯವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲು ಕಾರ್ಯನಿರ್ವಾಹಕ ಸಮಿತಿಯನ್ನು ಕೋರುವ ಅಧಿಕಾರವು ಕುಲಾಧಿಪತಿಯವರಿಗೆ ಇರುವುದಾಗಿದೆ ಹಾಗು ಅವರು ಆದಷ್ಟು ಬೇಗನೆ ಅದರ ವಿರುದ್ಧ ಆಕ್ಷೇಪವನ್ನು ಕಾರ್ಯನಿರ್ವಾಹಕ ಸಮಿತಿಗೆ ತಿಳಿಸತಕ್ಕದ್ದಾಗಿದೆ. ಅವರಿಗೆ ಕಾರ್ಯನಿರ್ವಾಹಕ ಸಮಿತಿಯ ಅಭಿಪ್ರಾಯವು ಲಭಿಸಿದ ನಂತರ, ಆರ್ಡಿನನ್ಸುಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ ಹೊರಡಿಸಿದಂತಹ ಆದೇಶವನ್ನು ಹಿಂತೆಗೆಯಬಹುದು ಅಥವಾ ಆರ್ಡಿನನ್ಸುಗಳಿಗೆ ಒಪ್ಪಿಗೆ ನೀಡದಿರಲೂಬಹುದು ಹಾಗೂ ಅವರ ತೀರ್ವಾನವು ಅಂತಿಮವಾಗಿರುತ್ತದೆ.

46. ರೆಗ್ಯುಲೇಶನ್‌ಗಳು.—(1) ಈ ಅಧಿನಿಯಮ, ಶಾಸನಗಳು ಹಾಗೂ ಆರ್ಡಿನನ್ಸುಗಳ ಉಪಬಂಧಗಳಿಗೆ ವಿಧೇಯವಾಗಿ ಬೋರ್ಡ್ ಓಫ್ ಗವರ್ನರ್ಸ್‌ನ ಅಂಗೀಕಾರದೊಂದಿಗೆ ಶೈಕ್ಷಣಿಕ ಸಮಿತಿಗೆ ಶಾಸನಗಳಲ್ಲಿ ನಿಗದಿಪಡಿಸಿದ ಪ್ರಕಾರ ಈ ಕೆಳಗಿನ ಎಲ್ಲಾ ಅಥವಾ ಯಾವುದಾದರೂ ಸಂಗತಿಗಳಿಗಾಗಿ ರೆಗ್ಯುಲೇಶನ್‌ಗಳನ್ನು ಮಾಡಬಹುದಾಗಿದೆ, ಅದೇನೆಂದರೆ:—

(i) ಅಧ್ಯಯನ ಶಾಖೆಗಳಿಗೆ ಹಾಗೂ ಪರೀಕ್ಷೆಗಳನ್ನು ನಡೆಸುವಿಕೆಗೆ;

(ii) ಶೈಕ್ಷಣಿಕ ವರ್ಷಕ್ಕೆ ಕೆಲಸದ ದಿನಗಳ ಸಂಖ್ಯೆಯನ್ನು, ಬೋಧನೆ ನೀಡಲು ವಾಸ್ತವದಲ್ಲಿ ಬೇಕಾದಂತಹ ದಿನಗಳ ಸಂಖ್ಯೆಯನ್ನು, ಭಾನುವಾರವನ್ನು ಹೊರತುಪಡಿಸಿ ಇರುವಂತಹ ರಜಾದಿನಗಳನ್ನು, ರಜಾಕಾಲಗಳನ್ನು ಹಾಗೂ ಷರತ್ತುಗಳನ್ನು ನಿಗದಿಪಡಿಸುವುದು;

(iii) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳನ್ನು, ಪದವಿಗಳನ್ನು ಡಿಪ್ಲೋಮಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ, ಪದವಿಗಳಿಗೆ ಅಥವಾ ಡಿಪ್ಲೋಮಗಳಿಗೆ ಸಮಾನವೆಂದು ಅಂಗೀಕರಿಸುವುದು; ಮತ್ತು

(iv) ಈ ಅಧಿನಿಯಮ, ಶಾಸನಗಳ ಹಾಗೂ ಆರ್ಡಿನನ್ಸುಗಳ ಉಪಬಂಧಗಳಿಗೆ ಅನುಗುಣವಾಗಿ ರೆಗ್ಯುಲೇಶನ್‌ಗಳ ಮೂಲಕ ನಿಗದಿಪಡಿಸಬಹುದಾದಂತಹ ಅಥವಾ ನಿರ್ಣಯಿಸಲ್ಪಡಬಹುದಾದಂತಹ ಇತರ ಎಲ್ಲಾ ಸಂಗತಿಗಳಿಗೆ.

(2) ಈ ಅಧಿನಿಯಮದ ಪ್ರಕಾರ ಮಾಡಿರುವಂತಹ ಎಲ್ಲಾ ರೆಗ್ಯುಲೇಶನ್‌ಗಳಿಗೆ ಶೈಕ್ಷಣಿಕ ಸಮಿತಿಯು ನಿರ್ದೇಶಿಸುವ ದಿನಾಂಕದಿಂದ ಪ್ರಾಬಲ್ಯವಿರುವುದಾಗಿದೆ, ಆದರೆ, ಹಾಗೆ ಮಾಡಿದಂತಹ ಪ್ರತಿಯೊಂದು ರೆಗ್ಯುಲೇಶನನ್ನು ಬೋರ್ಡ್ ಓಫ್ ಗವರ್ನರ್ಸ್ ಸಮಕ್ಷದಲ್ಲಿ ಅದರ ತರುವಾಯದ ಸಭೆಯಲ್ಲಿ ಮಂಡಿಸತಕ್ಕದ್ದು.

47. ಆದೇಶಗಳು.—ಬೋರ್ಡ್ ಓಫ್ ಗವರ್ನರ್ಸ್‌ನ ಪೂರ್ವಾನುಮತಿಯಿಂದ, ಈ ಅಧಿನಿಯಮದ, ಶಾಸನಗಳ ಆರ್ಡಿನನ್ಸುಗಳ ಹಾಗೂ ರೆಗ್ಯುಲೇಶನ್‌ಗಳ ನಿಬಂಧನೆಗಳ ಪ್ರಕಾರ ರೂಪೀಕರಿಸಿರುವಂತಹ ಬೋರ್ಡ್‌ಗಳ, ಸಮಿತಿಗಳ ಹಾಗೂ ಇತರ ನಿಕಾಯಗಳ ಪ್ರವರ್ತನಗಳಿಗೆ ಮತ್ತು ಮಾರ್ಗದರ್ಶನಕ್ಕೆ ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರದ ಸಭೆಗಳ ಪ್ರಕ್ರಿಯೆಯನ್ನು ಹಾಗು ಕಾರ್ಯ ನಿರ್ವಹಣೆಯನ್ನು ಕ್ರಮೀಕರಿಸುವುದಾಗಿಯು ಅಂತಹ ಪ್ರಾಧಿಕಾರ ಅಥವಾ ನಿಕಾಯಕ್ಕೆ ಸಂಬಂಧಪಟ್ಟಂತಹ ಎಲ್ಲಾ ಸಂಗತಿಗಳನ್ನು ನೀಡುವುದಕ್ಕಾಗಿ ಈ ಅಧಿನಿಯಮಕ್ಕೋ, ಶಾಸನಗಳಿಗೋ ಆರ್ಡಿನನ್ಸುಗಳಿಗೋ ರೆಗ್ಯುಲೇಶನ್‌ಗಳಿಗೋ ಅಸಂಗತವಲ್ಲದಂತೆ ಯಾವುದಾದರೂ ಪ್ರಾಧಿಕಾರ, ಅಥವಾ ನಿಕಾಯಕ್ಕೋ ಆದೇಶಗಳನ್ನು ಹೊರಡಿಸಲು ಅಧಿಕಾರ ಇರುವುದಾಗಿದೆ.

48. ಗಜೆಟ್ ಪ್ರಕಟಣೆ.—ವಿಶ್ವವಿದ್ಯಾಲಯವು ಈ ಅಧಿನಿಯಮದ ಅಧೀನದಲ್ಲಿ ಮಾಡಿದಂತಹ ಎಲ್ಲಾ ಶಾಸನಗಳನ್ನು ಆರ್ಡಿನನ್ಸುಗಳನ್ನು ಹಾಗೂ ರೇಗ್ಯುಲೇಶನುಗಳನ್ನು ಗಜೆಟಿನಲ್ಲಿ ಪ್ರಕಟಿಸತಕ್ಕದ್ದು.

49. ನಿಯಮಗಳನ್ನು ರಚಿಸುವುದಕ್ಕಿರುವ ಅಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ, ಸರಕಾರವು, ಗಜೆಟ್ ಅಧಿಸೂಚನೆಯ ಮೂಲಕ ನಿಯಮಗಳನ್ನು ಮಾಡಬಹುದಾಗಿದೆ.

(2) ಈ ಅಧಿನಿಯಮದ ಪ್ರಕಾರ ಮಾಡಲಾಗುವ ಪ್ರತಿಯೊಂದು ನಿಯಮವನ್ನು ಅದನ್ನು ಮಾಡಿದ ಮೇಲೆ ಆದಷ್ಟು ಬೇಗನೆ ವಿಧಾನಸಭೆಯು ಅಧಿವೇಶನದಲ್ಲಿರುವಾಗ ಸಭೆಯ ಮುಂದೆ, ಒಂದು ಅಧಿವೇಶನದಲ್ಲೋ ನಿರಂತರವಾದ ಎರಡು ಅಧಿವೇಶನಗಳಲ್ಲಿ ಒಳಗೊಳ್ಳುವ ಹದಿನಾಲ್ಕು ದಿವಸಗಳವರೆಗೆ ಮಂಡಿಸತಕ್ಕದ್ದು ಹಾಗೂ ಅದನ್ನು ಯಾವ ಅಧಿವೇಶನದಲ್ಲಿ ಮಂಡಿಸಲಾಗಿದೆಯೋ, ಆ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಅಂತ್ಯವಾಗುವುದಕ್ಕಿಂತ

ಮೊದಲು ವಿಧಾನಸಭೆಯು ಆ ನಿಯಮದಲ್ಲಿ ಯಾವುದಾದರೂ ತಿದ್ದುಪಡಿ ಮಾಡುವುದೋ ಆ ನಿಯಮವನ್ನು ಮಾಡಬೇಕೆಂದಿಲ್ಲವೆಂದು ತೀರ್ಮಾನಿಸಿರುವುದೋ ಮಾಡಿದ ಪಕ್ಷ, ಆ ನಿಯಮಕ್ಕೆ ಅನಂತರ, ಆಯಾ ಸಂಗತಿಯಂತೆ ಹಾಗೆ ತಿದ್ದುಪಡಿಮಾಡಿದ ರೂಪದಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವಿಲ್ಲದಾಗುವುದಾಗಿದೆ ಅಥವಾ ಅಂತಹ ಯಾವುದೇ ತಿದ್ದುಪಡಿಯೋ ರದ್ದುಪಡಿಸುವಿಕೆಯೋ, ಆ ನಿಯಮ ಪ್ರಕಾರ ಹಿಂದೆ ಮಾಡಿರುವಂತಹ ಯಾವುದಾದರೂ ಸಿಂಧುತ್ವಕ್ಕೆ ಬಾಧಕವಾಗುವಂತಿರಬಾರದು.

## ಅಧ್ಯಾಯ VI

## ಹಣಕಾಸು

50. ವಿಶ್ವವಿದ್ಯಾಲಯದ ನಿಧಿ.— (1) ಸರಕಾರದಿಂದ, ಭಾರತ ಸರಕಾರದಿಂದ, ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನಿಂದ, ಎ.ಐ.ಸಿ.ಟಿ.ಇ ಯಿಂದ ಹಾಗು ಇನ್ನಿತರ ಯಾವುದಾದರೂ ಮೂಲಗಳಿಂದ ಲಭಿಸುವಂತಹ ಎಲ್ಲಾ ಅನುದಾನಗಳಿಗಾಗಿ, ಸಾಲಗಳಿಗಾಗಿ ವಿಶ್ವವಿದ್ಯಾಲಯದ ಎಲ್ಲಾ ವರಮಾನಗಳಿಗಾಗಿ, ಲಭಿಸುವಂತಹ ಎಲ್ಲಾ ಶುಲ್ಕಗಳಿಗಾಗಿ, ವಿಶ್ವವಿದ್ಯಾಲಯಕ್ಕೆ ಸೇರಿದಂತಹ ಆಸ್ತಿಗಳಿಂದ ಹಾಗೂ ನಿಧಿಗಳಿಂದ ಲಭಿಸುವಂತಹ ಬಾಡಿಗೆಗಳಿಗಾಗಿ ಆದಾಯ ಇತ್ಯಾದಿ ಎಲ್ಲಾ ವರಮಾನಗಳಿಗಾಗಿ, ನಿಯಮ ಪ್ರಕಾರ ಲಭಿಸುವಂತಹ ಎಲ್ಲಾ ದಾನ ಮತ್ತು ದತ್ತಿಗಳಿಗಾಗಿ, ವಿಶ್ವವಿದ್ಯಾಲಯದ ಇತರ ರೂಪದಲ್ಲಿರುವ ಎಲ್ಲಾ ತರದ ಆದಾಯಗಳಿಗಾಗಿ, ವಿಶ್ವವಿದ್ಯಾಲಯದ ವ್ಯವಹಾರಕ್ಕೆ ಸಂಬಂಧಿಸಿ ಲಭಿಸುವಂತಹ ನಿಕ್ಷೇಪಗಳಿಗಾಗಿ, ಪಾವತಿಗಳು ಹಾಗೂ ಸರ್ವಿಸ್ ಓಫ್ ಫಂಡ್‌ಗಳು ಎಲ್ಲದಕ್ಕೂ ಸೇರಿ "ತಾಂತ್ರಿಕವಿಜ್ಞಾನ ವಿಶ್ವವಿದ್ಯಾಲಯದ ನಿಧಿ" ಎಂಬ ಹೆಸರಿನಲ್ಲಿ ಒಂದು ಸಂಚಿತ ನಿಧಿ ರೂಪೀಕರಿಸತಕ್ಕದ್ದಾಗಿದೆ ಹಾಗೂ ಅದನ್ನು ಈ ಅಧಿನಿಯಮದಲ್ಲಿ, ಶಾಸನಗಳಲ್ಲಿ, ಆರ್ಡಿನನ್ಸುಗಳಲ್ಲಿ, ರೆಗ್ಯುಲೇಶನ್‌ಗಳಲ್ಲಿ ಹಾಗೂ ಆದೇಶಗಳಲ್ಲಿ ಹೇಳಿರುವಂತಹ ಅವಶ್ಯಕತೆಗಳಿಗಾಗಿ, ಅದರಲ್ಲಿ ಉಪಬಂಧಿಸಿದಂತೆ ವಿನಿಯೋಗಿಸತಕ್ಕದ್ದಾಗಿದೆ:

ಆದರೆ, ಪ್ರತ್ಯೇಕ ಅವಶ್ಯಕತೆಗಳಿಗೆ ಬೇರೆ ಬೇರೆ ಲೆಕ್ಕಗಳನ್ನು ಇಟ್ಟುಕೊಳ್ಳತಕ್ಕದ್ದಾಗಿದೆ.

(2) ರಾಜ್ಯ ಸರಕಾರದ ಅಂಗೀಕಾರದೊಂದಿಗೆ ತಾಂತ್ರಿಕವಿಶ್ವವಿದ್ಯಾಲಯ ನಿಧಿಯಲ್ಲಿ ಇರುವಂತಹ ಎಲ್ಲಾ ಹಣವನ್ನು ವಿಶ್ವವಿದ್ಯಾಲಯವು ನಿಶ್ಚಯಿಸುವಂತಹ ಬ್ಯಾಂಕುಗಳಲ್ಲಿ ಇಡತಕ್ಕದ್ದು ಅಥವಾ ಅಂತಹ ರೀತಿಯಲ್ಲಿ ನಿಕ್ಷೇಪಿಸುವುದೋ ಮಾಡತಕ್ಕದ್ದಾಗಿದೆ.

(3) ವಿಶ್ವವಿದ್ಯಾಲಯವು ಅದಕ್ಕೆ ಯುಕ್ತವೆಂದು ತೋರುವಂತಹ ತಾಂತ್ರಿಕ ವಿಶ್ವವಿದ್ಯಾಲಯ ನಿಧಿಯಲ್ಲಿ ಇರುವ ಹಣದ ಒಂದು ಅಂಶವನ್ನು ಸರಕಾರಿ ಭದ್ರತೆಯಲ್ಲಿಯೋ ಭಾರತ ಸರಕಾರವು ಭರವಸೆ ನೀಡುವಂತಹ ಭದ್ರತೆಯಲ್ಲಿಯೋ ನಿಕ್ಷೇಪಿಸಬಹುದಾಗಿದೆ.

(4) ತಾಂತ್ರಿಕವಿಜ್ಞಾನ ವಿಶ್ವವಿದ್ಯಾಲಯ ನಿಧಿಯ ಸಂರಕ್ಷಣೆಯನ್ನು ಅದರಿಂದ ಹಣವನ್ನು ಪಾವತಿಸುವುದನ್ನು ಹಿಂತೆಗೆಯುವುದನ್ನು ಹಾಗೂ ಅನುಷಂಗಿಕ ಇತರ ಎಲ್ಲಾ ಸಂಗತಿಗಳನ್ನು ಅದಕ್ಕಾಗಿ ಮಾಡಿದಂತಹ ಶಾಸನಗಳಿಗೆ ಹಾಗೂ ಆರ್ಡಿನನ್ಸುಗಳಿಗೆ ವಿಧೇಯವಾಗಿ ನಿಯಂತ್ರಣಮಾಡತಕ್ಕದ್ದಾಗಿದೆ.

(5) ಈ ಅಧಿನಿಯಮದ ಪ್ರಕಾರದ ಅಧಿಕಾರಗಳನ್ನು ವಿನಿಯೋಗಿಸುವಾಗ ಹಾಗೂ ಕರ್ತವ್ಯಗಳನ್ನು ನಿರ್ವಹಿಸುವಾಗ ಉಂಟಾಗುವಂತಹ ವೆಚ್ಚಗಳನ್ನೊಳಗೊಂಡು ವಿಶ್ವವಿದ್ಯಾಲಯದ ವೆಚ್ಚಗಳನ್ನು ಭರಿಸುವುದಕ್ಕಾಗಿ ತಾಂತ್ರಿಕವಿಜ್ಞಾನ ವಿಶ್ವವಿದ್ಯಾಲಯ ನಿಧಿಯನ್ನು ವಿನಿಯೋಗಿಸತಕ್ಕದ್ದಾಗಿದೆ.

(6) ವಿಶ್ವವಿದ್ಯಾಲಯವು ಸಂಶೋಧನಾ ಚಟುವಟಿಕೆಗಳಿಗಾಗಿ ಒಂದು ಪ್ರತ್ಯೇಕ ನಿಧಿಯನ್ನು ರಚಿಸತಕ್ಕದ್ದು. ಅದು ಭಾರತ ಸರಕಾರ, ಕೇರಳ ಸರಕಾರ, ಕೇಂದ್ರೀಯ ಸ್ವಾಯತ್ತತಾ ಸಂಸ್ಥೆಗಳು, ಅಂತರಾಷ್ಟ್ರೀಯ ಸಂಶೋಧನಾ ಏಜನ್ಸಿಗಳು ಮತ್ತು ಸೆಂಟರ್ ಫೋರ್ ಎಂಜಿನಿಯರಿಂಗ್ ರಿಸರ್ಚ್ ಎಂಡ್ ಡೆವೆಲಪ್‌ಮೆಂಟ್ ಇತ್ಯಾದಿಗಳಿಂದ ಲಭಿಸುವಂತಹ ವರಮಾನಗಳಿಂದಾಗಿರಬಹುದಾಗಿದೆ.

51. <u>ಬಜೆಟ್</u>.—(1) ಮುಂದಿನ ಆರ್ಥಿಕ ವರ್ಷಕ್ಕಿರುವ ವಿಶ್ವವಿದ್ಯಾಲಯದ ವಾರ್ಷಿಕ ಬಜೆಟ್ ಎಸ್ಟಿಮೇಟ್‌ಗಳನ್ನು ಹಣಕಾಸು ವರದಿಯೊಂದಿಗೆ ಆರ್ಥಿಕ ಅಧಿಕಾರಿಯವರು ತಯಾರಿಸಿ, ಕಾರ್ಯ ನಿರ್ವಾಹಕ ಸಮಿತಿಗೆ ಸಮರ್ಪಿಸತಕ್ಕದಾಗಿದೆ ಹಾಗು ಅದನ್ನು ಅಲ್ಲಿ ಚರ್ಚೆಮಾಡಿ ಅಂತಿಮ ಅಂಗೀಕೃತ ಆವೃತ್ತಿಯನ್ನು ಪರಿಗಣನೆಗಾಗಿ ಬೋರ್ಡ್ ಓಫ್ ಗವರ್ನರ್ಸ್ ಸಮರ್ಪಿಸತಕ್ಕದ್ದು.

(2) ಬೋರ್ಡ್ ಓಫ್ ಗವರ್ನರ್ಸ್ ಅಂಗೀಕರಿಸಿದಂತಹ ಹಣಕಾಸು ಅಂದಾಜುಗಳ ಅಥವಾ ವರದಿಗಳ ಪ್ರತಿಗಳನ್ನು ಸರಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

(3) ವಿಶ್ವವಿದ್ಯಾಲಯದ ಆರ್ಥಿಕ ವರ್ಷವು ಸರಕಾರದ ಆರ್ಥಿಕ ವರ್ಷಕ್ಕೆ ಸಮಾನವಾಗಿರುವುದು.

52. <u>ಆಂತರಿಕ ಲೆಕ್ಕ ಪರಿಶೋಧನೆ</u>.—(1) ವಿಶ್ವವಿದ್ಯಾಲಯದ ಲೆಕ್ಕಗಳನ್ನು ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರದ ಅಥವಾ ವ್ಯವಹಾರಗಳ ಮೇಲೆ ಹಿತಾಸಕ್ತಿಯಿಲ್ಲದಂತಹ ಪಾಲುದಾರನ್ನೊಳಗೊಂಡಂತಹ ಚಾರ್ಟರ್ಡ್ ಅಕೌಂಟಂಟ್ಸ್ ವ್ಯವಹಾರ ಸಂಸ್ಥೆಗಳಿಂದ ಬೋರ್ಡ್ ಓಫ್ ಗವರ್ನರ್ಸ್ ನಿಯಮಿಸುವಂತಹ ಲೆಕ್ಕ ಪರಿಶೋಧಕರಿಂದ ಎಲ್ಲಾವರ್ಷವೂ ಕನಿಷ್ಠ ಪಕ್ಷ ಒಂದು ಭಾರಿಯಾದರೂ ಮತ್ತು ಯಾವುದೇ ಸಂದರ್ಭದಲ್ಲೂ ಆರ್ಥಿಕ ವರ್ಷವು ಅಂತ್ಯಗೊಂಡು ಆರು ತಿಂಗಳಿನೊಳಗಾಗಿ ಲೆಕ್ಕ ಪರಿಶೋಧಿಸುವಂತೆ ಮಾಡತಕ್ಕದ್ದಾಗಿದೆ.

(2) ಲೆಕ್ಕ ಪರಿಶೋಧನೆ ಮಾಡಿದಂತಹ ಲೆಕ್ಕಗಳನ್ನು ವಿಶ್ವವಿದ್ಯಾಲಯವು ಪ್ರಕಟಿಸತಕ್ಕದು ಹಾಗು ಅದರ ಪ್ರತಿಯನ್ನು ಲೆಕ್ಕ ಪರಿಶೋಧಕನ ವರದಿಯೊಂದಿಗೆ ಬೋರ್ಡ್ ಓಫ್ ಗವರ್ನರ್ಸ್‌ನ ಸಮಕ್ಷದಲ್ಲಿ ಮಂಡಿಸತಕ್ಕದ್ದು ಹಾಗೂ ಕುಲಾಧಿಪತಿಗೆ ಹಾಗೂ ಸರಕಾರಕ್ಕೆ ಸಮರ್ಪಿಸತಕ್ಕದ್ದಾಗಿದೆ.

53. ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನೆ.—(1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳನ್ನು ಕಾರ್ಯನಿರ್ವಾಹಕ ಸಮಿತಿಯ ನಿರ್ದೇಶ ಪ್ರಕಾರ ಹಣಕಾಸು ಅಧಿಕಾರಿ ತಯಾರು ಮಾಡತಕ್ಕದ್ದಾಗಿದೆ.

(2) ಸರಕಾರವು ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯದ ಆಡಳಿತದ ಸಂಸ್ಥೆಗಳ ಲೆಕ್ಕಗಳನ್ನು ಕ್ರಮವಾದ ಅಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡಲು ಲೆಕ್ಕ ಪರಿಶೋಧಕರನ್ನು ನಿಯಮಿಸ ತಕ್ಕದ್ದಾಗಿರುತ್ತದೆ.

(3) ಲೆಕ್ಕ ಪರಿಶೋಧಕರು ವಿಶ್ವವಿದ್ಯಾಲಯದ ಲೆಕ್ಕಗಳನ್ನು ನಿರಂತರವಾಗಿ ಪರಿಶೋಧನೆ ಮಾಡಬೇಕಾಗಿದ್ದು ಹಾಗೂ ಯಥಾಪ್ರಕಾರ ಸೂಚನೆ ನೀಡಿದ ನಂತರ, ವಿಶ್ವವಿದ್ಯಾಲಯದ ಅಧೀನದಲ್ಲಿರುವ ಯಾವುದೇ ಸಂಸ್ಥೆಯ ಸ್ಥಳೀಯ ಲೆಕ್ಕ ಪರಿಶೋಧನೆ ನಡೆಸಬಹುದಾಗಿದೆ.

(4) ಸರಕಾರವು ನಿರ್ಧರಿಸುವಂತಹ ಲೆಕ್ಕಪರಿಶೋಧನಾ ವೆಚ್ಚವನ್ನು ವಿಶ್ವವಿದ್ಯಾಲಯ ವಹಿಸತಕ್ಕದ್ದಾಗಿದೆ.

(5) ಒಂದು ವರ್ಷದ ಅಥವಾ ಅದಕ್ಕಿಂತಲೂ ಕಡಿಮೆ ಕಾಲಾವಧಿಯ ಅಥವಾ ಯಾವುದಾದರೂ ವ್ಯವಹಾರ ಅಥವಾ ನಿರಂತರವಾದ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನೆಯನ್ನು ಪೂರ್ತಿಕರಿಸಿದ ನಂತರ, ಲೆಕ್ಕ ಪರಿಶೋಧಕ ಒಂದು ವರದಿಯನ್ನು ವಿಶ್ವವಿದ್ಯಾಲಯಕ್ಕೂ ಅದರ ನಕಲು ಪ್ರತಿಯನ್ನು ಸರಕಾರಕ್ಕೂ ಕಳುಹಿಸಿಕೊಡತಕ್ಕದ್ದಾಗಿದೆ.

(6) ಕಾರ್ಯ ನಿರ್ವಾಹಕ ಸಮಿತಿಯು ವಾರ್ಷಿಕ ಲೆಕ್ಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಪ್ರಕಟಿಸತಕ್ಕದ್ದು ಹಾಗೂ ಅಂತಹ ಲೆಕ್ಕಗಳ ಲೆಕ್ಕ ಪರಿಶೋಧನೆಯ ವರದಿಯ ಪ್ರತಿಗಳನ್ನು ಬೋರ್ಡ್ ಓಫ್ ಗವರ್ನರ್ಸ್‌ನ ಸಮಕ್ಷದಲ್ಲಿ ಮಂಡಿಸುವ ಹಾಗೂ ಬೋರ್ಡ್ ಓಫ್ ಗವರ್ನರ್ಸ್ ಅಂಗೀಕಾರ ಲಭಿಸಿದ ನಂತರ ಅದನ್ನು ಮುಂದಿನ ವರ್ಷ ಮಾರ್ಚ್ 1ನೇ ತಾರೀಕಿನಂದೋ ಅದಕ್ಕಿಂತ ಮುಂಚೆಯೋ ಸರಕಾರಕ್ಕೆ ಸಮರ್ಪಿಸತಕ್ಕದ್ದಾಗಿದೆ.

(7) (6)ನೇ ಉಪ-ವಿಭಾಗದ ಪ್ರಕಾರದ ವಾರ್ಷಿಕ ಲೆಕ್ಕಗಳು ಲಭಿಸಿದ ತಕ್ಷಣ, ಸರಕಾರವು ಅದನ್ನು ವಿಧಾನ ಸಭೆಯು ಅಧಿವೇಶನದಲ್ಲಿರುವಾಗ ಹಾಗೂ ವಿಧಾನಸಭೆಯ ಅಧಿವೇಶನದಲ್ಲಿಲ್ಲದಿದ್ದಲ್ಲಿ ಅಂತಹ ಹಣಕಾಸು ವರದಿಯ ನಂತರ ನಿಕಟಾನಂತರದ ಅಧಿವೇಶನದಲ್ಲಿ ಮಂಡಿಸುವಂತೆ ಮಾಡಿಸತಕ್ಕದ್ದು.

(8) ಲೆಕ್ಕ ಪರಿಶೋಧಕರುಗಳು (5)ನೇ ಉಪ-ವಿಭಾಗದ ಪ್ರಕಾರವಿರುವಂತ ವರದಿಯಲ್ಲಿ, ಅವ್ಯವಹಾರ ಕಾನೂನು ಬಾಹಿರ ಅಥವಾ ಅನುಚಿತವಾದ ವೆಚ್ಚದ ಅಥವಾ ವಿಶ್ವವಿದ್ಯಾಲಯಕ್ಕೆ ಸಿಗಬೇಕಾದಂತಹ ಹಣ ಇತರ ಆಸ್ತಿಯ ವಸೂಲಿಯಲ್ಲಿನ ಲೋಪದ ಅಥವಾ ವಿಶ್ವವಿದ್ಯಾಲಯದ ಅಧಿಕಾರಿಗಳ ಹಾಗೂ ಪ್ರಾಧಿಕಾರಗಳ ನಿರ್ಲಕ್ಷ್ಯತೆ ಅಥವಾ ದುರ್ನಡತೆಯಿಂದ ಹಣ ಅಥವಾ ಇತರ ಆಸ್ತಿಗಳ ನಷ್ಟದ ಅಥವಾ ಹಣದ ದುಂದುವೆಚ್ಚದ ಕುರಿತಿರುವ ಎಲ್ಲಾ ಸಂಗತಿಗಳನ್ನು ಪ್ರತ್ಯೇಕವಾಗಿ ಹೇಳಿರತಕ್ಕದ್ದಾಗಿದೆ.

(9) ಲೆಕ್ಕ ಪರಿಶೋಧಕರು, ಸರಕಾರವು ಅವಶ್ಯಪಡುವಂತಹ ವಿಶ್ವವಿದ್ಯಾಲಯದ ಲೆಕ್ಕಗಳಿಗೆ ಸಂಬಂಧಿಸಿರುವ ಇತರ ಯಾವುದೇ ಸಂಗತಿ ಬಗ್ಗೆಯು ವರದಿ ನೀಡತಕ್ಕದ್ದಾಗಿದೆ.

(10) ವಿಶ್ವವಿದ್ಯಾಲಯವು, ಲೆಕ್ಕ ಪರಿಶೋಧಕರು ಬೊಟ್ಟು ಮಾಡಿದಂತಹ ಯಾವುದೇ ನ್ಯೂನತೆಯನ್ನೋ ಅವ್ಯಹಾರವನ್ನೋ, ತಕ್ಷಣವೇ ಪರಿಹರಿಸತಕ್ಕದ್ದು ಹಾಗೂ ಕೈಗೊಂಡಿರುವ ಕ್ರಮದ ಬಗ್ಗೆ ಸರಕಾರಕ್ಕೆ ವರದಿ ಮಾಡತಕ್ಕದ್ದಾಗಿದೆ.

54. <u>ವಾರ್ಷಿಕ ವರದಿ.</u>—(1) ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ವಿಶ್ವವಿದ್ಯಾಲಯ ತಯಾರಿಸಿ ಬೋರ್ಡ್ ಓಫ್ ಗವರ್ನರ್ಸ್‌ನ ಅಂಗೀಕಾರ ಪಡೆದ ನಂತರ ಅದನ್ನು ಪ್ರಕಟಿಸತಕ್ಕದ್ದು ಹಾಗೂ ಮುಂದಿನ ವರ್ಷ ಸಪ್ಟಂಬರ್ 15ನೇ ತಾರೀಖಿನಂದೋ ಅದಕ್ಕೆ ಮುಂಚಿತವಾಗಿಯೋ ಅದನ್ನು ಸರಕಾರಕ್ಕೆ ಸಮರ್ಪಿಸತಕ್ಕದ್ದಾಗಿದೆ.

(2) (1)ನೇ ಉಪ-ವಿಭಾಗದ ಪ್ರಕಾರದ ವಾರ್ಷಿಕ ವರದಿಯು ಲಭಿಸಿದ ತಕ್ಷಣ ಸರಕಾರ ಅದನ್ನು ವಿಧಾನಸಭೆಯು ಅಧಿವೇಶನದಲ್ಲಿರುವಾಗ ಅದರ ಸಮಕ್ಷದಲ್ಲಿ ಮಂಡಿಸತಕ್ಕದ್ದು ಹಾಗೂ ವಿಧಾನಸಭೆಯ ಅಧಿವೇಶನದಲ್ಲಿಲ್ಲದಿದ್ದಲ್ಲಿ ಅಂತಹ ವಾರ್ಷಿಕ ವರದಿಯು ಲಭಿಸಿದ ನಂತರ ನಿಕಟಾನಂತರದ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

## ಅಧ್ಯಾಯ VII

## ಇತರೆ

55. ಪ್ರಾಧಿಕಾರದ ಕರ್ತವ್ಯಗಳು.—(1) ವಿಶ್ವವಿದ್ಯಾಲಯದ ಹಿತಾಸಕ್ತಿಗಳನ್ನು ಯಥಾಪ್ರಕಾರ ಸಂರಕ್ಷಿಸಲ್ಪಡುತ್ತಿದೆಯೆಂದು ಖಾತ್ರಿಪಡಿಸುವುದು ವಿಶ್ವವಿದ್ಯಾಲಯದ ಪ್ರತಿಯೊಂದು ಪ್ರಾಧಿಕಾರದ, ನಿಕಾಯದ ಅಥವಾ ಅಧಿಕಾರಿಯವರ ಕರ್ತವ್ಯವಾಗಿರುವುದು.

(2) ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರ, ನಿಕಾಯ ಅಥವಾ ಅಧಿಕಾರಿಯ ಭಾಗದಿಂದಿರುವ, ಈ ಅಧಿನಿಯಮ, ಶಾಸನಗಳ, ಆರ್ಡಿನನ್ಸ್‌ಗಳ ಅಥವಾ ರೆಗ್ಯುಲೇಶನ್‌ಗಳ ಉಪಬಂಧಗಳಿಗೆ ಅನುಗುಣವಾಗಿಯಲ್ಲದೆ, ಉತ್ತಮ ವಿಶ್ವಾಸದಿಂದ ಮಾಡಿರದಂತಹ ಯಾವುದಾದರೂ ಕ್ರಮದ ಮೂಲಕವೋ, ಅಥವಾ ಅದಕ್ಕನುಗುಣವಾಗಿ ಕ್ರಮ ಕೈಗೊಳ್ಳಲು ವಿಫಲವಾದ ಕಾರಣದಿಂದ ಅಥವಾ ಅದರ ಅಥವಾ ಅವರ ಭಾಗದಿಂದಿರುವ ಮನಃಪೂರ್ವವಾದಂತಹ ನಿರ್ಲಕ್ಷ್ಯದಿಂದಲೋ ಲೋಪದಿಂದಾಗಿಯೋ ವಿಶ್ವವಿದ್ಯಾಲಯಕ್ಕೆ ಹಾನಿಯೋ ನಷ್ಟವೋ ಉಂಟಾಗಿದೆಯೆಂದು ಕಂಡುಬಂದಲ್ಲಿ ಅಂತಹ ಹಾನಿಯನ್ನೋ ನಷ್ಟವನ್ನೋ ಶಾಸನಗಳಿಂದ ನಿಗದಿಪಡಿಸಿದ ಪ್ರಕ್ರಿಯೆಗಳಿಗೆ ಅನುಗುಣವಾಗಿ, ಜಂಟಿಯಾಗಿಯೋ ಮತ್ತು ಪ್ರತ್ಯೇಕವಾಗಿಯೋ, ಆಯಾಯ ಸಂಗತಿಯಂತೆ, ಪ್ರಾಧಿಕಾರದಿಂದಲೋ ನಿಕಾಯದಿಂದಲೋ, ಅದರ ಸಂಬಂಧಪಟ್ಟ ಸದಸ್ಯರಿಂದಲೋ ಅಥವಾ ಅಧಿಕಾರಿಗಳಿಂದಲೋ ವಸೂಲು ಮಾಡತಕ್ಕದ್ದಾಗಿದೆ.

56. ಕುಲಾಧಿಪತಿಯವರ ವಿವಾದಗಳನ್ನು ತೀರ್ಮಾನಿಸತಕ್ಕದ್ದು.—ಯಥಾಪ್ರಕಾರ ಆರಿಸಲ್ಪಟ್ಟ, ನಿಯಮಿಸಲ್ಪಟ್ಟ, ನಾಮನಿರ್ದೇಶ ಮಾಡಲ್ಪಟ್ಟ ಅಥವಾ ಕೋ-ಆಪ್ಟ್ ಮೂಲಕ ಆರಿಸಲ್ಪಟ್ಟಂತಹ ಒಬ್ಬ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುದಾದರೂ ಪ್ರಾಧಿಕಾರದ ಅಥವಾ ನಿಕಾಯದ ಒಂದು ಸದಸ್ಯನಾಗಲು ಅರ್ಹನೋ ಎಂಬುವುದಕ್ಕೆ ಸಂಬಂಧಿಸಿ ಈ ಅಧಿನಿಯಮದ್ದೋ ಯಾವುದಾದರೂ ಶಾಸನದ್ದೋ, ಆರ್ಡಿನನ್ಸ್‌ಗಳದ್ದೋ ಅಥವಾ ರೆಗ್ಯುಲೇಶನ್‌ಗಳದ್ದೋ ನಿರ್ವಚನೆಗೆ ಸಂಬಂಧಿಸಿ ಯಾವುದಾದರೂ ವಿವಾದ ಉಂಟಾಗಿದ್ದಲ್ಲಿ, ಅದರಿಂದ ಪ್ರತ್ಯಕ್ಷವಾಗಿ ಸಂಕಟವನ್ನನುಭವಿಸುವ ವ್ಯಕ್ತಿಯ, ಅಥವಾ ನಿಕಾಯದ ಅರ್ಜಿಯ ಮೇಲೆ ಅಥವಾ ಕುಲಪತಿಯವರು ಸ್ವತಃ ಪ್ರಸ್ತುತ ಸಂಗತಿಯನ್ನು ಕುಲಾಧಿಪತಿಯವರ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟು, ಅವರು ಅವಶ್ಯಕವೆಂದು ತೀರ್ಮಾನಿಸುವಂತಹ ಉಪದೇಶವನ್ನು ಸ್ವೀಕರಿಸಿದ ನಂತರ ಸರಕಾರದೊಂದಿಗೆ ಸಮಾಲೋಚನೆ ಮಾಡಿ ವಿವಾದಕ್ಕೆ ತೀರ್ಪು ಕಲ್ಪಿಸತಕ್ಕದ್ದು ಹಾಗು ಅಂತಹ ತೀರ್ಮಾನವು ಅಂತಿಮವಾಗಿರುತ್ತದೆ.

57. <u>ಉತ್ತಮ ವಿಶ್ವಾಸದಿಂದ ಮಾಡಿದಂತಹ ಕ್ರಮಗಳಿಗೆ ಸಂರಕ್ಷಣೆ.</u>—ಈ ಅಧಿನಿಯಮದ ಇತರ ಉಪಬಂಧಗಳಿಗೆ ವಿಧೇಯವಾಗಿ, ವಿಶ್ವವಿದ್ಯಾಲಯ ಅಥವಾ ಅದರ ಯಾವುದಾದರೂ ಅಧಿಕಾರಿಯೋ ಪ್ರಾಧಿಕಾರಗಳೋ ನಿಕಾಯಗಳೋ ಉತ್ತಮ ವಿಶ್ವಾಸದಿಂದ ಮಾಡಿದಂತಹ ಎಲ್ಲಾ ಕ್ರಮಗಳು ಅಥವಾ ಹೊರಡಿಸಿದ ಆದೇಶಗಳು ಅಂತಿಮವಾಗಿರುವುದಾಗಿದೆ ಹಾಗು ಉತ್ತಮ ವಿಶ್ವಾಸದಿಂದ ಈ ಅಧಿನಿಯಮದ, ಶಾಸನಗಳ, ಆರ್ಡಿನನ್ಸ್‌ಗಳ ಹಾಗೂ ರೆಗ್ಯುಲೇಶನ್‌ಗಳ ಇತ್ಯಾದಿಗಳ ಉಪಬಂಧಗಳಿಗನುಗುಣವಾಗಿ ಕೈಗೊಂಡ ಯಾವುದಾದರೂ ಕ್ರಮದ್ದೋ ಹೊರಡಿಸಿರುವಂತಹ ಆದೇಶಗಳದ್ದೋ ಕೈಗೊಳ್ಳಲು ಉದ್ದೇಶಿಸಿದಂತಹ ಯಾವುದಾದರೂ ಕ್ರಮದ್ದೋ ಹೊರಡಿಸಲುದ್ದೇಶಿಸಿದ ಯಾವುದಾದರೂ ಆದೇಶಕ್ಕೋ ಸಂಬಂಧಿಸಿ ವಿಶ್ವವಿದ್ಯಾಲಯಕ್ಕೋ ಅದರ ಅಧಿಕಾರಿಗಳಿಗೋ ಪ್ರಾಧಿಕಾರಗಳಿಗೋ ನಿಕಾಯಗಳಿಗೆದುರಾಗಿಯೋ ಯಾವುದೇ ದಾವೆಯನ್ನು ಅಥವಾ ಇತರ ಕಾನೂನುಕ್ರಮಗಳನ್ನು ಜರಗಿಸುವುದೋ ಮುಂದುವರಿಸುವುದೋ ನಷ್ಟ ಪರಿಹಾರವನ್ನು ಕೋರುವುದೋ ಮಾಡುವಂತದಲ್ಲ.

58. <u>ಅಧಿಕಾರದ ಪ್ರತ್ಯಾಯೋಜನೆ.</u>—ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ವಿಧೇಯವಾಗಿ, ವಿಶ್ವವಿದ್ಯಾಲಯದ ಯಾವುದಾದರೂ ಅಧಿಕಾರಿಯವರ ಅಥವಾ ಪ್ರಾಧಿಕಾರದ ಶಾಸನಗಳನ್ನು ಆರ್ಡಿನನ್ಸುಗಳನ್ನು ಹಾಗೂ ರೆಗ್ಯುಲೇಶನ್‌ಗಳನ್ನು ಮಾಡುವ ಅಧಿಕಾರಗಳ ಹೊರತಾಗಿ ಅವರ ಯಾವುದಾದರೂ ಅಧಿಕಾರಗಳನ್ನು, ಆ ರೀತಿ ವಹಿಸಿಕೊಟ್ಟಂತಹ ಅಧಿಕಾರಗಳನ್ನು ವಿನಿಯೋಗಿಸುವುದಕ್ಕಿರುವ ಅಂತಿಮ ಹೊಣೆಗಾರಿಕೆಯು ಅದನ್ನು ವಹಿಸಿಕೊಡುವಂತಹ ಅಧಿಕಾರಿಯಲ್ಲಿಯೋ ಅಥವಾ ಪ್ರಾಧಿಕಾರದಲ್ಲಿಯೋ ನಿಹಿತವಾಗಿರಬೇಕೆಂಬ ಉಪಬಂಧಕ್ಕೆ ವಿಧೇಯವಾಗಿ, ವಿಶ್ವವಿದ್ಯಾಲಯದ ಬೇರೆ ಯಾವುದಾದರೂ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಆದೇಶದ ಮೂಲಕ ವಹಿಸಿಕೊಡಬಹುದಾಗಿದೆ.

59. <u>ವಿಶ್ವವಿದ್ಯಾಲಯದ ಪ್ರಕ್ರಿಯೆಗಳು ಅಸಿಂಧುವಾಗುವಂತದ್ದಲ್ಲ.</u>—ವಿಶ್ವವಿದ್ಯಾಲಯದ ಬೋರ್ಡ್ ಓಫ್ ಗವರ್ನರ್ಸ್‌ನ ಕಾರ್ಯ ನಿರ್ವಾಹಕ ಸಮಿತಿಯ, ಶೈಕ್ಷಣಿಕ ಸಮಿತಿಯ, ಬೇರೆ ಯಾವುದಾದರೂ ಪ್ರಾಧಿಕಾರದ, ಯಾವುದಾದರೂ ನಿಕಾಯದ ಒಂದು ಕುಲಪತಿಯನ್ನು ನಿಯಮಿಸುವುದಕ್ಕಾಗಿ ಕುಲಾಧಿಪತಿಯವರು ನಿಯಮಿಸಿದಂತಹ ಒಂದು ಸಮಿತಿಯನ್ನೊಳಗೊಂಡು ಸಮಿತಿಯ ಯಾವುದೇ ಕ್ರಮ ಅಥವಾ ಪ್ರಕ್ರಿಯೆಯು ಯಾವುದಾದರೂ ಸಮಯದಲ್ಲಿ:—

(i) ಅಂತಹ ಯಾವುದಾದರೂ ಪ್ರಾಧಿಕಾರದ ನಿಕಾಯದ ಅಥವಾ ಸಮಿತಿಯ ಯಾವುದಾದರೂ ಸದಸ್ಯನನ್ನು ಕ್ರಮಬದ್ಧವಾಗಿ ಆರಿಸಲ್ಪಟ್ಟಿಲ್ಲವೆಂದೋ ನಿಯಮಿಸಲ್ಪಟ್ಟಿಲ್ಲವೆಂದೋ ನಾಮನಿರ್ದೇಶ ಮಾಡಲ್ಪಟ್ಟಿಲ್ಲವೆಂದೋ ಕೋ-ಆಪ್ಟ್ ಪ್ರಕಾರ ಆರಿಸಲ್ಪಟ್ಟಿಲ್ಲವೆಂದೋ, ಬೇರೆ ಯಾವುದಾದರೂ ಕಾರಣಗಳಿಂದ ಸಮಿತಿ ರೂಪೀಕರಣದ ಸಮಯದಲ್ಲಿ ಅಧಿಕಾರವನ್ನು

ವಹಿಸಿಲ್ಲವೆಂದೋ ಅಥವಾ ಅದರ ಸಭೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂದೋ, ಯಾವುದಾದರೂ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಪ್ರಾಧಿಕಾರಗಳಲ್ಲಿ ಸದಸ್ಯನಾಗಿರುವ ಅಥವಾ ಅದರ ರೂಪೀಕರಣದಲ್ಲಿ ಇನ್ಯಾವುದಾದರೂ ನ್ಯೂನತೆಗಳಿವೆಯೆಂದೋ ಅದರ ಸದಸ್ಯರುಗಳ ಅಧಿಕೃತ ಸ್ಥಾನಗಳ ಒಂದೋ ಅದಕ್ಕಿಂತ ಹೆಚ್ಚೋ ತೆರವುಗಳಿವೆಯೆಂದೋ; ಅಥವಾ

(ii) ಪರಿಗಣನೆಯಲ್ಲಿರುವ ವಿಷಯದ ಮಹತ್ವವನ್ನು ಬಾಧಿಸದೆ, ಅಂತಹ ಯಾವುದಾದರೂ ಪ್ರಾಧಿಕಾರದ ನಿಕಾಯದ ಅಥವಾ ಸಮಿತಿಯ ಪ್ರಕ್ರಿಯೆಗಳಲ್ಲಿ ಯಾವುದಾದರೂ ಲೋಪದೋಷಗಳು ಇದೆಯೆಂದೋ; ಎಂಬ ಕಾರಣಗಳಿಂದ ಮಾತ್ರ ಅಸಿಂಧುವಾಗಿದೆಯೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ VIII

## **ಕಾಲೇಜುಗಳಿಗೆ ಅನುಮತಿ, ಸಂಯೋಜನೆ ಹಾಗೂ ಅಂಗೀಕಾರ**

60. <u>ಸಂಯೋಜನೆ ಮತ್ತು ಅಂಗೀಕಾರ.</u>—(1) ಈ ಅಧಿನಿಯಮದ ಪ್ರಾರಂಭ ದಿನಾಂಕಕ್ಕಿಂತ ಮೊದಲು ವಿವಿಧ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ ಕೇರಳ ಸರಕಾರದ, ಸರಕಾರದ ನಿಯಂತ್ರಣದಲ್ಲಿರುವ ಸಂಘಗಳ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನಿತವಲ್ಲದಂತಹ ಸಹಾಯ ಶೈಕ್ಷಣಿಕ ಏಜನ್ಸಿಗಳ ಒಡೆತನದಲ್ಲಿರುವ ಯಾವುದೇ ಎಂಜಿನಿಯರಿಂಗ್ ಕಾಲೇಜುಗಳ ಹಾಗು ತಾಂತ್ರಿಕ ಶಿಕ್ಷಣ ನೀಡುವಂತಹ ಸಂಸ್ಥೆಗಳು, ಕೇರಳ ರಾಜ್ಯದಲ್ಲಿರುವ ಡೀಮ್ಡ್ ಯೂನಿವರ್ಸಿಟಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧದ ಪ್ರಕಾರ ಆಯಾಯ ಕಾಲದಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿದಂತಹ ಬೋಧಕವರ್ಗದವರಿರುವಂತಹ, ಆಡಳಿತ ವ್ಯವಸ್ಥೆಯಿರುವಂತಹ ಹಾಗೂ ಮೂಲ ಸೌಕರ್ಯ (ಕಟ್ಟಡಗಳು, ಪ್ರಯೋಗ ಶಾಲೆಗಳು, ಮೊದಲಾದವು) ಇತ್ಯಾದಿಗಳು ಒಳಗೊಂಡು, ಅದಕ್ಕೆ ಮಾತ್ರ ಸೀಮಿತವಾಗದೆ ಮತ್ತು ಸಂಯೋಜನೆಗಾಗಿ ಈ ಅಧಿನಿಯಮದ, ಆರ್ಡಿನನ್ಸ್‌ಗಳ ಅಥವಾ ಶಾಸನಗಳ ಕೆಳಗೆ ನಿಗದಿಪಡಿಸಿದಂತಹ ಮಾನದಂಡಗಳನ್ನು ಅವನ್ನು ಪಾಲಿಸುವುದಿದ್ದಲ್ಲಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಬಹುದಾಗಿದೆ. ನಿರ್ದಿಷ್ಟಪಡಿಸಿದಂತಹ ಮಾನದಂಡಗಳನ್ನು ಪಾಲಿಸುವಂತಹ ಕಾಲೇಜುಗಳನ್ನು (i) ರೆಗ್ಯುಲರ್ ಕಾಲೇಜುಗಳಾಗಿ ಅಥವಾ (ii) ಸ್ವಾಯತ್ತ ಕಾಲೇಜುಗಳಾಗಿ (iii) ಶೈಕ್ಷಣಿಕ ಸ್ವಾಯತ್ತ ಕಾಲೇಜುಗಳಾಗಿ (iv) ಅಥವಾ ಸಂಸ್ಥೆಗಳಾಗಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಬಹುದಾಗಿದೆ. ಈ ಕಾಲೇಜುಗಳ ಅಥವಾ ಸಂಸ್ಥೆಗಳ ಸಂಯೋಜನೆ ಎಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ

ಲಭಿಸಿರುವಂತಹ ವಿದ್ಯಾರ್ಥಿಗಳಿಗೆ ಸಂಬಂಧಿಸಿದ, ಆ ಬ್ಯಾಚಿನ ವಿದ್ಯಾರ್ಥಿಗಳು ಅವರ ಕೋರ್ಸುಗಳನ್ನು ಪೂರ್ತಿಕರಿಸುವವರೆಗೆ ಮಂದುವರಿಸುವುದೆಂದೂ ಅಂತಹ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ಅವರಿಗೆ ಪ್ರವೇಶಾತಿ ನೀಡಿದ ವಿಶ್ವವಿದ್ಯಾಲಯಗಳು ನಡೆಸಬೇಕೆಂದೂ ಅಂತಹ ವಿಶ್ವವಿದ್ಯಾಲಯಗಳಿಗೆ ಪದವಿಗಳನ್ನು, ಸ್ನಾತಕೋತ್ತರ ಪದವಿಗಳನ್ನು, ಡಿಪ್ಲೋಮಗಳನ್ನು ಅಥವಾ ಡಿಸ್ಟಿಂಕ್ಷನ್‌ಗಳನ್ನು ನೀಡಬೇಕೆಂಬ ನಿಬಂಧನೆಗಳಿಗೆ ವಿಧೇಯವಾಗಿ ಈ ಅಧಿನಿಯಮದ ಪ್ರಾರಂಭ ದಿನಾಂಕದಂದು ಮತ್ತು ಅಂದಿನಿಂದ ಡೀಮ್ಡ್ ಯೂನಿವರ್ಸಿಟಿಗಳನ್ನು ಹೊರತುಪಡಿಸಿ, ರಾಜ್ಯದ ಇತರ ವಿಶ್ವವಿದ್ಯಾಲಯದೊಂದಿಗಿರುವಂತಹ ಸಂಸ್ಥೆಗಳ ಸಂಯೋಜನೆಯನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಬಹುದಾಗಿದೆ.

ಆದರೆ ರಾಜ್ಯದಲ್ಲಿರುವ ಇತರ ವಿಶ್ವವಿದ್ಯಾಲಯಗಳು ಅವರ ವಿಭಾಗಗಳಾಗಿಯೋ ಅವರ ಕೋನ್‌ಸ್ಟಿಟ್ಯುವಂಟ್ ಕಾಲೇಜುಗಳಾಗಿಯೋ ನಡೆಸುತ್ತಿರುವಂತಹ ತಾಂತ್ರಿಕ ವಿಜ್ಞಾನ ಶಾಖೆಗಳಲ್ಲಿರುವ ಸಂಸ್ಥೆಗಳು ಹಾಗು ಡೀಮ್ಡ್ ಯೂನಿವರ್ಸಿಟಿ ಹಾಗೂ ಕೇಂದ್ರ ಸರಕಾರವು ಸ್ಥಾಪಿಸಿರುವಂತಹ ನ್ಯಾಶನಲ್ ಇನ್‌ಸ್ಟಿಟ್ಯೂಟ್‌ಗಳ ಅಧೀನದಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳು ಅಥವಾ ಬೋಧನಾ ಸಂಸ್ಥೆಗಳು ಈ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಡುವುದು.

(2) ಸಂಯೋಜನೆ ಅಥವಾ ಅಂಗೀಕಾರಕ್ಕಾಗಿ ಅರ್ಜಿಸಲ್ಲಿಸುವಂತಹ ಶೈಕ್ಷಣಿಕ ಏಜನ್ಸಿಗಳು ಹಾಗೂ ಯಾರ ಸಂಸ್ಥೆಗೆ ಮತ್ತು ಕಾಲೇಜಿಗೆ ಸಂಯೋಜನೆ ಅಥವಾ ಅಂಗೀಕಾರವು ಲಭಿಸಿರುವುದೋ ಅವರು ಈ ಕೆಳಗಿನ ಖಾತರಿಗಳನ್ನು ಕೊಡಬೇಕಾಗಿರುವುದು ಹಾಗೂ ಪಾಲಿಸತಕ್ಕದ್ದಾಗಿರುತ್ತದೆ:—

(i) ಈ ಅಧಿನಿಯುಮದ ಉಪಬಂಧಗಳನ್ನು ಅಥವಾ ರಾಜ್ಯದಲ್ಲಿಯು ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಪಟ್ಟು ರಾಜ್ಯ ವಿಧಾನಸಭೆ ಮಂಜೂರು ಮಾಡಿರುವಂತಹ ಇತರ ಯಾವುದಾದರೂ ಅಧಿನಿಯಮಗಳನ್ನು ಹಾಗು ಅದರ ಅಧೀನದಲ್ಲಿ ಮಾಡಿರುವಂತಹ ನಿಯಮಗಳನ್ನು ಹಾಗೂ ವಿಶ್ವವಿದ್ಯಾಲಯದ ಶಾಸನಗಳನ್ನು ಆರ್ಡಿನನ್ಸುಗಳನ್ನು ರೆಗ್ಯುಲೇಶನ್‌ಗಳನ್ನು ಜಾರಿಯಲ್ಲಿರುವ ಆದೇಶಗಳನ್ನು ನಿರ್ದೇಶಗಳನ್ನು ಇತ್ಯಾದಿಗಳನ್ನು ಪಾಲಿಸತಕ್ಕದ್ದು;

(ii) ಸರಕಾರದಿಂದಲೋ, ವಿಶ್ವವಿದ್ಯಾಲಯದಿಂದಲೋ ಧನ ಸಹಾಯವನ್ನು ಸ್ವೀಕರಿಸುವಂತಹ ಸಂಯೋಜಿಸಲ್ಪಟ್ಟ ಒಂದು ಕಾಲೇಜಿಗೋ ಒಂದು ಕಾಲೇಜುಗಳ ಗುಂಪಿಗೋ ಪ್ರತ್ಯೇಕವಾದ ಗವರ್ನಿಂಗ್ ಬೋಡಿ ಅಥವಾ ಮ್ಯಾನೇಜಿಂಗ್ ಕೌನ್ಸಿಲ್ ಇರತಕ್ಕದ್ದು;

(iii) ಅಧ್ಯಯನ ಕೋರ್ಸುಗಳಿಗೆ ಪ್ರವೇಶ ಪಡೆದಿರುವಂತಹ ವಿದ್ಯಾರ್ಥಿಗಳ ಸಂಖ್ಯೆಯು, ಆಯಾಯ ಸಂಗತಿಯಂತೆ, ವಿಶ್ವವಿದ್ಯಾಲಯ, ಸರಕಾರ, ಅಥವಾ ಕೇಂದ್ರ ಅಥವಾ ರಾಜ್ಯ ಕೌನ್ಸಿಲ್‌ಗಳು, ಹಾಗು ಸಂಬಂಧಪಟ್ಟ ವಿಜ್ಞಾನ ಶಾಖೆಯಲ್ಲಿನ ಅಧಿಕಾರ ಸ್ಥಾನವು ಆಯಾಯ ಕಾಲಗಳಲ್ಲಿ ನಿಗದಿಪಡಿಸುವಂತಹ ಪರಿಮಿತಿಯನ್ನು ಮೀರುವಂತಿಲ್ಲ;

(iv) ಶಾಸನಗಳಿಂದ ಆರ್ಡಿನನ್ಸುಗಳಿಂದ ಹಾಗೂ ರೇಗ್ಯುಲೇಶನ್‌ಗಳಿಂದ ನಿಗದಿಪಡಿಸಿದ ರೀತಿಯಲ್ಲಿ ಪ್ರಕಾರ, ಆಯಾಯ ಸಂಗತಿಯಂತೆ, ಕಟ್ಟಡ, ಪ್ರಯೋಗ ಶಾಲೆಗಳು, ಗ್ರಂಥಾಲಯಗಳು, ಅಧ್ಯಯನ ಮತ್ತು ಸಂಶೋಧನೆಗೆ ಅವಶ್ಯಕವಾದ ಉಪಕರಣಗಳು, ಹೋಸ್ಟೆಲ್ ಹಾಗೂ ಇತರ ಮೂಲ ಸೌಕರ್ಯಗಳಾದಂತಹ ಅನುಯೋಜ್ಯ ಹಾಗೂ ಪರ್ಯಾಪ್ತವಾದ ಭೌತಿಕ ಸೌಕರ್ಯಗಳು ಇರತಕ್ಕದ್ದು;

(v) ಕಾಲೇಜಿನ ಅಥವಾ ಸಂಸ್ಥೆಯ ಆರ್ಥಿಕ ಸಂಪನ್ಮೂಲಗಳು ಅದರ ನಿರಂತರವಾದ ಪರಿಪಾಲನೆಗೂ ಹಾಗೂ ಪ್ರವರ್ತನೆಗೂ ಯಥಾಪ್ರಕಾರ ಬೇಕಾಗಿರುವ ಮುಂಜಾಗರೂಕತೆಗೆ ಪರ್ಯಾಪ್ತವಾಗುವ ಪ್ರಕಾರ ಆಗಿರತಕ್ಕದ್ದು;

(vi) ಸಂಯೋಜಿತ ಕಾಲೇಜುಗಳಲ್ಲಿನ ಅಧ್ಯಾಪಕರ-ಅಧ್ಯಾಪಕೇತರ ನೌಕರರ ಸಂಖ್ಯೆ, ಅರ್ಹತೆಗಳು, ಸಂಯೋಜಿತ ಕಾಲೇಜುಗಳ ನೌಕರರ ವೇತನ ಹಾಗೂ ಉಪಲಬ್ಧ ವ್ಯವಸ್ಥೆಗಳು ವಿಶ್ವವಿದ್ಯಾಲಯ ನಿಗದಿಪಡಿಸಿದ ಪ್ರಕಾರ ಆಗಿರುವುದೆಂದು ಹಾಗು ಅದು ಸಮರ್ಥವಾದ ಅಧ್ಯಯನ ಕೋರ್ಸುಗಳಿಗೆ ಅಥವಾ ಅಧ್ಯಾಪನಕ್ಕೆ, ತರಬೇತಿಗೆ ಅಥವಾ ಸಂಶೋಧನೆಗೋಸ್ಕರ ಯಥಾ ಪ್ರಕಾರ ಪರ್ಯಾಪ್ತವಾಗಿರತಕ್ಕದ್ದು;

(vii) ಸಂಯೋಜಿತ ಕಾಲೇಜಿನ ಎಲ್ಲಾ ಅಧ್ಯಾಪಕರ-ಅಧ್ಯಾಪಕೇತರ ನೌಕರರ ಸೇವೆಗಳು ಮತ್ತು ಸೌಲಭ್ಯಗಳು ಪರೀಕ್ಷೆಗಳನ್ನು ನಡೆಸುವುದಕ್ಕೂ ಹಾಗೂ ವಿಶ್ವವಿದ್ಯಾಲಯದ ಇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಲಭ್ಯಗೊಳಿಸತಕ್ಕದ್ದು;

(viii) ಕುಲಾಧಿಪತಿಗಳು, ಕುಲಪತಿಗಳು ಮತ್ತು ವಿಶ್ವವಿದ್ಯಾಲಯದ ಇತರ ಅಧಿಕಾರಿಗಳು ಅಧಿನಿಯಮದ, ಶಾಸನಗಳ, ಅಧ್ಯಾದೇಶಗಳ, ರೆಗ್ಯುಲೇಶನ್‌ಗಳ ಅಥವಾ ಇದಕ್ಕೆ ಸಂಬಂಧಿಸಿ ರಾಜ್ಯ ವಿಧಾನಸಭೆಯು ಮಂಜೂರು ಮಾಡಿದಂತಹ ಇತರ ಯಾವುದಾದರೂ ಅಧಿನಿಯಮದ ಉಪಬಂಧಗಳಿಗನುಗುಣವಾಗಿ ಅವರಲ್ಲಿ ನಿಹಿತವಾದಂತಹ ಅಧಿಕಾರಗಳನ್ನು ವಿನಿಯೋಗಿಸಿ ಹೊರಡಿಸುವಂತಹ ನಿರ್ದೇಶಗಳನ್ನು ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.

(ix) ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ, ಕಾಲೇಜಿನ ಮ್ಯಾನೇಜ್‌ಮೆಂಟ್ ಪೂರ್ವಾನುಮತಿಯಿಲ್ಲದೆ, ಕಾಲೇಜಿನ ಮ್ಯಾನೇಜ್‌ಮೆಂಟ್ ಅಥವಾ ಒಡೆತನವನ್ನು ಪರಭಾರೆಮಾಡುವಂತಿಲ್ಲ;

(x) ವಿಶ್ವವಿದ್ಯಾಲಯದ ಪೂರ್ವಾನುಮತಿಯಲ್ಲದೆ ಕಾಲೇಜನ್ನು ಅಥವಾ ಸಂಸ್ಥೆಯನ್ನು ಮುಚ್ಚುಗಡೆಮಾಡುವಂತಿಲ್ಲ;

(xi) ಸಂಯೋಜನೆಯನ್ನೋ ಅಂಗೀಕಾರವನ್ನೋ ರದ್ದುಗೊಳಿಸುವುದೋ, ಕಾಲೇಜು ಅಥವಾ ಸಂಸ್ಥೆ ಮುಚ್ಚುವುದೋ ಮಾಡಿದಲ್ಲಿ, ಸರಕಾರ ಅಥವಾ ಯುನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಅನುದಾನವಾಗಿ ನೀಡಿದಂತಹ ಮೊತ್ತವನ್ನು ಬಳಸಿ ನಿರ್ಮಿಸಿದ ಅಥವಾ ಪಡಕೊಂಡ ಕಟ್ಟಡ ಮತ್ತು ಉಪಕರಣಗಳು ಒಳಗೊಂಡು ಕಾಲೇಜಿನ ಅಥವಾ ಸಂಸ್ಥೆಯ ಎಲ್ಲಾ ಆಸ್ತಿಗಳು ಸರಕಾರದಲ್ಲಿ ನಿಹಿತವಾಗಬಹುದೆಂದು.

61. <u>ಅನುಮತಿಗಿರುವ ಪ್ರಕ್ರಿಯೆ</u>.—(1) ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ, ವಿಶೇಷವಾಗಿ ಸೇವಾ ರಹಿತ ಹಾಗೂ ಅಭಿವೃದ್ಧಿಯಾಗದಂತಹ ಪ್ರದೇಶಗಳ ಅವಶ್ಯಕತೆಗಳನ್ನು ಯಥಾಪ್ರಕಾರ ಪರಿಗಣಿಸಿ, ಎಂಜಿನಿಯರಿಂಗ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಸೌಕರ್ಯಗಳನ್ನು ನ್ಯಾಯಯುತ ರೀತಿಯಲ್ಲಿ ವಿಂಗಡಿಸಿ ಶಿಕ್ಷಣದ ಪ್ರಗತಿಗಾಗಿ ಉನ್ನತ ಅಧ್ಯಯನಕ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸುವ ದೂರದೃಷ್ಟಿಯನ್ನೊಳಗೊಂಡ ಒಂದು ಸಮಗ್ರ ಯೋಜನೆಯನ್ನು ವಿಶ್ವವಿದ್ಯಾಲಯವು ಸಿದ್ದಪಡಿಸತಕ್ಕದ್ದಾಗಿದೆ. ಅಂತಹ ಯೋಜನೆಯನ್ನು ಶೈಕ್ಷಣಿಕ ಸಮಿತಿ ಸಿದ್ಧಪಡಿಸಿ, ಕಾರ್ಯನಿರ್ವಾಹಕ ಸಮಿತಿಯ ಅಂಗೀಕಾರವನ್ನು ಪಡೆಯಬೇಕಾಗಿದ್ದು ಹಾಗೂ ಅದನ್ನು ಬೋರ್ಡ್ ಓಫ್ ಗವರ್ನರ್ಸ್ ಮುಂದೆ ಸಮಕ್ಷದಲ್ಲಿ ಮಂಡಿಸತಕ್ಕದ್ದಾಗಿದೆ ಹಾಗು ಪ್ರತಿ ಐದು ವರ್ಷಕ್ಕೊಮ್ಮೆ ನವೀಕರಿಸತಕ್ಕದ್ದಾಗಿದೆ.

(2) ಉನ್ನತ ಅಧ್ಯಯನಕ್ಕೆ ಬೇಕಾದಂತಹ ಒಂದು ಹೊಸ ಕಾಲೇಜು ಅಥವಾ ಸಂಸ್ಥೆಯನ್ನು ತೆರೆಯುವುದಕ್ಕಾಗಿ ಸಲ್ಲಿಸಿರುವಂತಹ ಅರ್ಜಿಯನ್ನು ಅಂತಹ ಯೋಜನೆಗೆ ಅನುಸಾರವಲ್ಲದಿದ್ದಲ್ಲಿ ವಿಶ್ವವಿದ್ಯಾಲಯವು ಪರಿಗಣಿಸತಕ್ಕದ್ದಲ್ಲ.

(3) ಕಾಲೇಜಿಗೆ ಅಥವಾ ಸಂಸ್ಥೆಗೆ ವಿಶ್ವವಿದ್ಯಾಲಯವು ಮೊದಲು ಸಂಯೋಜನೆ ನೀಡಿರದಿದ್ದರೆ, ಆ ಕಾಲೇಜು ಅಥವಾ ಸಂಸ್ಥೆಯು ಯಾವುದೇ ವಿದ್ಯಾರ್ಥಿಗೆ ಪ್ರವೇಶಾತಿಯನ್ನು ನೀಡುವಂತಿಲ್ಲ.

(4) ಒಂದು ಕಾಲೇಜು ಅಥವಾ ಸಂಸ್ಥೆಯನ್ನು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡುವುದಕ್ಕೆ ಬೇಕಾಗಿರುವ ನಿಯಮಗಳು ಮತ್ತು ಪ್ರಕ್ರಿಯೆಗಳು ಶಾಸನಗಳಿಂದ ನಿಗದಿಪಡಿಸುವ ಪ್ರಕಾರ ಆಗಿರತಕ್ಕದ್ದಾಗಿದೆ.

62. <u>ಸಂಯೋಜನೆ ಮಾಡಲ್ಪಟ್ಟ ಕಾಲೇಜಿನ ಗವರ್ನಿಂಗ್ ಬೋಡಿ.</u>—(1) ಸಂಯೋಜನೆ ಮಾಡಲ್ಪಟ್ಟ ಪ್ರತಿಯೊಂದು ಕಾಲೇಜಿಗೆ ಮತ್ತು ಸಂಸ್ಥೆಗೆ ಶಾಸನಗಳಿಂದ ನಿಗದಿಪಡಿಸಬಹುದಾದ ಪ್ರಕಾರ ಸದಸ್ಯರುಗಳನ್ನೊಳಗೊಂಡ ಒಂದು ಪ್ರತ್ಯೇಕವಾದ ಗವರ್ನಿಂಗ್ ಬೋಡಿ ಇರತಕ್ಕದ್ದಾಗಿದೆ. ಒಂದು ಕಾರ್ಪೋರೇಟ್ ಮ್ಯಾನೇಜ್‌ಮೆಂಟ್‌ನ ಅಧೀನದಲ್ಲಿರುವ ಸಂಯೋಜಿಸಲ್ಪಟ್ಟ ಒಂದು ಕಾಲೇಜುಗಳ ಗುಂಪಿಗೆ ಶಾಸನಗಳಿಂದ ನಿಗದಿಪಡಿಸಬಹುದಾದ ಪ್ರಕಾರ ಸದಸ್ಯರುಗಳನ್ನೊಳಗೊಂಡ ಒಂದು ಮ್ಯಾನೇಜಿಂಗ್ ಕೌನ್ಸಿಲ್ ಇರತಕ್ಕದ್ದಾಗಿದೆ.

(2) ಗವರ್ನಿಂಗ್ ಬೋಡಿ ಮ್ಯಾನೇಜಿಂಗ್ ಕೌನ್ಸಿಲ್‌ನ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಥವಾ ಶಾಸನಗಳಿಂದ ನಿಗದಿಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದಾಗಿದೆ.

63. <u>ಸಂಯೋಜನೆಯ ಮುಂದುವರಿಕೆ.</u>—(1) ಸಂಯೋಜನೆ ಮಾಡಲ್ಪಟ್ಟ ಕಾಲೇಜು ಅಥವಾ ಅಂಗೀಕೃತ ಸಂಸ್ಥೆಯು, ಸಂಯೋಜನೆ ಅಥವಾ ಅಂಗೀಕಾರವು ಲಭಿಸಿರುವಂತಹ ಅಧ್ಯಯನ ಕೋರ್ಸುಗಳ ಅಂಗೀಕಾರ ಅಥವಾ ಸಂಯೋಜನೆಯ ಮುಂದುವರಿಕೆಗಾಗಿ, ಸಾಧಾರಣವಾಗಿ ಅಂತಹ ಸಂಯೋಜನೆ ಅಥವಾ ಅಂಗೀಕಾರದ ದಿನಾಂಕವು ಅಂತ್ಯವಾಗುವುದಕ್ಕಿಂತ ಆರು ತಿಂಗಳಿಗಿಂತ ಮೊದಲು ಅರ್ಜಿಸಲ್ಲಿಸಬಹುದಾಗಿದೆ. ಸಂಯೋಜನೆಯನ್ನು ಮುಂದುವರಿಸುವುದಕ್ಕಾಗಿ ಶಾಸನಗಳಿಂದ ನಿಗದಿಪಡಿಸಿರುವಂತಹ ಪ್ರಕ್ರಿಯೆಗಳನ್ನು ವಿಶ್ವವಿದ್ಯಾಲಯವು ಪಾಲಿಸತಕ್ಕದ್ದಾಗಿದೆ.

(2) ಸಂಯೋಜನೆ ಮಾಡಲ್ಪಟ್ಟ ಕಾಲೇಜಿಗೆ ಅಥವಾ ಅಂಗೀಕೃತ ಸಂಸ್ಥೆಗೆ ಹೆಚ್ಚುವರಿ ಅಧ್ಯಯನ ಕೋರ್ಸುಗಳ ಸಂಯೋಜನೆಗಾಗಿ ಅಥವಾ ಅಂಗೀಕಾರಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದ್ದು ಶಾಸನಗಳಿಂದ ಇದಕ್ಕೆ ಸಂಬಂಧಿಸಿದ ನಿಗದಿ ಪಡಿಸಿರುವಂತಹ ಪ್ರಕ್ರಿಯೆಗಳನ್ನು ಅಥವಾ ನಿಯಮಗಳನ್ನು ಪಾಲಿಸುತ್ತಾ ಅದನ್ನು ವಿಶ್ವವಿದ್ಯಾಲಯವು ಪರಿಗಣಿಸಬಹುದಾಗಿದೆ.

(3) ಅತಿ ಕಡಿಮೆ ಆರು ವರ್ಷಗಳ ಸಂಯೋಜಿತ ಕಾಲೇಜಾಗಿ ಕಾಲ ಇರುವಂತಹ ಕಾಲೇಜಿಗೆ ಶಾಶ್ವತ ಸಂಯೋಜನೆಗಾಗಿ ಶಾಸನಗಳಲ್ಲಿ ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದಾದಂತಹ ರೀತಿಯಲ್ಲಿ ಅರ್ಜಿಸಲ್ಲಿಸಬಹುದಾಗಿದೆ ಹಾಗು ವಿಶ್ವವಿದ್ಯಾಲಯವು ಅಂತಹ ಅರ್ಜಿಯನ್ನು ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಪರಿಗಣಿಸತಕ್ಕದ್ದಾಗಿದೆ.

64. ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡುವುದು.—(1) ಒಂದು ವಿಶ್ವವಿದ್ಯಾಲಯ ವಿಭಾಗಕ್ಕೆ ಅಥವಾ ರೆಗ್ಯುಲರ್ ಕಾಲೇಜಾಗಿ ಸಂಯೋಜಿಸಲ್ಪಟ್ಟಿರುವ ಸಂಸ್ಥೆಗೆ ಶೈಕ್ಷಣಿಕ ಸ್ವಾಯತ್ತತೆಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಶೈಕ್ಷಣಿಕ ಸ್ವಾಯತ್ತತೆಯಿರುವ ಸಂಸ್ಥೆಗಳಿಗೆ ಅಥವಾ ಕಾಲೇಜುಗಳಿಗೆ ಅದರದ್ದಾದ ಪ್ರಾಧಿಕಾರ ಅಥವಾ ನಿಕಾಯಗಳನ್ನು ರೂಪೀಕರಿಸಬಹುದಾಗಿದ್ದೋ ಮತ್ತು ಅಧಿಕಾರಗಳನ್ನು ವಿನಿಯೋಗಿಸುವುದು ಹಾಗು ಕಾರ್ಯಗಳನ್ನು ನಿರ್ವಹಿಸುವುದು, ಮಾಡಬಹುದಾಗಿದೆ ಹಾಗೂ ಸಂಸ್ಥೆಯು ಶೈಕ್ಷಣಿಕ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಡೆಸಬಹುದಾಗಿದೆ. ಪಾಂಡಿತ್ಯ ಹಾಗೂ ಉತ್ಕೃಷತೆಯನ್ನು ಹೊಂದಲು ಸಹಾಯಕವಾಗುವಂತಹ ಒಂದು ಬೌದ್ಧಿಕ ವಾತಾರಣವನ್ನು ಸೃಷ್ಟಿಸುವುದಕ್ಕೋ ಅಭಿವೃದ್ಧಿಪಡಿಸುವುದಕ್ಕೋ ಅಗತ್ಯವಿರುವಂತಹ ಶೈಕ್ಷಣಿಕ ಸ್ವಾತಂತ್ರ್ಯ ಹಾಗೂ ಪಾಂಡಿತ್ಯವನ್ನು ಅಧ್ಯಾಪಕರಲ್ಲೂ ಹಾಗೂ ವಿದ್ಯಾರ್ಥಿಗಳಲ್ಲೂ ಪ್ರೋತ್ಸಾಹಿಸಬೇಕೆಂಬ ಉದ್ದೇಶದೊಂದಿಗೆ ಶೈಕ್ಷಣಿಕ ಸ್ವಾಯತ್ತೆಯಿರುವ ವಿಭಾಗಕ್ಕೆ, ಸಂಸ್ಥೆಗೆ ಅಥವಾ ಕಾಲೇಜಿಗೆ ಅದರದ್ದೇಯಾದ ಸ್ವಂತ ಅಧ್ಯಯನ ಕೋರ್ಸುಗಳನ್ನು ನಿಗದಿಪಡಿಸಬಹುದಾಗಿದೆ ಹಾಗು ಅದರದ್ದೇಯಾದ ಸ್ವಂತ ಬೋಧನಾ ಕ್ರಮವನ್ನು ಆವಿಷ್ಕರಿಸಬಹುದಾಗಿದೆ ಮತ್ತು ಅಲ್ಲಿ ಕಲಿಯುವ ಅಂತಹ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ಮತ್ತು ಟೆಸ್ಟ್‌ಗಳನ್ನು ನಡೆಸಬಹುದಾಗಿದೆ. ಅಂತಹ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳಿಗೆ ಪದವಿಗಳನ್ನು ಮತ್ತು ಬಿರುದುಗಳನ್ನು ವಿಶ್ವವಿದ್ಯಾಲಯವು ನೀಡತಕ್ಕದ್ದಾಗಿದೆ.

(2) ವಿಶ್ವವಿದ್ಯಾಲಯದೊಂದಿಗೆ ಸಂಯೋಜಿಸಲ್ಪಟ್ಟಿರುವಂತಹ ಯಾವುದಾದರೂ ಕಾಲೇಜುಗಳಿಗೆ ಶೈಕ್ಷಣಿಕ ಸ್ವಾಯತ್ತಾಧಿಕಾರವನ್ನು ನೀಡುವುದಕ್ಕೆ, 1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯಮ (1974ರ 17)ದ ಅಧ್ಯಾಯ VIII ಬಿ ಯಲ್ಲಿ ಒಳಗೊಂಡಿರುವ ಉಪಬಂಧಗಳು, ಯುಕ್ತವಾದ ಮಾರ್ಪಾಟುಗಳೊಂದಿಗೆ, ಅನ್ವಯವಾಗುವುದು ಹಾಗು ಪ್ರಸ್ತುತ ಅಧ್ಯಾಯದಲ್ಲಿ ಸ್ವಾಯತ್ತಾಧಿಕಾರ ನೀಡುವುದಕ್ಕೆ ಸಂಬಂಧಿಸಿ ಸ್ವಾಯತ್ತ ಅಂಗೀಕಾರ ಸಮಿತಿಯಲ್ಲಿ ಅಂಗೀಕಾರ ಸಮಿತಿಯಲ್ಲಿ ವಿಶ್ವವಿದ್ಯಾಲಯದ ಕುಲಪತಿಯವರು ಕೂಡ ಒಳಗೊಳ್ಳುವುದಲ್ಲದೆ ಪ್ರಸ್ತುತ ಅಧ್ಯಾಯದಲ್ಲಿ ನಿರ್ವಚಿಸಿರುವ ಪದಗಳು ಮತ್ತು ಪದ ಪ್ರಯೋಗಳಿಗೆ ಪ್ರಸ್ತುತ ಅಧಿನಿಯಮದಲ್ಲಿ ನಿರ್ವಚಿಸಿದ ಅದೇ ಅರ್ಥವು ಇರುವುದಾಗಿರುತ್ತದೆ.

65. ಸಂಯೋಜನೆಯ ಹಿಂತೆಗೆಯುವಿಕೆ.—(1) ಒಂದು ಸಂಯೋಜಿಸಲ್ಪಟ್ಟ ಕಾಲೇಜು, ಅಥವಾ ಅಂಗೀಕೃತ ಸಂಸ್ಥೆಯೋ, ಈ ಅಧಿನಿಯಮದ ಅಥವಾ ಶಾಸನಗಳಲ್ಲಿ ವ್ಯವಸ್ಥೆ ಮಾಡಿರುವ ಸಂಯೋಜನೆ ಅಥವಾ ಅಂಗೀಕಾರ ನೀಡುವುದಕ್ಕೆ ಸಂಬಂಧಿಸಿ ಮಾಡಿದಂತಹ ಷರತ್ತುಗಳನ್ನು ಪಾಲಿಸುವುದರಲ್ಲಿ ಲೋಪವೆಸಗಿರುವುದೋ, ವಿಶ್ವವಿದ್ಯಾಲಯದ

ಅಥವಾ ರಾಜ್ಯ ಸರಕಾರದ ನಿರ್ದೇಶಗಳನ್ನು ಪಾಲಿಸುವಲ್ಲಿ ಲೋಪವೆಸಗಿರುವುದೋ, ಲೋಕಲ್ ಗವರ್ನಿಂಗ್ ಬೋಡಿಯನ್ನು ಅಥವಾ ಮ್ಯಾನೇಜಿಂಗ್ ಕೌನ್ಸಿಲ್‌ನ್ನು ಈ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ಉಪಬಂಧಿಸಿದಂತೆ ಸರಿಯಾದ ರೀತಿಯಲ್ಲಿ ಕಾರ್ಯವೆಸಗಲು ಅನುಮತಿಸದಿದ್ದಲ್ಲಿಯೋ ಅದು ಕಾಲೇಜನ್ನು ಅಥವಾ ಅಂಗೀಕೃತ ಸಂಸ್ಥೆಯನ್ನು ನಡೆಸುತ್ತಿರುವುದು ವಿಶ್ವವಿದ್ಯಾಲಯದ ಹಿತ್ತಾಸಕ್ತಿಗೆ ಅಥವಾ ಅಧಿನಿಯಮದಲ್ಲಿ ಅಥವಾ ಶಾಸನಗಳಲ್ಲಿ ನಿಗದಿಪಡಿಸಿರುವಂತಹ ಮಾನದಂಡಗಳಿಗೆ ವಿರುದ್ದವಾಗಿಯೋ ಆಗಿದ್ದಲ್ಲಿ, ವಿಶ್ವವಿದ್ಯಾಲಯವು, ಅಂತಹ ಸಂಸ್ಥೆಗಳಿಗೆದುರಾಗಿ ಈ ಅಧಿನಿಯಮದ ಪ್ರಕಾರ ಕಾಲೇಜು ಅಥವಾ ಸಂಸ್ಥೆಗೆ ನೀಡಿರುವಂತಹ ಸಂಯೋಜನೆಯನ್ನು ಹಿಂತೆಗೆಯುವುದು ಒಳಗೊಂಡು ಕ್ರಮಗಳನ್ನು, ಅಂತಹ ಸಂಯೋಜನೆಯನ್ನು ಹಿಂತೆಗೆಯಲಿಕ್ಕಾಗಿರುವ ಕಾರಣಗಳನ್ನು ಕಾಲೇಜಿನ ಅಥವಾ ಸಂಸ್ಥೆಯ, ಕಾಲೇಜು ಅಥವಾ ಸಂಸ್ಥೆಯು ನಡೆಸುವ ವಿದ್ಯಾಭ್ಯಾಸ ಏಜೆನ್ಸಿಯ ಪ್ರಾಂಶುಪಾಲರುಗಳಿಗೆ ನೋಟೀಸು ಮುಖೇನ ತಿಳಿಸಿದ ನಂತರ ಕಾಲೇಜಿನ ಅಥವಾ ವಿದ್ಯಾಭ್ಯಾಸ ಏಜನ್ಸಿಯ ಪ್ರಾಂಶುಪಾಲರು ನೀಡಿದ ಪ್ರತ್ಯುತ್ತರವನ್ನು ಪರಿಗಣಿಸಿದ ನಂತರವು ಕೈಗೊಳ್ಳಬಹುದಾಗಿದೆ.

(2) ಸಂಯೋಜನೆಯನ್ನು ಹಿಂತೆಗೆಯುವುದಕ್ಕಿರುವ ನಿಯಮಗಳು ಮತ್ತು ಪ್ರಕ್ರಿಯೆಗಳು ಶಾಸನಗಳಿಂದ ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಆಗಿರತಕ್ಕದ್ದು.

66. ಕಾಲೇಜುಗಳ ಮುಚ್ಚುವಿಕೆ ಮುಂತಾದವುಗಳು.— (1) ವಿಶ್ವವಿದ್ಯಾಲಯದ ಹಾಗೂ ರಾಜ್ಯ ಸರಕಾರದ ಪೂರ್ವಾನುಮತಿಯಿಲ್ಲದೆ ಕಾಲೇಜನ್ನು ಅಥವಾ ಅಂಗೀಕೃತ ಸಂಸ್ಥೆಯನ್ನು ಮುಚ್ಚಲು ಒಂದು ಸಂಯೋಜನೆ ಮಾಡಲ್ಪಟ್ಟ ಕಾಲೇಜಿನ ಅಥವಾ ಅಂಗೀಕೃತ ಸಂಸ್ಥೆಯ ಯಾವುದೇ ಮ್ಯಾನೇಜ್‌ಮೆಂಟನ್ನು ಅನುಮತಿಸಲಾಗುವುದಿಲ್ಲ.

(2) ಸಂಯೋಜನೆ ಮಾಡಲ್ಪಟ್ಟ ಒಂದು ಕಾಲೇಜನ್ನು ಮುಚ್ಚಲು ಬೇಕಾದ ಪ್ರಕ್ರಿಯೆಗಳು ಶಾಸನಗಳಲ್ಲಿ ನಿಗದಿಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದಾಗಿದೆ.

## ಅಧ್ಯಾಯ IX

## ದಾಖಲಾತಿ, ಪದವಿಗಳು ಮತ್ತು ಘಟಿಕೋತ್ಸವ

67. ಬೋಧನೆ, ತರಬೇತಿ ಹಾಗು ಸಂಶೋಧನೆ.—ಎಲ್ಲಾ ಪದವಿಗಳ ಅಥವಾ ಸ್ನಾತಕೋತ್ತರ ಪದವಿಗಳಿಗೆ ಬೋಧನೆ, ತರಬೇತಿ ಹಾಗೂ ಸಂಶೋಧನೆಯು ಸಾಧರಣವಾಗಿ ವಿಶ್ವವಿದ್ಯಾಲಯದಲ್ಲಿ, ಸಂಯೋಜಿಸಲ್ಪಟ್ಟ ಕಾಲೇಜಿನಲ್ಲಿ ಅಥವಾ ಅಂಗೀಕೃತ ಸಂಸ್ಥೆಯಲ್ಲಿಯೇ ಶಾಸನಗಳಿಂದ ನಿಗದಿಪಡಿಸಬಹುದಾದ ರೀತಿಯಲ್ಲಿ ನಡೆಸತಕ್ಕದ್ದಾಗಿದೆ.

68. ವಿದ್ಯಾರ್ಥಿಗಳ ದಾಖಲಾತಿ.—ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ದಾಖಲಾತಿ ಮಾಡಬೇಕಾದ ಒಂದು ವ್ಯಕ್ತಿಗೆ ಶಾಸನಗಳಿಂದ ನಿಗದಿಪಡಿಸಬಹುದಾದಂತಹ ಅರ್ಹತೆಗಳು ಇರತಕ್ಕದಾಗಿದ್ದು ಹಾಗು ಅಂತಹ ಷರತ್ತುಗಳನ್ನು ನೆರವೇರಿಸಿರತಕ್ಕದ್ದಾಗಿರುತ್ತದೆ.

69. ಶಿಸ್ತಿಗೆ ಸಂಬಂಧಿಸಿದ ಅಧಿಕಾರಗಳು ಹಾಗೂ ವಿದ್ಯಾರ್ಥಿಗಳಲ್ಲಿರಬೇಕಾದ ಶಿಸ್ತು.—(1) ಶಿಸ್ತಿಗೆ ಸಂಬಂಧಿಸಿದ ಮತ್ತು ವಿಶ್ವವಿದ್ಯಾಲಯದ ವಿಭಾಗದ ಮತ್ತು ವಿಶ್ವವಿದ್ಯಾಲಯ ನಡೆಸುತ್ತಿರುವ ಸಂಸ್ಥೆಗಳಲ್ಲಿನ ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಶಿಸ್ತುಕ್ರಮಗಳಿಗೆ ಸಂಬಂಧಿಸಿರುವ ಎಲ್ಲಾ ಅಧಿಕಾರಗಳು ಕುಲಪತಿಯವರಲ್ಲಿ ನಿಹಿತವಾಗಿರುವುದಾಗಿದೆ.

(2) ಕುಲಪತಿಯವರಿಗೆ, ಆದೇಶದ ಮೂಲಕ, ಈ ಅಧಿನಿಯಮದ ಪ್ರಕಾರ ಅವರಿಗೆ ಉಚಿತವೆಂದು ತೋರುವ, ಅವರ ಎಲ್ಲಾ ಅಥವಾ ಯಾವುದಾದರೂ ಅಧಿಕಾರಗಳನ್ನು ಇದಕ್ಕಾಗಿ ಅವರು ನಾಮನಿರ್ದೇಶಿಸುವ ಅಥವಾ ಗೊತ್ತುಮಾಡುವಂತಹ ಇತರ ಅಧಿಕಾರಿಗಳಿಗೆ ಅಥವಾ ನಿಕಾಯಕ್ಕೆ ವಹಿಸಿಕೊಡಬಹುದಾಗಿದೆ.

## ಅಧ್ಯಾಯ X

## **ಪರಿವರ್ತನಾ ಉಪಬಂಧಗಳು**

70. ಪ್ರಥಮ ಪ್ರಾಧಿಕಾರಗಳ ನಾಮನಿರ್ದೇಶಗಳು.—ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದ ಪ್ರಥಮ ಪ್ರಾಧಿಕಾರಗಳನ್ನು, ಈ ಅಧಿನಿಯಮದ ಪ್ರಾಬಲ್ಯ ದಿನಾಂಕದ ನಂತರ ಆದಷ್ಟು ಬೇಗನೆ ಕುಲಾಧಿಪತಿಗಳು ನಾಮನಿರ್ದೇಶ ಮಾಡತಕ್ಕದ್ದು ಹಾಗು ಆ ರೀತಿನಾಮನಿರ್ದೇಶ ಮಾಡುವ ದಿನಾಂಕದಿಂದ ಒಂದು ವರ್ಷಗಳ ಕಾಲಾವಧಿಗೆ ಅಥವಾ ಈ ಅಧಿನಿಯಮದ ಉಪಬಂಧಗಳಿಗನುಗುಣವಾಗಿ ಪ್ರಸ್ತುತ ಪ್ರಾಧಿಕಾರಗಳು ರೂಪೀಕರಿಸಲ್ಪಡುವವರೆಗೆ ಅಥವಾ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಯಬಹುದಾಗಿದೆ.

71. ಪ್ರಥಮ ಶಾಸನಗಳು ಮತ್ತು ಆರ್ಡಿನನ್ಸ್‌ಗಳು.—ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದ ಪ್ರಥಮ ಶಾಸನಗಳನ್ನು ಮತ್ತು ಪ್ರಥಮ ಆರ್ಡಿನನ್ಸ್‌ಗಳನ್ನು ಸರಕಾರವು ಮಾಡತಕ್ಕದ್ದಾಗಿದೆ.

72. ಪ್ರಸ್ತುತ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ವಿಷಯಗಳಿಗೆ ಸಂಬಂಧಿಸಿ.—(1) ಈ ಅಧಿನಿಯಮದಲ್ಲಿ ಅಥವಾ ರಾಜ್ಯದ ವಿಶ್ವವಿದ್ಯಾಲಯ ಅಧಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, 60ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ ಸಂಯೋಜನೆ ಪ್ರಕ್ರಿಯೆಯ

ಮೂಲಕ ಈ ವಿಶ್ವವಿದ್ಯಾಲಯಕ್ಕೆ ಒಂದು ಪ್ರತ್ಯೇಕ ಸಂಸ್ಥೆಯನ್ನು ಸಂಯೋಜನೆ ಮಾಡಿದ ದಿನಾಂಕದ ನಿಕಟಪೂರ್ವದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯದ ಯಾವುದಾದರೂ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮ ಅಥವಾ ಪ್ರಮಾಣಪತ್ರಕ್ಕಾಗಿ ಆ ಸಂಸ್ಥೆಯಲ್ಲಿ ಕಲಿಯುತ್ತಿದ್ದ ಯಾವುದೇ ವಿದ್ಯಾರ್ಥಿಗೂ ಸಂಬಂಧಪಟ್ಟ ವಿಶ್ವವಿದ್ಯಾಲಯದ ಪರೀಕ್ಷೆ ಬರೆಯುವುದಕ್ಕೆ ಹಕ್ಕು ಇರುವುದಾಗಿದೆ ಹಾಗೂ ಆತನು ಅಂತಹ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೆ, ಆಯಾಯ ಸಂಗತಿಯಂತೆ, ಈ ಅಧಿನಿಯಮದ ಪ್ರಕಾರ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಕ್ಕೆ ಸಮಾನವಾದ ಪದವಿ, ಸ್ನಾತಕೋತರ ಪದವಿ, ಡಿಪ್ಲೋಮ ಅಥವಾ ಪ್ರಮಾಣ ಪತ್ರವನ್ನು ಪಡೆಯಲು ಅರ್ಹನಾಗಿರುವನು.

(2) ಈ ಅಧಿನಿಯಮದ ಅಥವಾ ಅದರ ಪ್ರಕಾರ ಮಾಡಿರುವಂತಹ ಶಾಸನಗಳಲ್ಲಿ ಅಥವಾ ರೆಗ್ಯುಲೇಶನ್‌ಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವಂತಹ ಹಾಗು ಈ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿಸಲ್ಪಟ್ಟಿರುವಂತಹ ಯಾವುದೇ ಕಾಲೇಜಿನ ಯಾವುದೇ ವಿದ್ಯಾರ್ಥಿಗೆ, ಆಯಾಯ ಸಂಗತಿಯಂತೆ, ಆತನ ಕೋರ್ಸನ್ನು ಮತ್ತು ಅದಕ್ಕೆ ಬೇಕಾದಂತಹ ಸಿದ್ದತೆಯನ್ನು ಪೂರ್ಣಗೊಳಿಸಲು ಅನುಮತಿಯನ್ನು ನೀಡತಕ್ಕದ್ದಾಗಿದೆ ಮತ್ತು ಈ ಅಧಿನಿಯಮದ ಅಧೀನದಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯವು ಆತನು ಪ್ರಸ್ತುತ ಅಧ್ಯಯನ ಕೋರ್ಸನ್ನು ಪೂರ್ತಿಮಾಡುವವರೆಗೆ ಅಂತಹ ವಿದ್ಯಾರ್ಥಿಗಳಿಗಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಪಠ್ಯಕ್ರಮಕ್ಕೆ ಅನುಗುಣವಾಗಿ ಪರೀಕ್ಷೆಯನ್ನು ನಡೆಸುವುದಕ್ಕಾಗಿರುವ ವ್ಯವಸ್ಥೆಗಳನ್ನು ಮಾಡತಕ್ಕದ್ದಾಗಿರುತ್ತದೆ.

73. <u>ಸೆಂಟರ್ ಫೋರ್ ಎಂಜಿನಿಯರಿಂಗ್ ರಿಸರ್ಚ್ ಎಂಡ್ ಡೆವಲಪ್‌ಮೆಂಟ್‌ನ ವಿಸರ್ಜನೆ.</u>—ತತ್ಕಾಲ ಜಾರಿಯಲ್ಲಿರುವ ಇತರ ಯಾವುದಾದರೂ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, 1955ರ ತಿರುವಾಂಕೂರು-ಕೊಚ್ಚಿ ಸಾಹಿತ್ಯ, ವೈಜ್ಞಾನಿಕ ಮತ್ತು ಧಾರ್ಮಿಕ ಸಂಘಗಳ ನೋಂದಣಿ ಅಧಿನಿಯಮದ ಪ್ರಕಾರ ನೋಂದಣಿ ಮಾಡಿದ ಒಂದು ಸಂಘವಾದ ಸೆಂಟರ್ ಫೋರ್ ಎಂಜಿನಿಯರಿಂಗ್ ರಿಸರ್ಚ್ ಆಂಡ್ ಡೆವೆಲಪ್‌ಮೆಂಟ್‌ನ್ನು (ನೋಂದಣಿ ಸಂಖ್ಯೆ ಟಿ. 1872/09 ದಿನಾಂಕ 16-12-2009) ಈ ಮೂಲಕ ವಿಸರ್ಜಿಸಲಾಗಿದೆ ಮತ್ತು ಅದರ ಎಲ್ಲಾ ಆಸ್ತಿಗಳನ್ನು ಮತ್ತು ಬಾಧ್ಯತೆಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದಾಗಿದ್ದು ಮತ್ತು ಸೆಂಟರ್ ಫೋರ್ ಎಂಜಿನಿಯರಿಂಗ್ ರಿಸರ್ಚ್ ಆಂಡ್ ಡೆವೆಲಪ್‌ಮೆಂಟ್ ಆಗಿ ಕಾರ್ಯವೆಸಗತಕ್ಕದ್ದಾಗಿದೆ.

74. <u>ಪರಿವರ್ತನಾ ಕಾಲ ಉಪಬಂಧಗಳು.</u>—(1) ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಆರು ತಿಂಗಳಿನ ಒಳಗಾಗಿಯೋ, ಅಧಿಸೂಚನೆಯ ಮೂಲಕ ಸರಕಾರವು ನಿರ್ದೇಶಿಸಬಹುದಾದಂತಹ, ಎರಡು ವರ್ಷವನ್ನು ಮೀರದ ಕಾಲಾವಧಿಯೊಳಗೋ, ವಿಶ್ವವಿದ್ಯಾಲಯದ ಬೋರ್ಡ್ ಓಫ್ ಗವರ್ನರ್ಸ್‌ನ್ನು ಹಾಗೂ ಇತರ ಪ್ರಾಧಿಕಾರಗಳನ್ನು ರೂಪೀಕರಿಸುವುದಕ್ಕಾಗಿರುವ ವ್ಯವಸ್ಥೆಗಳನ್ನು ಮಾಡುವುದು ಈ ಅಧಿನಿಯಮದ ಪ್ರಕಾರ ನಿಯಮಿಸಲ್ಪಟ್ಟ ಮೊದಲ ಕುಲಪತಿಯವರ ಕರ್ತವ್ಯವಾಗಿರುತ್ತದೆ.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಅಧಿನಿಯಮದ ಪ್ರಕಾರ ಯಥಾಪ್ರಕಾರ ಒಂದು ಪ್ರಾಧಿಕಾರವನ್ನು ರೂಪೀಕರಿಸುವವರೆಗೆ, ಈ ಅಧಿನಿಯಮದ ಪ್ರಕಾರದ ಪ್ರಾಧಿಕಾರದ ಯಾವುದಾದರೂ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಿನಿಯೋಗಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಪ್ರಥಮ ಕುಲಪತಿಯವರು ಯಾವುದಾದರೂ ಅಧಿಕಾರಿಯನ್ನು ಅಥವಾ ಯಾವುದಾದರೂ ಸಮಿತಿಯನ್ನು ತಾತ್ಕಾಲಿಕವಾಗಿ ನಿಯಮಿಸಬಹುದಾಗಿದೆ.

(3) ಈ ಅಧಿನಿಯುವು ಅಥವಾ ಅದರ ಅಧೀನದಲ್ಲಿ ಮಾಡಿರುವಂತಹ ಶಾಸನಗಳಲ್ಲಿ ಆರ್ಡಿನನ್ಸುಗಳಲ್ಲಿ ಅಥವಾ ರೆಗ್ಯುಲೇಶನ್‌ಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೂ ವಿಶ್ವವಿದ್ಯಾಲಯಗಳಲ್ಲಿ ಎಂಜಿನೀಯರಿಂಗ್ ಪದವಿಗಾಗಿ ಕಲಿಯುತ್ತಿದ್ದ ಯಾವುದೇ ವಿದ್ಯಾರ್ಥಿಗೆ, ಆತನು ಅಂತಹ ಪರೀಕ್ಷೆಯಲ್ಲಿ ತೇರ್ಗಡೆಯಾದ್ದಲ್ಲಿ ಆಯಾಯಾ ವಿಶ್ವವಿದ್ಯಾಲಯವು ಎಂಜಿನೀಯರಿಂಗ್ ಪದವಿಯನ್ನು ನೀಡತಕ್ಕದ್ದಾಗಿದೆ.

75. <u>ಕ್ಲಿಷ್ಟತೆಗಳ ನಿವಾರಣೆ.</u>—ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದಾದರೂ ಕ್ಲಿಷ್ಟತೆಗಳು ಉಂಟಾದ್ದಲ್ಲಿ, ಸರಕಾರಕ್ಕೆ ಗಜೆಟ್ ಆದೇಶ ಮುಖೇನ ಅಂತಹ ಕ್ಲಿಷ್ಟತೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದೋ ಉಚಿತವೆಂದೋ ತೋರುವಂತಹ ಈ ಅಧಿನಿಯುಮದ ಉಪಬಂಧಗಳಿಗೆ ವಿರುದ್ಧವಲ್ಲದಂತಹ ಯಾವುದೇ ಕ್ರಮಗಳನ್ನು ಮಾಡಬಹುದಾಗಿದೆ:

ಆದರೆ, ಈ ಅಧಿನಿಯಮವು ಪ್ರಾಬಲ್ಯಕ್ಕೆ ಬಂದ ದಿನಾಂಕದಿಂದ ಎರಡು ವರ್ಷಗಳು ಕಳೆದ ನಂತರ ಈ ವಿಭಾಗದ ಪ್ರಕಾರ ಯಾವುದೇ ಆದೇಶವನ್ನು ಹೊರಡಿಸುವಂತಿಲ್ಲ.

76. ಸಿಂಧುತ್ವ.—(1) 2015ರ ಕೇರಳ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಅಧ್ಯಾದೇಶ (2015ರ 4) (ಇನ್ನು ಮುಂದಕ್ಕೆ ಪ್ರಸ್ತುತ ಅಧ್ಯಾದೇಶವೆಂದು ಉಲ್ಲೇಖಿಸಲ್ಪಡುವುದು)ವು ಪ್ರಾಬಲ್ಯದಲ್ಲಿಲ್ಲದಿದ್ದರೂ ಕೂಡ.—

(ಎ) ಪ್ರಸ್ತುತ, ಅಧ್ಯಾದೇಶದ ಪ್ರಕಾರ ಅಥವಾ ಮಾಡಲಾಗಿದೆಯೆಂದು ಭಾವಿಸಲ್ಪಡುವಂತಹ ಯಾವುದಾದರೂ ವಿಷಯ, ಕೈಗೊಂಡ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸಲ್ಪಡುವಂತಹ ಯಾವುದಾದರೂ ಕ್ರಮವೋ ಈ ಅಧಿನಿಯಮದ ಪ್ರಕಾರ ಮಾಡಿದುದಾಗಿದೆಯೆಂದೋ ಅಥವಾ ಕೈಗೊಂಡದಾಗಿದೆಯೆಂದೋ ಭಾವಿಸತಕ್ಕದ್ದಾಗಿದೆ;

(ಬಿ) ಪ್ರಸ್ತುತ, ಅಧ್ಯಾದೇಶಕ್ಕೆ ಪ್ರಾಬಲ್ಯವು ಇಲ್ಲವಾದ ನಂತರ ಹಾಗೂ ಈ ಅಧಿನಿಯಮದ ಗಜೆಟ್‌ನಲ್ಲಿ ಅಧಿಸೂಚಿಸಲ್ಪಡುವ ದಿನಾಂಕಕ್ಕಿಂತ ಮೊದಲು ಮಾಡಿದಂತಹ ಯಾವುದಾದರು ಕ್ರಮವೋ, ಕೈಗೊಂಡ ಯಾವುದೇ ಕ್ರಮವೋ ಪ್ರಸ್ತುತ ಅಧ್ಯಾದೇಶಕ್ಕೆ ಪ್ರಾಬಲ್ಯ ಇಲ್ಲದಾಗದಿರುತ್ತಿದ್ದಲ್ಲಿ, ಪ್ರಸ್ತುತ ಅಧ್ಯಾದೇಶಕ್ಕನುಗುಣವಾಗಿ ಮಾಡಿರುವುದಾಗಿಯೋ ಅಥವಾ ಕೈಗೊಂಡಿರುವುದಾಗಿದೆ ಎಂಬಂತೆ, ಈ ಅಧಿನಿಯಮದ ಪ್ರಕಾರ ಮಾಡಿದುದಾಗಿಯೋ ಅಥವಾ ಕೈಗೊಂಡಿರುವುದಾಗಿಯೋ ಭಾವಿಸತಕ್ಕದ್ದಾಗಿದೆ;

(2) ಪ್ರಸ್ತುತ ಅಧ್ಯಾದೇಶಕ್ಕೆ ಪ್ರಾಬಲ್ಯವಿಲ್ಲದಾಗಿರುವುದು,—

(ಎ) ಅದರಡಿಯಲ್ಲಿ ಪಡೆದಂತಹ, ಲಭಿಸಿದಂತಹ, ಪ್ರಾಪ್ತವಾದಂತಹ ಯಾವುದಾದರೂ ಹಕ್ಕು, ವಿಶೇಷ ಪ್ರಾತಿನಿಧ್ಯ, ಋಣ ಅಥವಾ ಬಾಧ್ಯತೆಯನ್ನು ಬಾಧಿಸುವಂತಹದ್ದಲ್ಲ; ಅಥವಾ

(ಬಿ) ಅಂತಹ ಯಾವುದಾದರೂ ಹಕ್ಕಿಗೆ, ವಿಶೇಷ ಪ್ರಾತಿನಿಧ್ಯಕ್ಕೆ ಋಣಕ್ಕೆ ಅಥವಾ ಬಾಧ್ಯತೆಗೆ ಸಂಬಂಧಿಸಿದಂತಹ ಯಾವುದಾದರೂ ಕಾನೂನು ಕ್ರಮಗಳಿಗೆ ಅಥವಾ ಪರಿಹಾರಗಳಿಗೆ ಬಾಧಿಸುವಂತಹದ್ದಲ್ಲ ಹಾಗೂ ಅಂತಹ ಯಾವುದೇ ಕಾನೂನು ಕ್ರಮಗಳನ್ನು ಅಥವಾ ಪರಿಹಾರಗಳನ್ನು ಈ ಅಧಿನಿಯಮದ ಉಪಬಂಧಗಳಿಗೆ ವ್ಯತಿರಿಕ್ತವಾಗಿರದಿದ್ದಲ್ಲಿ ಪ್ರಾರಂಭಿಸುವುದು, ಮುಂದುವರಿಸುವುದು ಅಥವಾ ಕಾರ್ಯಗತಗೊಳಿಸುವುದು ಮಾಡಬಹುದಾಗಿದೆ.

**ಅನುಸೂಚಿ**

[7 (3), 74(3) ಎಂಬೀ ವಿಭಾಗಗಳನ್ನು ನೋಡರಿ]

| ಕ್ರಮ ಸಂಖ್ಯೆ | ವಿಶ್ವವಿದ್ಯಾಲಯಗಳ ಹೆಸರು ಮತ್ತು ಕೇಂದ್ರ ಸ್ಥಾನ |
|---|---|
| (1) | (2) |
| 1 | ಕೇರಳ ವಿಶ್ವವಿದ್ಯಾಲಯ, ತಿರುವನಂತಪುರಂ. |
| 2 | ಕೋಝಿಕೋಡ್ ವಿಶ್ವವಿದ್ಯಾಲಯ, ಕೋಝಿಕೋಡ್. |
| 3 | ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ, ಕೋಟ್ಟಯಂ. |
| 4 | ಕೊಚ್ಚಿ ವಿಜ್ಞಾನ-ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ, ಕೊಚ್ಚಿ. |
| 5 | ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ, ಕಾಲಡಿ. |
| 6 | ಕಣ್ಣೂರು ವಿಶ್ವವಿದ್ಯಾಲಯ, ಕಣ್ಣೂರು. |